ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡವಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ :46-ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2001ರಂದುಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್'' ಇಲಾಖೆಯ ಸೇವೆಗಳಿಗೆ ಸಂದಾಯ. ಮಾಡುವಲ್ಲಿ ಬರತಕ್ಕಂಥ ವೆಚ್ಚ ವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,076,84,50,000 ರೂಪಾಯಿಗಳಿಂದ ಮೀರದ ಮೊತ್ತವನ್ನು (ಲೇನುಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''.

ಬೇಡಿಕೆ ಸಂಖ್ಯೆ. 1
ಕೃಷಿ (ಬಯಲು ಸೀಮೆ ಅಭಿವೃದ್ಧಿ ಮಂಡಳಿ ಹೊರತುಪಡಿಸಿ)
ಇಲಾಖೆ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

+ಶ್ರೀ ಟಿ. ಬಿ. ಜಯಚಂದ್ರ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ವಿರೋಧಪಕ್ಷದಲ್ಲಿ ಕುಳಿತಿರುವಂತಹ ಅನೇಕ ಸದಸ್ಯರು ಬೇಡಿಕೆಗಳ ಬಗ್ಗೆ ಮಾತನಾಡುವಂತಹ ಸಂಗರ್ಭದಲ್ಲಿ ಅನೇಕ ರೀತಿಯ ಅಮೂಲ್ಯವಾದಂತಹ ಸಲಹೆಗ ಳನ್ನು ಕೊಟ್ಟಿದ್ದಾರೆ. ಅವರು ಇವತ್ತು ಈ ಸದನದಲ್ಲಿ ಇರಬೇಕಾಗಿತ್ತು. ಅವರು ಚರ್ಚೆಯಲ್ಲಿ ಭಾಗವಹಿಸಿ ದ್ದರೆ ಚೆನ್ನಾಗಿ ಇರುತ್ತಿತ್ತು ಎನ್ನುವ ಮಾತನ್ನು ಹೇಳುತ್ತೇನೆ. ನಾನು ನನ್ನ ಇಲಾಖೆಗೆ ಸಂಬಂಧ ಪಟ್ಟಂತೆ ಸಂಕ್ಷಿಪ್ತವಾಗಿ ಬೇಡಿಕೆಯನ್ನು ಒಪ್ಪಿಕೊಳ್ಳುವುದ ಕ್ಕೋಸ್ಕರ, ಮಾನ್ಯ ಸದಸ್ಯರುಗಳು ಒಪ್ಪಿಗೆಯನ್ನು ಪಡೆದು ಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇನೆ, ಈ ರಾಷ್ಟ್ರದಲ್ಲೇ ಕರ್ನಾಟಕ ರಾಜ್ಯ 8ನೇ ದೊಡ್ಡ ರಾಜ್ಯವಾ ಗಿದೆ. ಸುಮಾರು 190 ಲಕ್ಷ ಹೆಕ್ಟೇರ್ ಭೂಮಿಯನ್ನು ಹೊಂದಿದೆ, 107 ಲಕ್ಷ ಹೆಕ್ಟೇರ್ ನಿವ್ವಳ ಭೂಮಿ ಸಾಗುವಳಿಗೆ ಯೋಗ್ಯವಾದಂತಹ ಪ್ರದೇಶವಾಗಿದೆ. ಅದರಲ್ಲಿ ಶೇಕಡ 24 ರಷ್ಟು ನೀರಾವರಿ ಪ್ರದೇಶವಾ ಗಿದ್ದು, ಇನ್ನು ಉಳಿದ ಶೇಕಡ 76 ರಷ್ಟು ಪ್ರದೇಶ ಮಳೆಯನ್ನಾಧರಿಸಿದೆ. ಈ ರಾಜ್ಯದಲ್ಲಿ ಒಂದು ವೈವಿಧ್ಯತೆ ಉಂಟು, ಬಹುಶಃ ಈ ಪ್ರಪಂಚದಲ್ಲಿ ಎಲ್ಲೂ ಇರದಂಥ ಉಷ್ಣ, ಅತಿ ಉಷ್ಣ, ಸಮಶೀತೋಷ್ಣ, ಇವೆಲ್ಲ ವೂ ಒಟ್ಟಿಗೆ ಸೇರಿದಂತಹ 10 ವಿಭಾಗಗಳಾಗಿ Agro Clamatic Zone" ಎಂದು ವಿಂಗಡನೆ ಮಾಡುವಂಥಾದ್ದು ಇದೆ, ಮತ್ತು ವಿಶೇಷವಾಗಿ ನಾವು ಬೆಳೆಯನ್ನು ಬೆಳೆಯುವಂಥಾದ್ದಕ್ಕೆ ಒಳ್ಳೆಯ ದೈವತ್ವವಾದಂತಹ ವಾತಾವರಣವೂ ಇದೆ. ನಮ್ಮ ರಾಜ್ಯದ ಜನಸಂಖ್ಯೆಯ ಪ್ರಮಾಣವನ್ನು ನಾವು ಲೆಕ್ಕ ಹಾಕಿಕೊಂಡಾಗ ಈಗಾಗಲೇ ಸುಮಾ ರು ಐದು ಕೋಟಿ ಅರವತ್ತು ಲಕ್ಷಕ್ಕೂ ಮೀರುವಂತಹ ಜನ ಸಂಖ್ಯೆ ಇವತ್ತು ಇದೆ. ನಾವು 1980 ದಶಕದಲ್ಲಿ ಜೆಡಿಪಿಯಲ್ಲಿ ಶೇಕಡ 4.4ರಷ್ಟು ಸಾಧನೆಯನ್ನು ಮಾಡಿದ್ದು, 1995ರ ನಂತರ ಅದು 4.6ಕ್ಕೆ ಹೆಚ್ಚಿಸು ವಂತಹ ಮಟ್ಟಕ್ಕೆ ಹೋಗಿದೆ. ನಾವು ಮುಖ್ಯವಾಗಿ ಆಹಾರ ಉತ್ಪಾದನೆಯಲ್ಲಿ 1956ರಿಂದ ಇಲ್ಲಿಯವರೆಗೆ ತೆಗೆದುಕೊಂಡರೆ 1999-2000ದಲ್ಲಿ

ಸುಮಾರು 98 ಲಕ್ಷ ಟನ್ ಆಹಾರ ಉತ್ಪಾದನೆ ಹೆಚ್ಚು ಮಾಡುವಂತಹ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿದ್ದೇವೆ. ಮುಂದಿನ ವರ್ಷದಲ್ಲಿ ಅಂದರೆ 2000-2001ರಲ್ಲಿ ನೂರು ಲಕ್ಷಟನ್ ಆಹಾರ ಉತ್ಪಾದನೆ ಹೊಂದುವಂತಹ ಗುರಿ ಇದೆ. ಮತ್ತೆ ಮಳೆಯ ಆಶ್ರಯ ಹೊಂದಿ ರುವಂತಹ ಪ್ರದೇಶದಲ್ಲೂ ಕೂಡ ಉತ್ಪಾದನೆಯಲ್ಲಿ ಸ್ಥಿರತೆ ತರುವಂಥಾದ್ದಕ್ಕೆ ನಾವು ಅನೇಕ ಪ್ರಯತ್ನಗಳನ್ನು ಮಾಡಬೇಕಾಗಿದೆ. ಈ ದಿಶೆಯಲ್ಲಿ ರೈತರಿಗೆ ಹೊಸ ತಾಂತ್ರಿಕತೆಯ ಕಡೆಗೆ ವರ್ಗಾಯಿ ಸುವ ಮುಖೇನ ಕೃಷಿ ಬೆಳೆಯಲ್ಲಿ ಉತ್ತಮವಾದ ಸಾಧನೆಯನ್ನು ಮಾಡುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಅನೇಕ ರಾಜ್ಯಗಳಲ್ಲಿ ಬೆಳೆಯುವಂತಹ ಹೆಕ್ಟೇರ್ ಇಳುವರಿಯನ್ನು ರಾಷ್ಟ್ರಮಟ್ಟಕ್ಕೆ ಹೋಲಿ ಸಿದಾಗ ಅಷ್ಟೊಂದು ಸಮಾಧಾನಕರವಾದಂತಹ ಉತ್ತರ ನಮ್ಮಲ್ಲಿ ಇಲ್ಲ. ನಾವು ಅದರ ಅಂಕಿ ಅಂಶ ಗಳನ್ನು ಅವಲೋಕಿಸಿ ನೋಡಿದಾಗ ಕೆಲವು ಬೆಳೆಗಳಲ್ಲಿ ಮಾತ್ರ ನಾವು ಸ್ವಲ್ಪ ಮಟ್ಟಿಗೆ ರಾಷ್ಟ್ರಮಟ್ಟದ ಸಾಧನೆಯಲ್ಲಿ ಮುಂದುವರೆಯುವಂತಹ ಮಟ್ಟದಲ್ಲಿ ಇದ್ದೇವೆ. ಆದರೆ ಇನ್ನೂ ಸಾಕಷ್ಟು ಸಾಧನೆ ಆಗಬೇಕಾಗಿದೆ. ಈ ದಿಶೆಯಲ್ಲಿ ನಮ್ಮ ಆಹಾರ ಉತ್ಪಾದನೆ ಜನಸಂಖ್ಯೆಗೆ ಅನುಗುಣವಾಗಿ ಇರಬೇಕೆನ್ನುವ ಕಾರಣಕ್ಕೋಸ್ಕರ ಹಿಂದಿನ ಸರ್ಕಾರ ಕೂಡ ಈ ರಾಜ್ಯಕ್ಕೆ ಹೊಸ ಕೃಷಿ ನೀತಿಯನ್ನು ತಂದಿತ್ತು. 1995-96ರಲ್ಲಿ ಹೊಸ ಕೃಷಿ ನೀತಿಯನ್ನು ಆಧರಿಸಿ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಾಕುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಬಹುತೇಕ ನಮ್ಮ ಸಾಧನೆಯಲ್ಲಿ ಅವರು ಹಾಕಿದಂತಹ ಗುರಿಯಲ್ಲಿ ನಮ್ಮ ಸಾಧನೆಯನ್ನು ಆ ಮಟ್ಟದಲ್ಲಿ ನೋಡಿದಾಗ ಅಷ್ಟು ನಿರೀಕ್ಷಿತ ಮಟ್ಟಕ್ಕೆ ಸಾಧನೆಯಾಗಿದೆ ಎಂದು ನಮಗೆ ಅನ್ನಿಸಲಿಲ್ಲ. ಅವರು ಕಳೆದ ಐದು ವರ್ಷಗಳಲ್ಲಿ ಹಾಕಿದಂತಹ ಕಾರ್ಯಕ್ರಮಗಳು ಮತ್ತು ಮಾಡಿದಂತಹ ಕಾರ್ಯಕ್ರಮಗಳನ್ನು ನೋಡಿದಾಗ ನಮ್ಮದೇ ಆದಂತಹ ಆದ್ಯತೆಗಳನ್ನು ಇಟ್ಟುಕೊಂಡು ನಿರೀಕ್ಷಿತ ಮಟ್ಟಕ್ಕೆ ತರಬೇಕೆಂದು ಕೂಡ ತೀರ್ಮಾನ ಮಾಡಿ, ನಮ್ಮ ಈ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಧಾರವಾಡದಲ್ಲಿ ಒಂದು ಶೃಂಗ ಸಭೆಯನ್ನು ಕರೆದರು. ಈ ಸಭೆಯಲ್ಲಿ ದೇಶದಲ್ಲಿರುವಂತಹ ಕೃಷಿ ವಿಜ್ಞಾನಿಗಳನ್ನು, ಡಾ: ಸ್ವಾಮಿನಾಥನ್‌ರವರಿಂದ ಪ್ರಾರಂಭಗೊಂಡು ಶ್ರೀ ಕುರಿಯನ್‌ರವರು ಮತ್ತು ದೇಶದಲ್ಲಿರುವಂತಹ ಯೂನಿವರ್ಸಿಟಿ, ಅಗ್ರಿಕಲ್ಚರ್ ಯೂನಿವರ್ಸಿಟಿಯ ವೈಸ್ ಚಾನ್ಸಲರ್ ರಿಟೈರ್ ಆಗಿರುವಂತಹ ವೈಸ್ ಚಾನ್ಸಲರ್‌ಗಳು ಹಾಗೂ ತಜ್ಞರುಗಳು, ಪ್ಲಾನಿಂಗ್ ಕಮೀಷನ್ ಸದಸ್ಯರುಗಳನ್ನು ಕರೆದು ನಾವು ಒಂದು ಸ್ಪಷ್ಟವಾಗಿರುವಂತಹ ನೀತಿ ಮಾಡಬೇಕು. ನಮ್ಮಲ್ಲಿರುವಂತಹ ಕೃಷಿಕರು ಎದುರಿಸುತ್ತಿರುವಂತಹ ಮೂಲ ಭೂತವಾದ ಸಮಸ್ಯೆಗಳಿಗೆ ಸ್ಪಂದಿಸುವಂತಹ ರೀತಿಯಲ್ಲಿ ನಾವು ನೀತಿಯನ್ನು ಮಾರ್ಪಾಡು ಮಾಡಬೇಕೆಂದು ಶೃಂಗ ಸಭೆಯನ್ನು ಕರೆದರು. ಅಲ್ಲಿ ಮೂಡಿ ಬಂದಂತಹ ಅನೇಕ ವಿಚಾರಗಳು ತಜ್ಞರು ಕೊಟ್ಟಂತಹ ಸಲಹೆಗಳನ್ನು ನಮ್ಮ ರಾಜ್ಯದ ಪರಿಸ್ಥಿತಿಗೆ ಅನುಗುಣವಾಗಿ ಕೊಡುವಂತಹ ಸಲಹೆಗಳನ್ನು ಆಧರಿಸಿ ನಾವು ತೀರ್ಮಾನಕ್ಕೆ ಬಂದು ಈಗಾಗಲೇ ರಾಜ್ಯ ಮಟ್ಟದಲ್ಲಿ ಒಂದು ಅಗ್ರಿಕಲ್ಚರ್ ಕಮಿಷನ್. ನೇಮಕ ಮಾಡಬೇಕೆಂದು ತೀರ್ಮಾನ ಮಾಡಿ ರಾಜ್ಯದ ವೈಸ್ ಛಾನ್ಸಲರ್ ಶ್ರೀ ದ್ವಾರಕನಾಥ್ ಮತ್ತು ಹಾಲಿ ಇರುವಂತಹ ಡಾ: ಬಿಸ್ಲಯ್ಯ ಮತ್ತು ಮಹದೇವಪ್ಪನವರನ್ನು ಸದಸ್ಯರನ್ನಾಗಿ ನೇಮಕ ಮಾಡಿ ಕೃಷಿ ಆಯೋಗವನ್ನು ಸ್ಥಾಪನೆ ಮಾಡಿದ್ದೇವೆ. ಮತ್ತು ಅದು ಯಾವ ರೀತಿ ಮುಂದುವರಿಯಬೇಕು ಎನ್ನುವ ಬಗ್ಗೆಯೂ ಕೂಡ ನಿರ್ದಿಷ್ಟವಾದ ರೂಪುರೇಷೆಯನ್ನು ಕೊಟ್ಟು ಇವತ್ತು ಅದನ್ನು ರಚನೆ ಮಾಡುವುದರ ಜೊತೆಗೆ ವರದಿಯನ್ನು ಕೂಡ ನಿರೀಕ್ಷೆ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಬಹಳ ಮುಖ್ಯವಾಗಿ ನಾವು ಅವರಿಂದ ನಿರೀಕ್ಷೆ ಮಾಡುವುದೇನೆಂದರೆ, ಕ್ರಾಫ್ ಪ್ರೊಡೆಕ್ಷನ್ ಏನಿದೆ ಮತ್ತು ಅಕ್ಚ್ಯುಯಲ್ ಯೀಲ್ಡ್ ಏನಿದೆ ಹಾಗೂ ಎಷ್ಟು ಬರಬೇಕಾಗಿತ್ತು ಎನ್ನುವ ಬಗ್ಗೆ ಮತ್ತು ಯಾವ ರೀತಿಯಾಗಿ ಆ ಗ್ಯಾಪ್‌ನ್ನು ತುಂಬಬೇಕು ಎನ್ನುವ

ಬಗ್ಗೆಯೂ ಕೂಡ ಅವರಿಂದ ಸಲಹೆ ಸೂಚನೆಗಳನ್ನು ನಿರೀಕ್ಷೆ ಮಾಡುತ್ತಿದ್ದೇನೆ. ಅವರಲ್ಲಿ ಆ ಪರಿಣಿತಿ ಇದೆ, ನಮ್ಮ ವಿಶ್ವವಿದ್ಯಾನಿಲಯದಲ್ಲಿರತಕ್ಕಂತಹ ಅನೇಕ ರೀತಿಯಾದಂತಹ ತಾಂತ್ರಿಕತೆ, ಮಾಹಿತಿಯನ್ನು ಆಧರಿಸಿ ಅವರು ಕೊಡತಕ್ಕಂತಹ ವರದಿಯನ್ನು ನಾವು ಸಂಪೂರ್ಣವಾಗಿ ನಮ್ಮ ಸರ್ಕಾರದ ಇತಿಮಿತಿಯಲ್ಲಿ ಜಾರಿಗೊಳಿಸುವುದರ ಜೊತೆಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಯೂ ಕೂಡ ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಮಾಡಿದ್ದೇವೆ. ಕಮಿಷನ್ ರಚನೆಯನ್ನು ಮಾಡು ವುದಕ್ಕೂ ಮುಂಚೆ ಕ್ಯಾಬಿನೆಟ್ ಸಬ್-ಕಮಿಟಿಯನ್ನು ಮಾಡಿ ಅವರು ಕೊಡತಕ್ಕಂತಹ ಸಲಹೆಯನ್ನು ಒಪ್ಪತಕ್ಕಂತಹ ತೀರ್ಮಾನವನ್ನು ನಾವು ಮಾಡಿದ್ದೇವೆಂದು ಹೇಳುತ್ತೇನೆ. ನಾವು ಇತ್ತೀಚಿನ ದಿನಗಳಲ್ಲಿ ಕೃಷಿಕನು ಎದುರಿಸತಕ್ಕಂತಹ ಸಮಸ್ಯೆಗಳ ಬಗ್ಗೆಯೂ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ನಮಗೆ ಪತ್ರಿಕೆಗಳ ಮುಖೇನ ವಿಧಾನಸಭೆಯಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ನಾವು ಕೊಡತಕ್ಕಂತಹ ಕನಿಷ್ಠ ಬೆಂಬಲ ಬೆಲೆ ಏನಿದೆ, ಆ ಬೆಂಬಲ ಬೆಲೆಯು ಸಾಕಾಗುವುದಿಲ್ಲವೆಂದು ತಿಳಿದು ಬಂದಿದೆ. ನಿನ್ನೆ-ಮೊನ್ನೆಯು ಕೂಡ ಗಂಗಾವತಿಯಲ್ಲಿ ಸಾಕಷ್ಟು ಗಲಾಟೆಯಾಗಿರುವ ಬಗ್ಗೆ ಪತ್ರಿಕೆಯಲ್ಲೂ ಕೂಡ ಬಂದಿರುವುದನ್ನು ನಾವು ನೋಡಿದ್ದೇವೆ, ಅನೇಕ ಸದಸ್ಯರು ಸದನದಲ್ಲಿ ಉತ್ತರವನ್ನು ಕೊಡಬೇಕೆಂದು ಬಯಸಿ ಬಯಸಿ ಪ್ರಶ್ನೆಗಳನ್ನು ಕಳುಹಿಸುತ್ತಿರುವುದನ್ನು ನಾವು ನೋಡಿದ್ದೇವೆ. ನಾವು ರಾಜ್ಯ ಸರ್ಕಾರದವರು ತೀರ್ಮಾನವನ್ನು ಮಾಡಿ ನಾವು ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತಿರುವ ಸಂದರ್ಭದಲ್ಲಿ ಅವರು ರಾಷ್ಟ್ರೀಯ ಮಟ್ಟದಲ್ಲಿ ಬೆಲೆಯನ್ನು ನಿಗಧಿ ಮಾಡುತ್ತಾರೆ, ನಾವು ಕಳುಹಿಸುವಂತಹ ಶಿಫಾರಸ್ಸುಗಳು ಮತ್ತು ಅವರು ನಗದಿಮಾಡಿರುವ ಬೆಲೆಗಳಿಗೂ ಬಹಳ ವ್ಯತ್ಯಾಸಗಳು ಇರುತ್ತವೆ. ಎಷ್ಟೋ ಸಾರಿ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ್ದರೂ ಸಹ ಆ ರೈತರಿಗೆ ಸಿಗದಿ ರುವಂತಹ ಸಂದರ್ಭಗಳು ಬಂದಿವೆ ಎನ್ನತಕ್ಕಂಥದ್ದು ಮುಖ್ಯವಾಗಿದೆ. ಹಾಗಾಗಿ ಬೆಂಬಲ ಬೆಲೆಗೆ ಅನುಗುಣವಾಗಿ ಹೇಗೆ ಸಹಾಯ ಮಾಡಬೇಕು ಎಂದರೆ ನಮ್ಮಲ್ಲಿರತಕ್ಕಂತಹ ಇಳುವರಿಯನ್ನು ಜಾಸ್ತಿ ಮಾಡುವುದರ ಮುಖೇನ ನಮ್ಮ ಉತ್ಪಾದನೆಯನ್ನು ಜಾಸ್ತಿ ಮಾಡಿದಾಗ ನಮ್ಮ ಬೆಂಬಲ ಬೆಲೆಗೆ ಸಹಾಯವಾಗುತ್ತದೆ. ಆ ದಿಕ್ಕಿನಲ್ಲಿ ರಾಜ್ಯ ಸರ್ಕಾರ ನಡೆಯಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ಸಣ್ಣ ಮತ್ತು ಅತೀಸಣ್ಣ ರೈತರಿಗೆ ಕೃಷಿಯ ಯಂತ್ರೀಕರಣದಿಂದಾಗಿ ಅನೇಕ ರೀತಿಯ ಸವಲತ್ತುಗಳನ್ನು ಕೊಡುವುದರಲ್ಲಿ ಟ್ರ್ಯಾಕ್ಟರ್, ಪವರ್‌ಟಿಲ್ಲರ್, ಈ ರೀತಿಯಾಗಿ ಹೈಟೆಕ್ ಅಗ್ರಿಕಲ್ಚರನಲ್ಲಿ ಸಬ್ಸಿಡಿ ಕೊಡುವ ಮುಖೇನ ಅನೇಕ ಸಹಾಯವನ್ನು ಮಾಡಿ ಯಾಂತ್ರೀಕರಣವನ್ನು ಜಾಸ್ತಿ ಮಾಡುವುದರ ಮುಖೇನ ಇವತ್ತು ಕೃಷಿಗೆ ಹೆಚ್ಚು ಒತ್ತು ಕೊಡಲಾಗುತ್ತದೆ ಎಂಬ ಮಾತನ್ನು ಹೇಳಬಯಸುತ್ತೇನೆ. ನಾವು ಎಷ್ಟು ಸಾಧನೆಗಳನ್ನು ಮಾಡಿದ್ದೇವೆಂಬ ಬಗ್ಗೆ ವಿವರಗಳನ್ನು ಕೊಡುವುದಕ್ಕೆ ಹೋದರೆ ಬಹಳಷ್ಟು ಸಮಯ ಹಿಡಿಯುತ್ತದೆಂದು ಅವುಗಳನ್ನೆಲ್ಲಾ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಬೆಳೆಯನ್ನು ಅಭಿವೃದ್ಧಿ ಮಾಡುವುದಕೋಸ್ಕರ ನಮ್ಮ ರಾಜ್ಯ ಸರ್ಕಾರದ ಮಟ್ಟದಲ್ಲಿ ಏನು ಯೋಜನೆಗಳಿವೆ ನಾನು ಅವುಗಳನ್ನು ಸಂಕ್ಷಿಪ್ತವಾಗಿ ಹೇಳಿವುದುಕ್ಕೆ ಇಚ್ಛಿಪಡುತ್ತೇನೆ. ಕೇಂದ್ರ ಪುರಸ್ಕೃತ ವಾದ ಯೋಜನೆಗಳು, ಒರಟು ಏಕದಳ ಧಾನ್ಯ ಯೋಜನೆ, ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಯೋಜನೆ, ಕಬ್ಬು ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ಬೇಳೆಕಾಳು ಅಭಿವೃದ್ಧಿಯೋಜನೆ, ಹತ್ತಿ, ಮುಸಕಿನ ಜೋಳ ಅನೇಕ ರೀತಿಯಾದಂತಹ ಯೋಜನೆಗಳು ಕೂಡ ಇವತ್ತು ನಮ್ಮಲ್ಲಿವೆ. ಆ ಯೋಜನೆಗಳ ಮುಖೇನ ನಾವು ಸಾಧನೆಯನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ. ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡ ಕೆಲವೇ ದಿವಸಗಳಲ್ಲಿ ಮುಖ್ಯಮಂತ್ರಿಗಳು ಒಂದು ತೀರ್ಮಾನವನ್ನು ಮಾಡಿದರು, ಅನೇಕ ಸದಸ್ಯರುಗಳು ಈಗ

ಮಾತನಾಡುವಂತಹ ಸಂದರ್ಭದಲ್ಲಿ ಕೂಡ, ನಮ್ಮಲ್ಲಿ ಅಂತರ್‌ಜಲ ಇವತ್ತು ಕಡಿಮೆಯಾಗುತ್ತಿರುವ ಬಗ್ಗೆ ಗ್ರಾಮೀಣ ಅಭಿವೃದ್ಧಿಯ ಇಲಾಖೆಯ ಬೇಡಿಕೆಗೆ ಸಂಬಂಧಿಸಿದಂತೆ ಮಾತನಾಡುವಾಗ ಸಾಕಷ್ಟು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೋಸ್ಕರ ಒಂದು ಹೊಸ ಕಾಯಕಲ್ಪವನ್ನು ಕೊಡಬೇಕೆಂಬ ದೃಷ್ಟಿಯಿಂದ ದಿನೇ ದಿನೇ ಕ್ಷೀಣಿಸುತ್ತಿರುವ ಅಂತರ್‌ಜಲವನ್ನು ಇವತ್ತು ವೃದ್ಧಿ ಮಾಡುವುದಕ್ಕೋಸ್ಕರ ನಾವು ಈಗಾಗಲೇ ಇಲಾಖೆಯ ಮಟ್ಟದಲ್ಲಿ ಒಂದು ಪ್ರತ್ಯೇಕ ನಿರ್ದೇಶನಾಲಯವನ್ನು ಮಾಡಬೇಕೆಂದು ಉದ್ದೇಶಿಸಿ ಆ ಕೆಲಸವನ್ನು ಮಾಡಿದ್ದೇವೆ. ವಿವಿಧ ಯೋಜನೆಗಳ ಮುಖೇನ ಯಾವ ಹಂತದಲ್ಲಿ ಅದು ಜಾರಿಗೆ ಬರುತ್ತದೆ ಆಗ ಎಲ್ಲವೂ ಕೂಡ ಒಂದು ಕಂಟ್ರೋಲ್‌ನಲ್ಲಿರಬೇಕು ಮತ್ತು ಮಾನಿಟರಿಂಗ್ ಆಗಬೇಕು ಎನ್ನತಕ್ಕಂತಹ ಎಫೆಕ್ಟೀವ್‌ನೆಸ್ ಬರಬೇಕೆಂಬ ದೃಷ್ಟಿಯಿಂದ ಒಂದು ನಿರ್ದೇಶನಾಲಯವನ್ನು ಮಾಡಿರುವುದರ ಬಗ್ಗೆ ಬಹಳಷ್ಟು ಜನರು ಮೆಚ್ಚಿದ್ದಾರೆ. ನಮ್ಮ ಎಕ್ಸ್‌ಟ್ರನಲ್ ಹಾಗೂ ಏಡಿಂಗ್ ಏಜೆನ್ಸಿ ಇರಬಹುದು, ವರ್ಲ್ಡ್ ಬ್ಯಾಂಕ್ ಇರಬಹುದು, ನಾವು ಪ್ರತ್ಯೇಕ ಬ್ಯಾಂಕ್ ಇರಬಹುದು, ನಾವು ಪ್ರತ್ಯೇಕ ನಿರ್ದೇಶನಾಲಯವನ್ನು ಮಾಡಬೇಕೆಂದು ತೆಗೆದುಕೊಂಡಿರುವ ತೀರ್ಮಾನವನ್ನು ಮೆಚ್ಚಿ ಈಗಾಗಲೇ ನಮಗೆ ಸಹಾಯವನ್ನು ಮಾಡಲು ಮುಂದೆ ಬಂದಿದ್ದಾರೆ. ಇಲ್ಲಿ ಸಂಪನ್ಮೂಲದ ಕೊರತೆಯ ಪ್ರಶ್ನೆ ಬರುತ್ತದೆ, ಈ ಕ್ಷೇತ್ರದಲ್ಲಿ ಸಾಕಷ್ಟು ಹಣವನ್ನು ಒದಗಿಸಬೇಕಾಗುತ್ತದೆ. ಆಗ ನಮ್ಮ ರಾಜ್ಯ ಸರ್ಕಾರದಲ್ಲಿ ಲಭ್ಯವಿರುವ ಸಂಪನ್ಮೂಲದ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಆಗುವುದಿಲ್ಲ. ನಾವು ಹೊಸಹೊಸ ಯೋಜನೆಗಳನ್ನು ಹಮ್ಮಿಕೊಂಡು ಹೊಸದಾಗಿ ಹಣವನ್ನು ತರತಕ್ಕಂತಹ ಕೆಲಸವನ್ನು ಮಾಡಬೇಕಾಗುತ್ತದೆ ಅದಕ್ಕೆ ನಾವು ಹೆಚ್ಚು ಒತ್ತನ್ನು ಕೊಡಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈಗಾಗಲೇ ತಮಗೆಲ್ಲರಿಗೂ ಗೊತ್ತಿರುವಂತೆ ತುಂಗಭದ್ರ ಕಮಾಂಡ್ ಏರಿಯಾದಲ್ಲಿ ಬರತಕ್ಕಂತಹ ಅನೇಕ ಮಾನ್ಯ ಸದಸ್ಯರು ಇದ್ದಾರೆ, ಸುಮಾರು 21 ಟಿಎಂಸಿ ನೀರು ಶೇಖರಣೆಯಾಗದಿರುವ ಮಟ್ಟಕ್ಕೆ ಇವತ್ತು ಆ ಡ್ಯಾಂರ ಸಿಲ್ಟ್ ಆಪ್ ಆಗಿದೆ ಎಂದು ಹೇಳಬೇಕಾಗಿದೆ. ಡೀಸಿಲ್ಟ್ ಮಾಡಿ ಒಂದು ಟಿಎಂಸಿ ನೀರನ್ನು ನಾವು ಬಳಸಿಕೊಳ್ಳಬೇಕಾದರೆ 100 ಕೋಟಿ ರೂಪಾಯಿಗಳು ಖರ್ಚಾಗುತ್ತದೆ, ಇವತ್ತು 21 ಟಿಎಂಸಿ ನೀರನ್ನು ಪಡೆಯಲು ಎಷ್ಟು ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗಿದೆ ಎನ್ನುವುದನ್ನು ಯೋಜನೆ ಮಾಡಬೇಕು. ಇದೇ ವೇಗದಲ್ಲಿ ಸಿಲ್ಟ್ ಆಗುವುದನ್ನು ಮುಂದುವರಿಸಿದರೆ ಸುಮಾರು ನೂರಾರು ವರ್ಷಗಳಲ್ಲಿ ಆ ಡ್ಯಾಂನಲ್ಲಿ ನೀರು ನಿಲ್ಲದೆ ಇರತಕ್ಕಂತಹ ಪರಿಸ್ಥಿತಿಗೆ ನಾವು ತಲುಪಬೇಕಾಗುತ್ತದೆ. ಅದೇ ರೀತಿ ಇವತ್ತು ಎಲ್ಲಾ ಕೆರೆಗಳೂ ಕೂಡ ಸಂಪೂರ್ಣವಾಗಿ ಸಿಲ್ಟ್ ಅಪ್ ಆಗಿ ಯಾವುದೇ ನೀರು ತುಂಬತಕ್ಕಂತಹ ಪರಿಸ್ಥಿತಿ ಇವತ್ತು ಇಲ್ಲ. ಆ ಕಾರಣಕ್ಕೋಸ್ಕರ ನಾವು ಕೆರೆಗಳಲ್ಲಿ ಹೂಳೆತ್ತುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಇವೆಲ್ಲದಕ್ಕಿಂತ ಮುಖ್ಯವಾಗಿ ನಮ್ಮ ಜಲಾನಯನ ಅಭಿವೃದ್ಧಿ ಯೋಜನೆ ಏನಿದೆ ಅದು ನಮ್ಮ ಕ್ಯಾಚ್‌ಮೆಂಟ್ ಏರಿಯಾದಲ್ಲಿರುತ್ತದೆ. ಕ್ಯಾಚ್‌ಮೆಂಟ್ ಏರಿಯಾಗಳಲ್ಲಿ ಹೆಚ್ಚು ಹೆಚ್ಚು ಅಭಿವೃದ್ಧಿ ಮಾಡುವುದರ ಮುಖೇನ ನಾವು ಸಿಲ್ಟ್ ಆಗುವುದನ್ನು ತಡೆಗಟ್ಟುವುದಕ್ಕೆ ಸಾಧ್ಯ ಆ ಬಗ್ಗೆ ಇವತ್ತು ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ನಾವು ಇತ್ತೀಚೆಗೆ ಮಳೆಯನ್ನು ನಂಬಿರತಕ್ಕಂತವರು, ನಮ್ಮದು ಶೇಕಡ 25 ಕ್ಕಿಂತ ಮೀರಲಿಲ್ಲ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ನಮ್ಮ ರಾಜ್ಯದಲ್ಲಿರುವ ಎಲ್ಲಾ ಯೋಜನೆಗಳನ್ನು ಸಂಪೂರ್ಣವಾಗಿ ಮುಗಿಸಿದರೂ ಕೂಡ ನಾವು ಶೇಕಡ 40-45 ಮುಂದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಇನ್ನು 60 ಭಾಗ ಶಾಶ್ವತವಾಗಿ ಮಳೆ ಯನ್ನು ನಂಬಿರತಕ್ಕಂತಹ ಪ್ರದೇಶಗಳು ಶಾಶ್ವತವಾಗಿ ಉಳಿಯುತ್ತವೆ. ಅವುಗಳಿಗೆ ಯಾವುದೇ ರೀತಿ ಯಲ್ಲಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ ಸಾಧ್ಯವಿಲ್ಲ, ಅಂತಹ ಸಂದರ್ಭದಲ್ಲಿ ಆ ಪ್ರದೇಶ ಗಳಿಗೆ ಇವತ್ತು ನಮಗೆ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಬಿಟ್ಟರೆ ಇನ್ಯಾವುದೇ ರೀತಿಯಲ್ಲಿ ಈ ಪ್ರದೇಶದ ಜನರಿಗೆ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ. ನಾವು ದಿನನಿತ್ಯ ಪತ್ರಿಕೆಗಳನ್ನು ನೋಡಿದಾಗ ರಾಜಸ್ಥಾನ ಅಥವಾ ಓರಿಸ್ಸಾದಲ್ಲಿ ಕುಡಿಯುವ ನೀರಿಗೆ ತೊಂದರೆಯನ್ನು ಪಡುತ್ತಿದ್ದಾರೆ. ಬಹುಶಃ ಬರಗಾಲ ಏತಕ್ಕೆ ಬರುತ್ತದೆ ಎನ್ನುವ ಪ್ರಶ್ನೆಯನ್ನು ಹಾಕಿಕೊಂಡಾಗ ಬರಗಾಲ ಎನ್ನುವಂತದ್ದು ಯಾವುದೇ ಒಂದು ವರ್ಷದಲ್ಲಿ ಬರತಕ್ಕಂಥದಲ್ಲ, ಅದು ನಿರಂತರವಾಗಿ ಅನೇಕ ವರ್ಷಗಳಿಂದ ನಮ್ಮ ಅಂತರಜಲ ಸಂಗ್ರಹಣೆ ಕಡಿಮೆಯಾಗಿರುವುದರಿಂದ ಒಂದಲ್ಲ ಒಂದು ಕಾಲದಲ್ಲಿ ಬರಗಾಲ ಬರುತ್ತದೆ. ಕುಡಿಯುವ ನೀರಿಗೆ ಹಾಗೂ ಬೆಳೆಗಳಿಗೆ ತೊಂದರೆಯಾಗುತ್ತದೆ. ಇಂತಹ ಪರಿಸ್ಥಿತಿಗೆ ನಮ್ಮ ಕರ್ನಾಟಕವು ಹೊರತಾಗಿಲ್ಲ. ನಾವು ಅಂತಹ ಪರಿಸ್ಥಿತಿಯನ್ನು ಎದುರಿಸುವಂತಹ ಸಂದರ್ಭಗಳು ಇವೆ. ಈಗಾಗಲೇ ಈ ವರ್ಷದ ಮಳೆಗಳು ಅಲ್ಲೂ ಇಲ್ಲೂ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಬೆಂಗಳೂರಿನಲ್ಲಿ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿರುವಂತಹ ನಮ್ಮ ತಜ್ಞರು ಒಂದು ಸಂದರ್ಭದಲ್ಲಿ Expertss predict worst dry spell ahead" ಎನ್ನುವ ಮಾತನ್ನು ಕರ್ನಾಟಕಕ್ಕೆ ಸಂಬಂಧಿಸಿದಂತೆ ಹೇಳಿದ್ದಾರೆ. ಇದಕ್ಕೆ ಪೂರಕವಾಗಿ ನಾವು ಅನೇಕ ರೀತಿಯಾಗಿ ವಿಶ್ಲೇಷಣೆ ಮಾಡಿ, ವೈಜ್ಞಾನಿಕವಾಗಿ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮವನ್ನು ಹಾಕಬೇಕಾಗುತ್ತದೆ. ಆ ನಿಟ್ಟಿನಲ್ಲಿ ನಮ್ಮ ಸರ್ಕಾರ ಕ್ರಮವನ್ನು ತೆಗೆದುಕೊಂಡಿದೆ ಎಂದು ಹೇಳಿದರೆ ತಪ್ಪಾಗಲಾರದುಯ ಬೆಳೆದಂತ ಬೆಳೆಗಳಿಗೆ ಎಷ್ಟೋ ಸಂದರ್ಭಲ್ಲಿ ರೈತರಿಗೆ ಬೆಲೆ ಸಿಗದೆ ಕಂಗಾಲಾಗಿರತಕ್ಕಂತಹ ವಿಷಯವನ್ನು ಮಾನ್ಯ ಬನ್ನಿಕೋಡ್ ರವರು ಮಾತನಾಡತಕ್ಕಂತಹ ಸಂದರ್ಭ ದಲ್ಲಿ ಹೇಳಿದ್ದಾರೆ. ಕೃಷಿಗೆ ಕೈಗಾರಿಕಾ ಸ್ಥಾನಮಾನಗಳನ್ನು ಕೊಡಬೇಕು, ರೈತರು ಬೆಳೆಯತಕ್ಕಂತಹ ಬೆಳೆಗೆ ಸಹಾಯ ಮಾಡಬೇಕೆನ್ನುವ ಅನೇಕ ವಿಷಯಗಳು ಚರ್ಚೆಯಲ್ಲಿರಬೇಕಾದರೆ ವಾಸ್ತವಿಕವಾಗಿ ನಾವು ಯಾವುದಕ್ಕೂ ಸಹಾಯ ಮಾಡುವುದಕ್ಕಾಗುತ್ತಿಲ್ಲ; ಎಷ್ಟೋ ಸಂದರ್ಭದಲ್ಲಿ ಬೆಲೆಗಳು ಕುಸಿದಿರುವಂ ತಹ ಸಂದರ್ಭದಲ್ಲಿ ಮಾರ್ಕೆಟ್ ಇಂಟರ್‌ವೆನ್ ಷನ್ ಯೋಜನೆಯನ್ನು ತಂದು ವಿಶೇಷವಾಗಿ ಅದನ್ನು ಜಾರಿ ಮಾಡಿ ನಾವು ಮಾರುಕಟ್ಟೆಯನ್ನು ಪ್ರವೇಶ ಮಾಡಿದಂತಹ ಸಂದರ್ಭದಲ್ಲಿ ನಾವು ರೈತರಿಂದ ಕೊಂಡು ಏನು ಮಾಡಬೇಕು? ನಾವು ನಿಶ್ಚಿತವಾಗಿ ಹಣವನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಇದೆ. ಆ ಪರಿಸ್ಥಿತಿಯು ಒದಗಬಾರದು ಎನ್ನುವ ಕಾರಣಕ್ಕೋಸ್ಕರ ನಾವು ರಾಷ್ಟ್ರದಲ್ಲಿ, ರಾಜ್ಯದಲ್ಲಿ ವಿಶೇಷವಾಗಿ ಇವತ್ತು ಇನ್‌ಷೊರೆನ್ಸ್ ಯೋಜನೆ ತರಬೇಕೆನ್ನುವಂತಹ ತೀರ್ಮಾನವನ್ನು ಮಾಡಿ ಕೇಂದ್ರ ಸರ್ಕಾರವು ಕೊಟ್ಟಿರುವಂತಹ ಯೋಜನೆಗೆ ಪೂರಕವಾಗಿ ಈಗಾಗಲೇ ರಾಜ್ಯ ಸರ್ಕಾರವು ಕೂಡ ಒಪ್ಪಿಕೊಂಡಿದೆ. ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕಂಥ ಯೋಜನೆಗೆ ಪೂರಕವಾಗಿ, ರಾಜ್ಯ ಸರ್ಕಾರದವರು ಅದನ್ನು ಒಪ್ಪಿಕೊಂಡು, ತಮ್ಮ ಅನುದಾನದಲ್ಲಿ ಈಗಾಗಲೇ 100 ಕೋಟಿ ರೂಪಾಯಿಗಳಷ್ಟು ಹಣವನ್ನು ನಮಗೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಅವರ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಈಗಾಗಲೇ ಇಡಿಗಂಟಾಗಿ 30ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ಕೆಲಸವನ್ನೂ ಮಾಡಿದ್ದಾರೆ. ಈ ಯೋಜನೆಗೆ ಇನ್ನು ಕೆಲವು ದಿವಸಗಳಲ್ಲಿ ಸರ್ಕಾರದ ಆದೇ ಹೊರಬೀಳುತ್ತದೆ. ಸರ್ಕಾರದ ಆದೇಶ ಬಂದಾಗ ಅದರಿಂದ ಈ ರಾಜ್ಯದ ರೈತರಿಗೆ, ಅವರ ಬೆಳೆ ಹಾಳಾದಂಥ ಸಂದರ್ಭದಲ್ಲಿ

ಅನುಕೂಲವಾಗುತ್ತದೆ. ಹಿಂದೆ ಇದ್ದಂಥ ಯೋಜನೆಗೂ ಈ ಯೋಜನೆಗೂ ಬಹಳಷ್ಟು ವ್ಯತ್ಯಾಸಗಳಿವೆ. ಅವರು ಸಾಲ ತೆಗೆದುಕೊಂಡಿರತಕ್ಕಂಥವರು ಇರಲಿ, ಸಾಲ ಪಡೆದುಕೊಳ್ಳದೇ ಇರತಕ್ಕಂಥವರಿರಲಿ, ಎಲ್ಲರಿಗೂ ಅನ್ವಯವಾಗತಕ್ಕಂಥ ರೀತಿಯಲ್ಲಿ ಈ ಯೋಜನೆಯನ್ನು ತಂದಿದ್ದೇವೆ. ಮತ್ತುಎಲ್ಲಾ ಬೆಳೆಗಳಿಗೂ ಅನ್ವಯವಾಗತಕ್ಕಂಥ ರೀತಿಯಲ್ಲಿ ಈ ಯೋಜನೆಯನ್ನು ಮಾಡಿದ್ದೇವೆ. ಇದನ್ನು ಪ್ರಾಯೋಗಿಕವಾಗಿ ಈ ರಾಜ್ಯದಲ್ಲಿ ಪ್ರಾರಂಭ ಮಾಡಿದ್ದೇವೆ. ನಮ್ಮ ಹಾಗೆ 10- 12 ರಾಜ್ಯಗಳವ ರೂ ಈ ರೀತಿಯಾದ ಯೋಜನೆಯನ್ನು ತರಬೇಕು ಎನ್ನುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ರಾಜ್ಯದ ಮೇಲೆ ಆರ್ಥಿಕವಾಗಿ ಸಾಕಷ್ಟು ಹೊರೆ ಬೀಳುವುದರಿಂದ, ಕೇಂದ್ರ ಸರ್ಕಾರದ ಜೊತೆ ಕುಳಿತು ಚರ್ಚೆ ಮಾಡಿ ರೂಪುರೇಷೆಗಳನ್ನು ತೀರ್ಮಾನ ಮಾಡಬೇಕು ಎಂದು ಮಾಡುತ್ತಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹಳ ಮುಖ್ಯವಾದ ಮತ್ತೊಂದು ವಿಷಯವೆಂದರೆ, ಅನೇಕ ಜನ ಸದಸ್ಯರು ಭ್ರಷ್ಟಾಚಾರದ ಬಗ್ಗೆ ಮಾತನಾಡಿದರು. ನಮ್ಮ ಇಲಾಖೆಯಲ್ಲಿರತಕ್ಕಂಥ ಅಧಿಕಾರಶಾಹಿ ತುಕ್ಕು ಹಿಡಿದಿದೆ ಎನ್ನುವ ಮಾತನ್ನು ಹೇಳಿದರು. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರು ವ್ಯಕ್ತಪಡಿಸಿದಂಥ ಮಾತಿಗೆ ಪರೋಕ್ಷವಾಗಿ ನಾನು ಸಹಮತವನ್ನು ಕೊಡುತ್ತೇನೆ. ಆಡಳಿತ ವರ್ಗ ಸ್ವಲ್ಪ ಮಟ್ಟಿಗೆ ಕೆಟ್ಟು ಹೋಗಿರುವುದು, ತುಕ್ಕು ಹಿಡಿದಿರುವುದು ವಾಸ್ತವಿಕ ಸಂಗತಿ. ಮುಖ್ಯವಾಗಿ ನಾವು ಆ ವ್ಯವಸ್ಥೆಗೆ, ಆ ಯಂತ್ರಕ್ಕೆ ಎಷ್ಟು ಬಂಡವಾಳವನ್ನು ಹಾಕುತ್ತಿದ್ದೇವೆ ಎನ್ನುವುದನ್ನು ನೋಡಬೇಕು. ನಮಗೆ ಈ ಸಲ ಮುಖ್ಯಮಂತ್ರಿಗಳುದೊಡ್ಡ ಮನಸ್ಸು ಮಾಡಿ 45 ಕೋಟಿ ರೂಪಾಯಿ ಹೆಚ್ಚು ಅನುದಾನವನ್ನು ಬಿಡುಗಡೆ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಯೋಜನೇತರ ಶೀರ್ಷಿಕೆಯಲ್ಲಿ ನಾವು ಖರ್ಚು ಮಾಡತಕ್ಕಂಥಾದ್ದು 166 ಕೋಟಿ ರೂಪಾಯಿ. ಆದರೆ ಯೋಜನೆಯಲ್ಲಿ ಖರ್ಚು ಮಾಡತಕ್ಕಂಥಾದ್ದು 144 ಕೋಟಿ ರೂಪಾಯಿಗಳು. ಅಂದರೆ ನಮ್ಮ ಜವಾಬ್ದಾರಿಕೆ ಬಹಳಷ್ಟು ಜಾಸ್ತಿ ಇದೆ ಎಂದು ಅರ್ಥಮಾಡಿಕೊಳ್ಳಬೇಕು. ನಮ್ಮ ಆಡಳಿತಶಾಹಿ ಮೇಲೆ ಜವಾಬ್ದಾರಿಕೆ ಇದೆ, ಅದನ್ನು ಚುರುಕು ಮಾಡತಕ್ಕಂಥ ರೀತಿಯಲ್ಲಿ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ, ಅನೇಕ ಜನ ಸದಸ್ಯರು ವ್ಯಕ್ತಪಡಿಸಿರುವುದು ಉಂಟು. ನಾವು ಯಾವುದೇ ಒಂದು ಊರಿಗೆ ಹೋದರೂ ಅಲ್ಲಿ ಕೃಷಿ ಸಹಾಯಕರಾಗಲಿ ಅಥವಾ ಕೃಷಿ ಅಧಿಕಾರಿಗಳಾಗಲೀ, ಯಾರೂ ಕೂಡ ಇರುವುದಿಲ್ಲ, ಹೆಡ್ ಕ್ವಾರ್ಟರ್ಸ್‌ನಲ್ಲಿ ಇರುವುದಿಲ್ಲ. ಅವರಿಂದ ತಾಂತ್ರಿಕತೆ ವರ್ಗಾವಣೆಯಾಗುತ್ತಿಲ್ಲ ಎನ್ನುವುದು ಸರ್ವೇಸಾಮಾನ್ಯವಾಗಿ ಕೇಳಿಬರುತ್ತಿರುವ ಮಾತು. ನಾವು ಅದನ್ನು ಒಪ್ಪಿದ್ದೇವೆ. ಅದನ್ನು ಒಪ್ಪಿಕೊಂಡು, ನಾವು ಯೋಜನೆಗಳ ಮುಖೇನ ಅದಕ್ಕೆ ಬದಲಾವಣೆಯನ್ನು ಸೂಚಿಸಬೇಕು ಎನ್ನುವ ಕಾರಣಕ್ಕೋಸ್ಕರ ಹೊಸದಾಗಿ ಒಂದು ಯೋಜನೆಯನ್ನು ತರತಕ್ಕಂಥ ಕೆಲಸವನ್ನು ನಾವು ಈಗಾಗಲೇ ಮಾಡಿದ್ದೇವೆ. 'ರೈತಮಿತ್ರ' ಎನ್ನುವ ಹೊಸ ಯೋಜನೆಯನ್ನು ಬಜೆಟ್‌ನಲ್ಲಿ ತರತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಈ ಯೋಜನೆಯ ಹೆಸರಿನ ಬಗ್ಗೆ ನಾನಾ ವಿಶ್ಲೇಷಣೆಗಳನ್ನು ಮಾಡಬಹುದು. ಕೃಷಿ ಕ್ಲಿನಿಕ್ ಎಂದು ಹೇಳಬಹುದು, ಕೃಷಿ ಆಸ್ಪತ್ರೆ ಎಂದು ಹೇಳಬಹುದು. ಆದರೆ 'ರೈತ ಮಿತ್ರ' ಎನ್ನುವ ಯೋಜನೆಯನ್ನು ಮಾಡಿ, ಅದರ ಮುಖೇನ ಈ ರಾಜ್ಯದಲ್ಲಿರತಕ್ಕಂಥ 748 ಹೋಬಳಿ ಕೇಂದ್ರಗಳಲ್ಲಿ ಕೃಷಿ ಕ್ಲಿನಿಕ್‌ನ ಕಾನ್ಸೆಪ್ಟ್‌ಅನ್ನು ಜಾರಿಗೊಳಿಸಬೇಕು ಎನ್ನುವ ತೀರ್ಮಾನವನ್ನು ಮಾಡಿದ್ದೇವೆ. ಅದರ ಉದ್ದೇಶವೆಂದರೆ, ಹೇಗೆ ಮನುಷ್ಯನಿಗೆ ಒಂದು ಆಸ್ಪತ್ರೆ ಇರುತ್ತದೋ, ದನಕರುಗಳಿಗೆ, ಪಶುಗಳಿಗೆ ಒಂದು ಆಸ್ಪತ್ರೆ ಇರುತ್ತದೋ ಹಾಗೆಯೇ ಸಸ್ಯಕ್ಕೂ ಕೂಡ ಒಂದು ಆಸ್ಪತ್ರೆ ಇರಬೇಕು ಎಂದು ಮಾಡಿದ್ದೇವೆ. ರೈತರಿಗೆ ಏನಾದರೂ ತೊಂದರೆಯಾದಂಥ ಸಂದರ್ಭದಲ್ಲಿ ಅಥವಾ ಯಾವುದೇ ಒಂದು ಪರಿಕರವನ್ನು ಸರಬರಾಜು

ಮಾಡತಕ್ಕಂಥ ಸಂದರ್ಭದಲ್ಲಿ ಈ ರೀತಿಯ ವ್ಯವಸ್ಥೆಗಳನ್ನು ಮಾಡಿದಾಗ, ರೈತರಿಗೆ ಮತ್ತು ನಮ್ಮ ಇಲಾಖೆಗೆ ಇರತಕ್ಕಂಥ ಸಂಪರ್ಕ, ಸಂಬಂಧಗಳನ್ನು ಹೆಚ್ಚು ಮಾಡಲು ಸಾಧ್ಯವೆನ್ನುವ ದೃಷ್ಟಿಯಿಂದ ಹೊಸದಾಗಿರತಕ್ಕಂಥ ಈ ಒಂದು ಯೋಜನೆಯನ್ನು ತರತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಆಗ ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿದಂಥ ಅನೇಕ ಸಮಸ್ಯೆಗಳೆಲ್ಲವೂ ದೂರವಾಗತಕ್ಕಂಥ ಸಂದರ್ಭ ಬರುತ್ತದೆ. ನಾವು ಹಳ್ಳಿಗಳಿಗೆ ಹೋದಂಥ ಸಂದರ್ಭದಲ್ಲಿ, ಅನೇಕ ಸಣ್ಣ ಸಣ್ಣ ರೈತರನ್ನು ನೀವು ಉಪಯೋಗಿಸತಕ್ಕಂಥ ತಳಿ ಯಾವುದು, ಬೆಳೆ ಯಾವುದು ಎಂದು ಕೇಳಿದಾಗ ಹೊಸ ತಳಿಗಳ ಬಗ್ಗೆ ರೈತರಿಗೆ ಹೆಚ್ಚು ಪರಿಚಯವೇ ಇರುತ್ತಿರಲಿಲ್ಲ. ಅವುಗಳನ್ನು ನಾವು ಉಪಯೋಗಿಸುವುದೇ ಇಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದ್ದವು. ನಾವು ಕೃಷಿಯಲ್ಲಿ ಬದಲಾವಣೆಯನ್ನು ಮಾಡಬೇಕಾದರೆ, ಕೃಷಿ ಉತ್ಪನ್ನ ಜಾಸ್ತಿ ಮಾಡಬೇಕಾದರೆ, ರೈತರಿಗೆ ಒಳ್ಳೆಯ ಬೀಜಗಳನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಯಾವುದೇ ಒಂದು ಸರ್ಕಾರದ ಕೆಲಸವನ್ನು ಮಾಡಬೇಕಾಗುತ್ತದೆ. ಯಾವುದೇ ಒಂದು ಸರ್ಕಾರದ ಸಂಸ್ಥೆಯ ಮುಖೇನ ಉತ್ತಮವಾಗಿ ರತಕ್ಕಂಥ ಬೀಜಗಳನ್ನು ಕೊಡಲು ಹೋದರೆ ಅದು ಬಹಳಷ್ಟು ದುಬಾರಿಯಾಗುತ್ತದೆ. ಅದಕೋಸ್ಕರ ವಾಗಿ, ಇವು ರೈತರಿಂದ ರೈತರಿಗೇ ವರ್ಗಾವಣೆಆಗತಕ್ಕಂಥ ರೀತಿಯಲ್ಲಿ ಮಾಡಬೇಕು. ನಮ್ಮಲ್ಲಿ ಸಾಂಪ್ರ ದಾಯಿಕವಾಗಿರತಕ್ಕಂಥ ಬೆಳೆಗಳಲ್ಲಿ ನೂರಕ್ಕೆ ತೊಂಭತ್ತರಷ್ಟು ರೈತರಿಗೆ ವರ್ಗವಾಗುತ್ತದೆ. ಅದನ್ನು ಪುಷ್ಠೀಕರಿಸುವದಕೋಸ್ಕರವಾಗಿ, ಅದಕ್ಕೆ ಶಕ್ತಿ ಕೊಡುವುದಕೋಸ್ಕರವಾಗಿ ನಮ್ಮ ಕೃಷಿ ಕೇಂದ್ರದಲ್ಲಿ, ರೈತಮಿತ್ರ ಯೋಜನೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರದೇಶಗಳಲ್ಲಿ ಹೆಚ್ಚು ಬೆಳೆಗಳನ್ನು ರೈತರ ಮುಖೇನ ಬೆಳೆಸತಕ್ಕಂಥ ಕೆಲಸವನ್ನು ಮಾಡಿ, ಒಳ್ಳೆಯ ಬೀಜಗಳು ರೈತರಿಗೆ ವರ್ಗಾವಣೆ ಆಗತಕ್ಕಂಥ ಕೆಲಸವನ್ನು ಮಾಡಿದಾಗ, ಹೆಚ್ಚು ಬೆಳೆಯನ್ನು, ಹೆಚ್ಚು ಉತ್ಪಾದನೆಯನ್ನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇದರ ಮುಖೇನ ನಾವು ನಮ್ಮಲ್ಲಿರತಕ್ಕಂಥ ಸಂಶೋಧನೆ, ಸಂಶೋಧನೆ ಮುಖೇನ ಬಂದಿರತಕ್ಕಂಥ ತಾಂತ್ರಿಕತೆ ಎಲ್ಲವೂ ನೇರವಾಗಿ ರೈತರಿಗೆ ವರ್ಗಾವಣೆ ಮಾಡತಕ್ಕಂಥ ಕೆಲಸವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇದು ವಿಶಿಷ್ಟವಾಗಿರತಕ್ಕಂಥ ಯೋಜನೆ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಮತ್ತೊಂದು ಬಹಳ ಮುಖ್ಯವಾದುದು ಎಂದರೆ, ನಾನು ಕಳೆದ 20-22 ವರ್ಷಗಳಿಂದ ಸಕ್ರಿಯವಾದಂಥ ರಾಜಕಾರಣದಲ್ಲಿ ತೊಡಗಿದ್ದು ಈ ವಿಧಾನಸಭೆಯಲ್ಲಿದ್ದೇನೆ. ಹಿಂದೆ ಯಾವ ಮುಖ್ಯಮಂತ್ರಿಗಳೂ ಇಂಥಾದ್ದನ್ನು ಮಾಡಿರುವುದನ್ನು ನಾನು ನೋಡಲಿಲ್ಲ. ನಮ್ಮ ಮುಖ್ಯಮಂತ್ರಿಗಳು ಮಾತನಾಡುವಾಗ, ರೈತರಿಂದ, ರೈತರಿಗೋಸ್ಕರ, ರೈತರದ್ದೇ ಸರ್ಕಾರ ಎನ್ನುವ ಮಾತನ್ನು ಹೇಳುವುದರ ಜೊತೆಗೆ ಅನೇಕ ರೀತಿಯಾದಂಥ ಸವಲತ್ತುಗಳನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ರೈತರು ಉಪಯೋಗಿಸುವಂಥ ಟ್ರ್ಯಾಕ್ಟರ್, ಟಿಲ್ಲರ್, ಬಿತ್ತನೆ ಬೀಜಗಳಂಥವುಗಳಿಗೆ ಸಂಪೂರ್ಣವಾಗಿ ತೆರಿಗೆ ವಿನಾಯಿತಿಯನ್ನು ಕೊಡುವುದರ ಜೊತೆಗೆ, ತುಂತುರು ಹನಿ ನೀರಾವರಿ ಸಲಕರಣೆಗಳ ಮೇಲೆ ಇದ್ದಂಥ ಮಾರಾಟ ತೆರಿಗೆಯನ್ನು ಶೇಕಡ8ರಿಂದ ಶೇಕಡ4ಕ್ಕೆ ಇಳಿಸತಕ್ಕಂಥಾದ್ದನ್ನು, ಕೀಟನಾಶಕ, ಪೀಡನಾಶಕ ಮತ್ತು ಸಸ್ಯ ಬೆಳೆ ವರ್ಧಕಗಳ ಮೇಲೆ ಇದ್ದಂಥ ಮಾರಾಟ ತೆರಿಗೆಯನ್ನು ಶೇಕಡ 4 ಮತ್ತು ಶೇಕಡ 10ರಿಂದ ಶೇಕಡ 2ಕ್ಕೆ ಇಳಿಸತಕ್ಕಂಥ ಕೆಲಸವನ್ನು ಮಾಡಿ ರೈತರಿಗೆ ವಿಶೇಷವಾದ ಸಹಾಯ, ಸವಲತ್ತುಗಳನ್ನು ಕೊಡತಕ್ಕಂಥ ಕೆಲಸವನ್ನು ಈಗಾಗಲೇ ನಮ್ಮ ಸರ್ಕಾರ ಮಾಡಿದೆ ಎನ್ನುವ ಮಾತನ್ನು ಹೇಳುತ್ತೇನೆ. ನಾನು ಹೆಗ್ಗಳಿಕೆಗಾಗಿ ಹೇಳುತ್ತೇನೆ ಎನ್ನುವ ಮಾತಲ್ಲ, ನಮ್ಮ ಸರ್ಕಾರ ತೆಗೆದುಕೊಂಡಂಥ ತೀರ್ಮಾನವನ್ನು, ಮುಖ್ಯಮಂತ್ರಿಗಳು

ತೆಗೆದುಕೊಂಡಂಥ ತೀರ್ಮಾನವನ್ನು, ನಾವು ಕೃಷಿಗೆ ಕೊಟ್ಟಂಥ ಆದ್ಯತೆಯನ್ನು ನಾವು ರಾಷ್ಟ್ರದ ಯಾವ ಭಾಗಕ್ಕೆ ಹೋದರೂ, ರಾಷ್ಟ್ರಾದ್ಯಂತ ಎಲ್ಲ ಜನರೂ ಹಾಡಿಹೊಗಳಿ ಅದನ್ನು ಮೆಚ್ಚತಕ್ಕಂಥ ಮಾತನ್ನು ಹೇಳುತ್ತಾರೆ. ನಾನು ಮೊನ್ನೆ ದೆಹಲಿಗೆ ಹೋಗಿದ್ದಾಗ, ಪಾರ್ಲಿಮೆಂ ಟಿನ ಸೆಂಟ್ರಲ್ ಹಾಲ್‌ನಲ್ಲಿ ಕುಳಿತಿದ್ದಾಗ, ಕರ್ನಾಟಕದ ಕೃಷಿ ಮಂತ್ರಿ ಎಂದು ತಿಳಿದುಕೊಂಡು ನೇಕ ಜನ ಪಾರ್ಲಿಮೆಂಟ್ ಮೆಂಬರ್‌ಗಳು ಬಂದು ಮೆಚ್ಚಿಗೆಯ ಮಾತುಗಳನ್ನು ಹೇಳಿದರು. ಧಾರವಾಡದಲ್ಲಿ ಆಗಿರತಕ್ಕಂಥ ಶೃಂಗಸಭೆಯ ಮಹತ್ವವನ್ನು ಕೂಡ ವರ್ಣನೆ ಮಾಡಿ ಹೇಳತಕ್ಕಂಥಾದ್ದನ್ನು ನೋಡಿದರೆ ನಿಜವಾಗಲೂ ನಾವು ಒಂದು ಒಳ್ಳೆಯ ದಿಸೆಯಲ್ಲಿ ಕಾಲಿಟ್ಟಿದ್ದೇವೆ, ನಾವು ಮುಂದೆ ಹೋಗುತ್ತಿದ್ದೇವೆ ಎನ್ನುವುದು ಗೊತ್ತಾಗುತ್ತದೆ. ಮತ್ತು ಜನ ಬಹಳಷ್ಟು ಏನು ನಿರೀಕ್ಷೆ ಮಾಡಿದ್ದು, ಆ ದಿಸೆಯಲ್ಲಿ ಸಾಗುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಮತ್ತೊಂದು ವಿಷಯವೆಂದರೆ, ನಮ್ಮಲ್ಲಿರತಕ್ಕಂಥ ವಿಶ್ವವಿದ್ಯಾನಿಲಯಗಳು. ನಮ್ಮ ವಿಶ್ವವಿದ್ಯಾನಿಲಯಗಳ ಮಹತ್ವವೇನು? ನಮ್ಮ ವಿಜ್ಞಾನಿಗಳು ಕೊಟ್ಟಿರತಕ್ಕಂಥ ಸಂಶೋಧನೆಗಳೇನು? ಇವತ್ತು ಅವು ಎಷ್ಟರಮಟ್ಟಿಗೆ ಫಲ ನೀಡಿವೆ ಎಂದು ನೋಡಿದಾಗ ಹೆಚ್ಚು ಪ್ರತಿಫಲ ನೀಡಿಲ್ಲ ಎನ್ನುವ ಮಾತನ್ನು ಹೇಳಬೇಕಾದರೂ, ಸಂಶೋಧನೆಯ ಮಟ್ಟದಲ್ಲಿ, ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಅನೇಕ ರೀತಿಯಾದಂಥ ಕಾರ್ಯಕ್ರಮಗಳನ್ನು ನಾವು ಹೊಸದಾಗಿ ಹಾಕಿಕೊಳ್ಳಬೇಕಾಗಿದೆ. ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ಇರತಕ್ಕಂಥ ಹೊಸ ತಳಿಗಳನ್ನು ಬಿಡುಗಡೆ ಮಾಡತಕ್ಕಂಥಾದ್ದು ಒಂದು ಒಳ್ಳೆಯ ಕಾರ್ಯ ಯೋಜನೆಯಾಗುತ್ತದೆಯಾದರೂ, ಸಾವಿರಾರು ವರ್ಷಗಳಿಂದ ಬಂದಿರತಕ್ಕಂಥ ಹಳೆಯ ತಳಿಗಳನ್ನೂ ಪ್ರಿಸರ್ವ್ ಮಾಡಬೇಕು. ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ನಮಗೆ ಗೊತ್ತು. ಭತ್ತದಲ್ಲಿ ಹಾಲುಬ್ಬು, ದೊಡ್ಡಿಭತ್ತ ಎಂದು ಹೇಳುತ್ತೇವೆ. ಅದೇ ರೀತಿ ನಂಜನಗೂಡಿನ ಬಾಳೆ, ಐಮಂಗಲದ ವೀಳ್ಯದ -ಎಲೆ ಇವೆಲ್ಲವೂ ಇವತ್ತು ಸಂಪೂರ್ಣವಾಗಿ ನಶಿಸಿ ಹೋಗತಕ್ಕಂಥ ರೀತಿಯಲ್ಲಿವೆ. ಅವುಗಳನ್ನು ಪ್ರಿಸರ್ವ್ ಮಾಡತಕ್ಕಂಥಾದ್ದರ ಬಗ್ಗೆಯೂ ನಾವು ರಾಜ್ಯದಲ್ಲಿ ಕಾರ್ಯಕ್ರಮವನ್ನು ಹಾಕಬೇಕು ಎಂದು ಮಾಡಿದ್ದೇವೆ. ಜರ್ಮ್ ಪ್ಲಾಸಂಗೆ ಹೆಚ್ಚಿನ ಮಹತ್ವವನ್ನು ಕೊಡಬೇಕು ಎನ್ನುವ ತೀರ್ಮಾನವನ್ನು ಕೂಡ ಮಾಡಿದ್ದೇವೆ.

ಮತ್ತೊಂದು, ಬಹಳ ಮುಖ್ಯವಾದುದೆಂದರೆ, ಆ ಮನೆಯಲ್ಲಿ, ಈ ಮನೆಯಲ್ಲಿ ಚರ್ಚೆಗೆ ಬರತಕ್ಕಂಥ ಒಂದು ವಿಷಯವೆಂದರೆ ಬೆಳೆಗಳಿಗೆ ಬರತಕ್ಕಂಥ ರೋಗ. ಇತ್ತೀಚಿನ ದಿನಗಳಲ್ಲಿ ರೈತ ಬೆಳೆಯತಕ್ಕಂಥ ಎಲ್ಲ ಬೆಳೆಗಳಿಗೂ ವಿಪರೀತವಾಗಿರತಕ್ಕಂಥ ರೋಗಗಳು ಬಂದು, ಆ ರೋಗದಿಂದ ಬೆಳೆಗಳು ತತ್ತರಿಸುತ್ತಿರತಕ್ಕಂಥಾದ್ದನ್ನು ನೋಡುತ್ತಿದ್ದೇವೆ. ಹಿಂದೆ ಅಡಿಕೆ ಮತ್ತು ತೆಂಗಿಗೆ ರೋಗ ಬರುತ್ತದೆ ಎನ್ನತಕ್ಕಂಥಾದ್ದು ಇರಲಿಲ್ಲ. ಸೀರಿಯಲ್ ಕ್ರಾಪ್ಸ್‌ಗೆ ರೋಗ ಬರತಕ್ಕಂಥಾದ್ದು ಇತ್ತು. ಆದರೆ ಇವತ್ತು ಅಡಿಕೆ, ತೆಂಗಿಗೂ ಕೂಡ, ಮನುಷ್ಯನಿಗೆ ಮಾಡತಕ್ಕಂಥ ರೀತಿಯಲ್ಲಿ ಇನಾಕ್ಯೂಲೇಷನ್ ಮಾಡತಕ್ಕಂಥ ರೀತಿಗೆ ನಾವು ಬಂದಿದ್ದೇವೆ. ಅದರ ಬಗ್ಗೆ ಈಗ ನಾನು ವಿವರವನ್ನು ಕೊಡಲು ಹೋದರೆ ಬಹಳಷ್ಟು ಕಾಲವಾಗುತ್ತದೆ. ಅಡಿಕೆ, ತೆಂಗು, ಮೆಣಸು, ಹತ್ತಿ, ರೇಷ್ಮೆ ಎಲ್ಲದರ ಬಗ್ಗೆ ಕೂಡ ನಾವು ಈಗಾಗಲೇ ಯೂನಿವರ್ಸಿಟಿ ಮಟ್ಟದಲ್ಲಿ ಒಂದು ಮಲ್ಟಿ ಡಿಸಿಪ್ಲಿನರಿ ಟೀಂ ಅನ್ನು ಮಾಡಬೇಕು ಎಂದು ಮಾಡಿ, ಆ ಟೀಮಿನ ಮುಖಾಂತರ, ಏಕೆ ಈ ರೀತಿಯಾದ ರೋಗಗಳು ಬರುತ್ತವೆ.

1.20 ಪಿ.ಎಂ.

ಅದಕ್ಕೆ ಯಾವ ರೀತಿಯಾಗಿ ಒತ್ತು ಕೊಡಬೇಕು ಎನ್ನುವ ಬಗ್ಗೆ ಕೂಡ ಯೋಜನೆ ಮಾಡಿದ್ದೇವೆ. ನುಸಿ ರೋಗದ ಬಗ್ಗೆ ಸದನದಲ್ಲಿ ಪ್ರಸ್ತಾಪಕ್ಕೆ ಬಂದಾಗ, ಆ ರೋಗ ಎಲ್ಲೆಲ್ಲೂ ಕೂಡ ನಿರಂತರವಾಗಿ ಹರಡುತ್ತದೆಂದು ಗೊತ್ತಾದಂಥ ಸಂದರ್ಭದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಾ, ನುಸಿ ರೋಗವನ್ನು ಸಂಪೂರ್ಣವಾಗಿ ತಡೆಯುವ ಸಲುವಾಗಿ ಅದರ ಸಂಶೋಧನೆಗೆ ಹೆಚ್ಚು ಒತ್ತು ಕೊಡುತ್ತೇವೆಂದು ಹೇಳಿರುವ ದಿಶೆಯಲ್ಲಿ ಈ ಎಲ್ಲಾ ಬೆಳೆಗಳಿಗೆ ಕೂಡ ಮಲ್ಟಿ ಡಿಸಿಪ್ಲೆನರಿ ಟೀಂನ ಮುಖೇನ ಕೊಡತಕ್ಕಂಥ ಸಲಹೆಯನ್ನು ನಾವು ಒಪ್ಪುವುದಕ್ಕೆ ತಯಾರಾಗಿದ್ದೇವೆ ಮತ್ತು ಹೆಚ್ಚು ಒತ್ತು ಕೊಡುತ್ತೇವೆಂದು ಹೇಳಬಯಸುತ್ತೇನೆ. ಇನ್ನು ಜನಸಂಖ್ಯಾ ಸ್ಫೋಟದಿಂದ ವ್ಯವಸಾಯಕ್ಕೆ ಯೋಗ್ಯವಾಗಿತಕ್ಕಂಥ ಭೂಮಿ ವಿಸ್ತಾರಗೊಳ್ಳದೆ ದಿನದಿನಕ್ಕೂ ಕಡಿಮೆಯಾಗುತ್ತಿದೆ. ನಾವು ಆಹಾರ ಉತ್ಪಾದನೆಯಲ್ಲಿ 1956ರಿಂದ ಇಲ್ಲಿಯವರೆಗೆ ನೋಡಿದಾಗ ನಮ್ಮಲ್ಲಿ ಸಾಕಷ್ಟು ಬದಲಾವಣೆ ತರತಕ್ಕಂಥ ಕೆಲಸವನ್ನು ಮಾಡಿ ಸೆಲ್ಫ್ ಸಫಿಶಿಯನ್ಸಿಗೆ ಬರತಕ್ಕಂಥ ಮಟ್ಟಕ್ಕೆ ಹೋಗಿದ್ದೇವೆ. ಆದರೆ ಸೆಲ್ಫ್ ಸಫಿಶಿಯನ್ಸಿ ಜೊತೆಗೆ ಜನಸಂಖ್ಯಾ ಸ್ಫೋಟದ ಪ್ರಮಾಣ ಎಷ್ಟಿದೆ ಎಂದು ನೋಡಿದಾಗ ಬಹುಶಃ ಇನ್ನು ಹತ್ತು ವರ್ಷಗಳಲ್ಲಿ ರಾಜ್ಯದ ಜನಸಂಖ್ಯೆ 8 ಕೋಟಿ ಮೀರಬಹುದು ಎನ್ನುವ ಅಂದಾಜು ಇದೆ. ಆಗ ಭೂಮಿ ಮಾತ್ರ ಅಷ್ಟೇ ಇದ್ದು, ಈಗಾಗಲೇ ಆಪ್ಟಿಮಮ್ ಪ್ರೊಡಕ್ಷನ್‌ಗೆ ಬಂದಿದ್ದೇವೆ. 10 ವರ್ಷಗಳ ನಂತರ ಆ ಪ್ರೊಡಕ್ಷನ್ ಗ್ಯಾಪ್‌ನ್ನು ಫಿಲ್ ಆಪ್ ಮಾಡುವುದು ಹೇಗೆ? ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿರುತ್ತದೆ. ಆ ಗ್ಯಾಪ್‌ನ್ನು ಫಿಲ್ ಆಫ್ ಮಾಡುವುದಕ್ಕೆ ಪ್ರಪಂಚ ದಲ್ಲಿ ಅನೇಕ ತಂತ್ರಜ್ಞಾನಗಳು ಇದ್ದು ಅದನ್ನು ನಾವು ಅಳವಡಿಸಿಕೊಳ್ಳಬೇಕಾಗುತ್ತದೆ. ಇದರಲ್ಲಿ ಬಹಳ ಮುಖ್ಯವಾದುದು ಎಂದರೆ 'ಬಯೋ- ಟೆಕ್ನಾಲಜಿ' ಎನ್ನುವುದನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಬಯೋ- ಟೆಕ್ನಾಲಜಿ ಮುಖಾಂತರ ಈಗಾಗಲೇ ಮುಂದುವರಿದ ರಾಷ್ಟ್ರಗಳಾದ ಅಮೇರಿಕ ಮುಂತಾದವು, ಅಭಿವೃದ್ಧಿ ಹೊಂದುತ್ತಿರುವ ದೇಶವಾದ ಚೈನಾ, ಹೀಗೆ ಬಹಳಷ್ಟು ದೇಶಗ ಳಲ್ಲಿ ಬಯೋ- ಟೆಕ್ನಾಲಜಿಯಲ್ಲಿ ಸಾಕಷ್ಟು ಮುಂದೆ ಹೋಗಿದ್ದು ಕಳೆದ 3-4 ವರ್ಷಗಳಲ್ಲಿ ಬೆಳೆಗಳನ್ನು ಬೆಳೆದು, ಆಹಾರೋತ್ಪಾದನೆಯಲ್ಲಿ ಮೇಲುಗೈ ಪಡೆದಿರತಕ್ಕಂಥದ್ದನ್ನು ನಾವು ಗಮನಿಸಬಹುದು. ಆದರೆ ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಅಂಥ ಹೊಸ ಟೆಕ್ನಾಲಜಿಗಳನ್ನು ಅಳವಡಿಸಿಕೊಳ್ಳುವುದರಲ್ಲಿ ನಾವು ಸ್ವಲ್ಪ ಮಟ್ಟಿಗೆ ಹಿಂದೆ ಬಿದ್ದಿದ್ದೇವೆ. ಕೃಷಿ ಕ್ಷೇತ್ರದಲ್ಲಿ ಬಯೋ ಟೆಕ್ನಾಲಜಿಯನ್ನು ಅಡಾಪ್ಟ್ ಮಾಡಿದರೆ ಪರಿಸರ, ಬೆಳೆಯ ಮೇಲೆ ದುಷ್ಪರಿಣಾಮ ಆಗುತ್ತದೆಂದು ಇದರ ಮೇಲೆ ನೇಕ ರೈತ ಸಂಘಟ ನೆಗಳು ವಿರೋಧ ಮಾಡಿರುವುದನ್ನು ಕೂಡ ನಾವು ನೋಡಿದ್ದೇವೆ. ಹಾಗಾಗಿ ಬಯೋ ಟೆಕ್ನಾಲಜಿ ಮೂಲಕ ಸಂಶೋಧನೆ ಮಾಡುವುದಕ್ಕೆ ಅಥವಾ ಟ್ರಯಲ್ ಮಾಡುವುದಕ್ಕೆ ಕೂಡ ಸಾಧ್ಯವಾಗಲಿಲ್ಲ. ಆದರೆ ನಾವು ವಾಸ್ತವಿಕವಾದ ಒಂದು ಅಂಶವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈಗಾಗಲೇ ದೇಶದ ಮಟ್ಟದಲ್ಲಿ. ಐ.ಸಿ.ಆರ್. ಮಟ್ಟದಲ್ಲಿ ಡಿಪಾರ್ಟ್‌ಮೆಂಟ್ ಆಫ್ ಬಯೋ- ಟೆಕ್ನಾಲಜಿ ವ್ಯಾಪ್ತಿಯಲ್ಲಿ ಎಲ್ಲಾ ರಾಜ್ಯದಲ್ಲಿ ಕೂಡ ಈ ರೀತಿಯಾದಂಥ ಟ್ರಯಲ್ಸ್ ಸಂಶೋಧನೆ ನಡೆಯುತ್ತಿರಬೇಕಾದರೆ ನಮ್ಮ ರಾಜ್ಯ ಮಾತ್ರ ಅದರ ಪ್ರಯೋಜನವನ್ನು ಪಡೆದುಕೊಳ್ಳಲಿಲ್ಲ ಎನ್ನುವಂಥ ದುಃಖ ಆಗಿದೆ. ಯಾವ ಯಾವ ರಾಜ್ಯಗಳು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡವೆಯೆಂದರೆ ಆಂಧ್ರಪ್ರದೇಶದ ರಾಜ್ ಮಂಡರಿ, ಕಲ್ಕತ್ತಾ, ಕೊಯಮತ್ತೂರು, ದೆಹಲಿ, ಲಕ್ನೋ, ಶಿಲ್ಲಾಂಗ್ ಸಿಮ್ಲಾ, ಬಾಂಬೆ ಮುಂತಾದ ಕಡೆ ಅನೇಕ ಬೆಳೆಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುತ್ತಿದ್ದಾರೆ. ಆ ಬೆಳೆಗಳ ವಿವರಗಳನ್ನು ಹೇಳುವುದಕ್ಕೆ ಸಾಕಷ್ಟು ಸಮಯ ಬೇಕಾಗುವುದರಿಂದ ಅದರ ವಿವರಣೆ ಕೊಡುವುದುಕ್ಕೆ ಹೋಗುವುದಿಲ್ಲ. ಈಗಾಗಲೇ ಅಂಥ ಸಂಶೋಧನೆ ಬೇರೆ ಬೇರೆ ಕಡೆ ನೆಡೆಯುತ್ತಿರುವಾಗ ಇದರಲ್ಲಿ

ನಮ್ಮ ರಾಜ್ಯ ಏಕೆ ಹಿಂದೆ ಬಿದ್ದಿದೆ ಎಂದು ನಮ್ಮನ್ನು ನಾವೇ ಪ್ರಶ್ನೆ ಕೇಳಿಕೊಳ್ಳಬೇಕಾಗುತ್ತದೆ. ಸಂಶೋಧನೆ, ಹೊಸ ತಾಂತ್ರಿಕತೆ ಬಗ್ಗೆ ಐ.ಸಿ.ಆರ್. ಮತ್ತು ಡಿಪಾರ್ಟ್‌ಮೆಂಟ್ ಆಫ್ ಬಯೋ-ಟೆಕ್ನಾಲಜಿಗೆ ಹೋದಂಥ ಸಂದರ್ಭದಲ್ಲಿ ನಾನು ಅವರ ಹತ್ತಿರ ವ್ಯಾಪಕವಾಗಿ ಚರ್ಚೆ ಮಾಡಿದ್ದೇನೆ. ಸರ್ಕಾರ ಆ ಒಂದು ದಿಶೆಯಲ್ಲಿ ಮುಂದೆ ಹೋಗಬೇಕಾ ಗುತ್ತದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ರೈತ ಸಂಘಟನೆಗಳು ವಿರೋಧ ಮಾಡಿದರೂ ಕೂಡ ಅವರಿಗೆ ಕನ್‌ವಿನ್ಸ್ ಮಾಡುವುದಕ್ಕೆ ಸರ್ಕಾರದ ವತಿಯಿಂದ ತಯಾರಾಗಿದ್ದೇವೆ. ರೈತ ಸಂಘಟನೆಗಳು ಟೆಕ್ನಾಲಜಿ ಬಗ್ಗೆ ಅಥವಾ ಯಾವುದೋ ಕಂಪನಿಯ ಬಗ್ಗೆ ವಿರೋಧ ಮಾಡುತ್ತಾರೆಯೋ, ಯಾವುದು ಎಂಬುದುನ್ನು ನೋಡಬೇಕಾಗುತ್ತದೆ. ನಮಗೆ ಯಾವ ಕಂಪನಿಯವರು ಎನ್ನುವುದು ಮುಖ್ಯವಲ್ಲ. ನಮಗೆ ಹೊಸ ತಾಂತ್ರಿಕತೆ ಬೇಕಾಗಿದೆ. ನಮ್ಮ ಕ್ರಾಪ್ ಪ್ರೊಡಕ್ಷನ್ ಅನ್ನು ಅಪ್‌ಗ್ರೇಡ್ ಮಾಡಬೇಕಾಗುತ್ತದೆ. ರೆಕಾರ್ಡ್‌ಗೆ ಹೋಗವ ಸಲುವಾಗಿ ನಮ್ಮ ಸರ್ಕಾರದ ನಿಲುವು, ಚಿಂತನೆ ಏನು ಎನ್ನುವುದನ್ನು ಕೆಲವು ಮಾತುಗಳಲ್ಲಿ ಹೇಳಿಬಿಡುತ್ತೇನೆ.

"The genetically engineered plan with some of the economically important tribes like pests, Hernicides resistance have been commercialised. In addition there is an intensive activity in the area of developing resistance to Viral, bacterial and fungal diseases modifying the plant architecture like plants hide, flowering behaviours reduction in seed losses, production of pharmaceutical substance in plants, fruits with delayed sense of ripening have also found a place in the market. In 1928, 28 Billion Hectares was cultivated in transigenic worldwide. The maximum area was in U.S.A. i.e., 74% folllowed by Argentina 15%, Canada by 10% and 5 major transigenic crops in descending order of the area were Soyabean, Maize, Cotton, Rab seeds and potato, the first two crops accounting about 52% and 30% of the global transigenic area respectively. that genetically engineered Hernicides tolerance contributed most of the 77% of the global growth. It is evident that the genetic engineering will become an indispensable supplement to the conventional plant improvement activity leading to higher production and value addition to the human food. In fact with substantial increase in the transignic area multiple benefits can accrue for the growers of the selected transigenic crops. These include more flexibility in terms of crop management. This is a dependency on the conventional insecticides and herbicide enhance yields of higher quantum of trade of grain or end-product. It has been expected that the economic benefits from transigenic in USA was to the tune of 366 Million Dollars in the year 1997. Given that the food requirement of many countreis is expected to be more than the double in the next 25 years. The long term potential and importance of transigenic crops yielding such high economic benefits cannot be overlooked. In conclusion it is obvious that there us a need to increase the productivity due to the population increase and decrease in per-capita cultivable land, need to sustain stabilised productiivty on annula basis and avoid losses due to pest and water-logging, need to imporve the nutrivity quality and need to avoid excessive use of the pesticides and hernicides. All these things can be met

and successfully shown in some cases by incorporating a genetic engineering tools to develop the plants along with developing G.M.Plants. There is a need to build up public confidence that such food is safe for comsumption and further more on has to ensure that private sector does not monoolise market and the needy deprived of the benefits of plants.

ಸರ್ಕಾರ ಆ ಗ್ಯಾಪ್‌ನ್ನು ಪ್ಲಗ್ ಮಾಡುವುದಕ್ಕೋಸ್ಕರ ಚಿಂತನೆ ಮಾಡುತ್ತಿದೆ ಎನ್ನುವ ದೃಷ್ಟಿಯಿಂದ ಮೇಲಿನ ಮಾತುಗಳನ್ನು ಹೇಳಿದ್ದೇನೆ. ನಾವು ಈ ಟೆಕ್ನಾಲಜಿಯನ್ನು ಕೃಷಿಯಲ್ಲಿ ಅಡಾಪ್ಟ್ ಮಾಡತಕ್ಕಂಥ ಮಟ್ಟಕ್ಕೆ ಹೋಗಬೇಕು, ಈ ದಿಸೆಯಲ್ಲಿ ಯಾವುದೇ ರೀತಿಯಾದಂಥ ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿದೇವೆ. ಇನ್ನು ಕಾಟನ್ ಬೆಳೆಯ ಪರಿಸ್ಥಿತಿ ಏನಾಗಿದೆ ಎಂಬುದು ರಾಯಚೂರು, ಶಿವಮೊಗ್ಗ, ಬಳ್ಳಾರಿ ಮುಂತಾದ ಕಡೆಯ ರೈತರಿಗೆ ಗೊತ್ತಿದೆ. ಈ ರಾಜ್ಯದಲ್ಲಿ 16 ಲಕ್ಷ ಎಕರೆ ಪ್ರದೇಶದಲ್ಲಿ ಹತ್ತಿ ಬೆಳೆಯುತ್ತಿದ್ದರು. ಈಗ ಅಲ್ಲಿ ಕಮಾಂಡ್ ಏರಿಯಾ ಎಂದು ಡೆವಲಪ್ ಆಗಿ, ನೀರಾವರಿ ಸೌಲಭ್ಯ ಜಾಸ್ತಿ ಆಗಿ ಅಲ್ಲಿ ಭತ್ತ ಬೆಳೆಯುತ್ತಾರೆ. ಅದು ಲಾಭದಾಯಕವಾದ ಬೆಳೆ ಅಲ್ಲ. ಹೀಗಾಗಿ 16 ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆಯುತ್ತಿದದ್ದು ಈಗ ಅದು ಕುಸಿದು 1 ರಿಂದ 2 ಲಕ್ಷ ಎಕರೆಗೆ ಇಳಿದಿದೆ. ನಾವು ಉಪಯೋಗಿಸತಕ್ಕಂಥ ಪೆಸ್ಟಿಸೈಡ್ಸ್‌ನ್ನು ಸಂಪೂರ್ಣವಾಗಿ ಕಾಟನ್ ಬೆಳೆ ಮೇಲೆ ಪ್ರಯೋಗ ಮಾಡಲಾಗುತ್ತಿದೆ. ಈ ರಾಜ್ಯದಲ್ಲಿ, ದೇಶದಲ್ಲಿ ಶೇಕಡ 52 ಭಾಗದಷ್ಟು ಹಣವನ್ನು ಪೆಸ್ಟಿಸೈಡ್ಸ್‌ಗೆ ಬಂಡವಾಳ ಹಾಕಿ ಬೆಳೆಯುವುದರಿಂದ ರೈತನಿಗೆ ದುಬಾರಿಯಾಗಿದೆ. ಆದ್ದರಿಂದ ಇವತ್ತು ಡಿಸೀಸ್ ರೆಸಿಸ್ಟೆನ್ಸ್ ವೆರೈಟಿಯನ್ನು ಇಂಟ್ರಡ್ಯೂಸ್ ಮಾಡಬೇಕೆಂದು ಎಲ್ಲಾ ರೀತಿಯ ಟೆಸ್ಟ್ಸ್, ಮೆಶರ್ಸ್‌ನ್ನು ತೆಗೆದುಕೊಂಡು ಡಿಪಾರ್ಟ್‌ಮೆಂಟ್ ಆಫ್ ಬಯೋ-ಟೆಕ್ನಾಲಜಿ, ಐ.ಸಿ.ಆರ್.ನಲ್ಲಿ ಎಲ್ಲಾ ರೀತಿಯಿಂದಲೂ ಚರ್ಚೆಯನ್ನು ಮಾಡಿ, ಅದನ್ನು ರೈತರಿಗೆ ಉಪಯೋಗವಾಗುವ ಹಾಗೆ ಮಾಡಬೇಕು ಎನ್ನುವ ತೀರ್ಮಾನ ಮಾಡಿರುವ ಹಂತದಲ್ಲಿ ಅದರ ಪ್ರಯೋಜನವನ್ನು ನಮ್ಮ ರೈತರು ಪಡೆಯಬೇಕಾಗುತ್ತದೆ. ಈ ದಿಶೆಯಲ್ಲಿ ನಾವು ಮುಂದಾಗಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ ಸಂಘಟನೆಗಳಾದರೂ ಕೂಡ ಇದರ ಬಗ್ಗೆ ವಿರೋಧ ವ್ಯಕ್ತಪಡಿಸಿದರೆ ಸರ್ಕಾರದ ಮಟ್ಟದಲ್ಲಿ ಹೊಸ ತಾಂತ್ರಿಕತೆಯ ಬಗ್ಗೆ ನಾವು ಅವರಿಗೆ ಮನವರಿಕೆ ಮಾಡಿಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಗಂಗಾವತಿ ಮತ್ತು ಮಾನ್ವಿ ತಾಲ್ಲೂಕುಗಳಲ್ಲಿ ನೋಡಿದ್ದೇನೆ. ಆ ರೈತರು ಬೆಳೆದ ಭತ್ತದ ಮೇಲೆ ಹಾಕಿರುವುದು 10- 12 ಸಾರಿ ಆದರೆ ಬೇರೆ ರಾಜ್ಯಗಳಿಂದ ಬಂದಿರುವ ರೈತರು ವಿಶೇಷವಾಗಿ ಪೆಸ್ಟಿಸೈಡ್ ಪ್ರಯೋಗ ಮಾಡಿದ್ದರಿಂದಾಗಿ ನಾವೇನು ಮಾಡುತ್ತಿದ್ದೇವೆಂದರೆ, ಸಂಪೂರ್ಣವಾಗಿ ಔಷಧಿ ತಿನ್ನುವ ಮಟ್ಟಕ್ಕೆ ಹೋಗಿದ್ದೇವೆ, ಇದು ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲವೆ? ಹೊಸ ತಾಂತ್ರಿಕತೆ ಅಳವಡಿಸಿಕೊಳ್ಳುವ ದಿಕ್ಕಿನಲ್ಲಿ ನಾವು ಚಿಂತಿಸುವುದು ಬೇಡವೆ? ಈ ದೇಶದಲ್ಲಿರುವ ಎಲ್ಲ ರಾಜ್ಯಗಳೂ ಈ ಸವಲತ್ತನ್ನು ಪಡೆದಾಗ, ನಮ್ಮ ರೈತರು ಪಡೆಯದ ಸಂದರ್ಭವಾಗಬಾರದೆನ್ನುವು ದಕ್ಕಾಗಿ, ಆ ಟೆಕ್ನಾಲಜಿಯನ್ನು ಅಡಾಪ್ಟ್ ಮಾಡುವುದರಲ್ಲಿ ಮುಂದೆ ಹೋಗಬೇಕೆನ್ನುವ ಮಾತನ್ನು ಹೇಳುತ್ತೇನೆ. ಕೊನೆಯದಾಗಿ, ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಂ ಬಂದಾಗ, ನ್ಯೂ ಲುಗ್ಗಿಮ್ ಪಾಲಿಸಿ ಬಗ್ಗೆ ಪ್ರಸ್ತಾಪಿಸಲೇಬೇಕಾಗುತ್ತದೆ. ಕೇಂದ್ರ ಸರ್ಕಾರ ಮೊನ್ನೆ ಮೊನ್ನೆ ತಂದ ಹೊಸ ಕಾರ್ಯನೀತಿ. ಡಬ್ಲ್ಯು.ಟಿ.ಒ.ಗೆ ನಿಮ್ಮ ಸರ್ಕಾರವಿದ್ದಾಗ ಒಪ್ಪಿಗೆ ಮಾಡಿದರು. ಅದರಿಂದಾಗಿ ನಮಗೆ ಇವತ್ತು ತೊಂದರೆಯಾಗಿದೆ ಎಂದು ವಿರೋಧ ಪಕ್ಷದ ಅನೇಕ ಸದಸ್ಯರು ಹೇಳಿದ್ದನ್ನು ಕೇಳಿದ್ದೇವೆ. ಆದರೆ,

ಡಬ್ಲ್ಯು.ಟಿ.ಓ. ಇದೆ. 1992-93ರಲ್ಲಿ We are also the signatories. ಆದರೆ, ನಾವು ಅದನ್ನು ಅಳವಡಿಸಿಕೊಳ್ಳಬೇಕಾದರೆ, ಅದು ಇವತ್ತು ಪ್ರಪಂಚ ಮಟ್ಟದಲ್ಲಿ ಜಪಾನ್ ಇರಬಹುದು, ಅಮೆರಿಕಾ ದೇಶಗಳಿರಬಹುದು, ಅನೇಕ ರೈತ ಸಂಘಟನೆಗಳು ನಮ್ಮ ಕೃಷಿಗೆ ಅದನ್ನು ಅಪ್ಲೈ ಮಾಡುವ ಬಗ್ಗೆ ಇನ್ನೂ ಕೂಡ ಹಿಂದೆಮುಂದೆ ನೋಡುತ್ತಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ಕೇಳಬೇಕಾಗುತ್ತದೆ. ಬಿಲ್‌ಕ್ಲಿಂಟನ್‌ರವರು ಬಂದು ಹೋಗಿ ಒಂದು ವಾರ, ಹತ್ತು ದಿವಸಗಳೊಳಗೆ ನ್ಯೂಲುಗ್ಸಿಮ್ ಪಾಲಿಸಿ ತರುವ ಕೆಲಸ ಮಾಡುತ್ತಾರೆ. ಅದರಲ್ಲಿ 746 ಪ್ರಾಡಕ್ಟ್ಸ್ ಮಾಡುವುದರ ಜೊತೆಗೆ, ಮುಂದಿನ ವರ್ಷಕ್ಕೆ ಇನ್ನೂ 746 ಪ್ರಾಡಕ್ಟ್ಸ್ ಮಾಡಿ, ಮುಂದಿನ ವರ್ಷ ಡಬ್ಲ್ಯು.ಟಿ.ಓ. ಜಾರಿಗೆ ಬರುವ ಸಂದರ್ಭದಲ್ಲಿ 1700-1800 ಪ್ರಾಡಕ್ಟ್ಸ್‌ನ್ನು ನಾವು ಸ್ಪೆಷಲ್ ಇಂಪೋರ್ಟ್ ವ್ಯಾಪ್ತಿಯಲ್ಲಿ ತಪ್ಪುವ ಕೆಲಸ ಮಾಡಿದಾಗ, ಕೃಷಿಗೆ ಯಾವ ರೀತಿ ತೊಂದರೆಯಾಗುತ್ತದೆಂದು ಹೇಳಿದಾಗ, ನಮ್ಮ ರಾಜ್ಯದಲ್ಲಿ ಬೆಳೆಯುವ 11 ಬೆಳೆಗಳು ಅಂದರೆ ಅಡಿಕೆ, ತೆಂಗಿನಿಂದ ಪ್ರಾರಂಭಗೊಂಡು, ಗೋಧಿ, ವೀಳೆಯದೆಲೆ, ಪೊಟಾಟೋ ಚಿಪ್ಸ್ ಇರಬಹುದು, ಚಿಲ್ಲಿ, ಗ್ರೀನ್, ಮ್ಯಾಂಗೋ ಪಿಕಲ್ಸ್, ಉಪ್ಪಿನಕಾಯಿ ರುಚಿ ಕರ್ನಾಟಕ ಮತ್ತು ದಕ್ಷಿಣ ಭಾರತದ ಜನರಿಗೆ ಗೊತ್ತು. ಬಹಳಷ್ಟು ಜನರಿಗೆ ಆ ರುಚಿ ಗೊತ್ತಿಲ್ಲ. ಆದರೆ, ನಮ್ಮ ಕೇಂದ್ರ ಸರ್ಕಾರದವರು ಏಕಾಏಕಿ ಎಗ್ಜಿಮ್ ಪಾಲಿಸಿ ತರುತ್ತಾರೆ. ಆದರೆ, ಇದು ಯಾವ ರಾಜ್ಯಗಳಿಗೆ ತೊಂದರೆಯಾಗುತ್ತದೆಂದು ಕೇಳುವ ಸೌಜನ್ಯವೂ ಇವತ್ತು ಇಟ್ಟುಕೊಂಡಿಲ್ಲವೆಂದಾಗ, ಏನು ಹೇಳಬೇಕಾಗುತ್ತದೆ? ಇದನ್ನೇ ನಂಬಿಕೊಂಡಿರುವ ರೈತರಿಗೆ ತೊಂದರೆಯಾಗುತ್ತದೆ. ಇದನ್ನು ನಾವು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿದಾಗ, ನಾನು ಮತ್ತು ನನ್ನ ಅಧಿಕಾರಿಗಳು, ಸಂಸತ್ ಸದಸ್ಯರು, ಶಾಸಕರು ಹೋಗಿ ಕೇಂದ್ರ ಸಚಿವರ ಗಮನ ಸೆಳೆಯುವ ಕೆಲಸ ಮಾಡಿದಾಗ, ಅವರು ಟ್ಯಾರಿಫ್ ರೇಟ್ ಜಾಸ್ತಿ ಮಾಡುತ್ತೇವೆಂದು ಹೇಳುತ್ತಾರೆ. ಅದನ್ನು ನಾವು ಒಪ್ಪಬಹುದು. ಆದರೆ, ಎಷ್ಟರಮಟ್ಟಿಗೆ ಜಾಸ್ತಿ ಮಾಡಿದ್ದಾರೆ ಎನ್ನುವುದನ್ನು ನೋಡಿದಾಗ, ನಾವು ಟ್ಯಾರಿಫ್ ರೇಟ್ ಅನ್ನು ಬ್ಯಾಲೆನ್ಸ್ ಮಾಡುವುದಕ್ಕೋಸ್ಕರ 300 ಪರ್ಸೆಂಟ್‌ವರೆಗೂ ಟ್ಯಾಕ್ಸ್ ಹಾಕುವುದಕ್ಕೆ ಅವಕಾಶವಿದೆ. ಆದರೆ, ನಮ್ಮ ಕೇಂದ್ರ ಸರ್ಕಾರ ಹಾಕಿರುವ ಟ್ಯಾಕ್ಸ್ ಕೇವಲ 20, 25, 15 ಪರ್ಸೆಂಟ್. ಬೇರೆ ಬೇರೆ ಪ್ರಾಡಕ್ಟ್ಸ್‌ಗಳ ಮಟ್ಟದಲ್ಲಿ ಟ್ಯಾಕ್ಸ್ ಹಾಕಿ, ಯಥೇಚ್ಛವಾಗಿ ನಮ್ಮ ದೇಶಕ್ಕೆ ಆಮದಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ರಫ್ತು ಕಡಿಮೆಯಾಗಿ, ಆಮದು ಜಾಸ್ತಿಯಾಗುತ್ತಿದೆ. ಅದರ ಮೂಲಕ ಬೆಳೆಯುವ ರೈತನಿಗೆ, ಅದನ್ನು ನಂಬಿರುವ ಕೈಗಾರಿಕೆಗಳ ಸಂಪೂರ್ಣ ಹೊಡತ ಬೀಳುವಂತಾಗಿದೆ. ಇದರ ಬಗ್ಗೆ ಇವತ್ತು ಅನೇಕ ರೀತಿಯಲ್ಲಿ ರಾಜ್ಯ ಸರ್ಕಾರ, ನಮ್ಮ ಪಕ್ಷದ ಮೂಲಕ ವಿರೋಧವನ್ನು ವ್ಯಕ್ತಪಡಿಸುವ ಕೆಲಸ ಮಾಡಿ, ಕೇಂದ್ರ ಸರ್ಕಾರದ ನೀತಿಗೆ ವಿರುದ್ಧವಾಗಿ ಕೃಷಿಗೆ ಕೊಡುವ ಎಗ್ಜಿಮ್ ಪಾಲಿಸಿಗೆ ವಿರುದ್ಧವಾಗಿ ಅನೇಕ ಪ್ರತಿಘಟನೆಗಳನ್ನು ಮಾಡಿದ್ದೇವೆ ಮತ್ತು ಸಂಘಟನೆಗಳೂ ವಿರೋಧ ಮಾಡಿದ ಸಂದರ್ಭದಲ್ಲಿ ಅದನ್ನು ಪುರಸ್ಕೃತ ಮಾಡುವ, ಅದರ ಬಗ್ಗೆ ಮರು ಚಿಂತನೆ ಮಾಡುವ ಬಗ್ಗೆ ಹೋಗದಿದ್ದಾಗ, ನಾವೇನು ಹೇಳಬೇಕು? ಈ ಸಭೆಯ ಮೂಲಕ ನಾವು ಕೇಂದ್ರ ಸರ್ಕಾರವನ್ನು, 300 ಪರ್ಸೆಂಟ್ ಟ್ಯಾಕ್ಸ್ ಹಾಕುವುದಕ್ಕೆ ನಿಮಗೇನು ತೊಂದರೆ ಎಂದು ಕೇಳಬೇಕಾಗುತ್ತದೆ. ಇಲ್ಲಿ ಬೆಳೆದ ಬೆಳೆ, ರೈತನಿಗೆ ಸಿಗುವ ಬೆಲೆಯನ್ನು ಮತ್ತು ಅಂತರ್ ರಾಷ್ಟ್ರೀಯ ಮಟ್ಟದ ಹೊರಗಡೆಯಿಂದ ಆಗುವ ಆಮದಿನಿಂದ ಹೋಲಿಕೆ ಮಾಡಿದಾಗ, ಸರಿಸಮಾನತೆ ಇರಬೇಕಾಗುತ್ತದೆ. ಅದು ಬಿಟ್ಟು, ಎಷ್ಟು ವ್ಯತ್ಯಾಸವಾಗುತ್ತದೆ? ಎಣ್ಣೆ ಬೀಜದ ಬಗ್ಗೆ ಪ್ರಸ್ತಾಪಿಸುವುದಾದರೆ, ನಾವೇನಾಗಿದ್ದೇವೆ? ರಾಷ್ಟ್ರದಲ್ಲಿ ಆಯಿಲ್ ಟೆಕ್ನಾಲಜಿ ಮಿಷನ್ ಇತ್ತು. ಶ್ರೀರಾಜೀವ್‌ಗಾಂಧಿಯವರು ತಂದ ಮಿಷನ್‌ನಿಂದಾಗಿ ಅನೇಕ ಕಾರ್ಯಕ್ರಮಗಳನ್ನು ಮಾಡಿ, ಆ ಟೆಕ್ನಾಲಜಿ ಮಿಷನ್ ಮೂಲಕ ಎಣ್ಣೆ, ಬೇಳೆಕಾಳುಗಳನ್ನು ಉತ್ಪಾದಿಸುವ ಬಗ್ಗೆ ಒತ್ತು ಹಾಕಿ, ಇನ್ನೇನು ಫಲ

ಬಿಡಬೇಕೆನ್ನುವ ಹಂತದಲ್ಲಿ ಕೇಂದ್ರ ಸರ್ಕಾರದ ನೀತಿಯಿಂದಾಗಿ ನಮ್ಮ ಎಲ್ಲ ಕೈಗಾರಿಕೆಗಳೂ ಎಣ್ಣೆ ಬೆಳೆ ಬೆಳೆಯುವುದನ್ನು ಸಂಪೂರ್ಣವಾಗಿ ಬಿಡುವ ಪರಿಸ್ಥಿತಿಗೆ ಹೋಗಿದ್ದೇವೆ. ಒಂದು ಉದಾಹರಣೆ ಹೇಳಿದರೆ ತಪ್ಪಾಗಲಾರದೆಂದು ನನ್ನ ಭಾವನೆ. ಎಣ್ಣೆಕಾಳು ಬೀಜದಲ್ಲಿ ಡೊಮೆಸ್ಟಿಕ್ ಆಯಿಲ್ ಸೀಡ್ ಪ್ರೊಡಕ್ಷನ್ ಅವೈಲಬಿಲಿಟಿ ಎಷ್ಟಿತ್ತೆನ್ನುವುದನ್ನು ಹೋಲಿಕೆ ಮಾಡಿದಾಗ, ನಮಗೆ 1997-98ರಲ್ಲಿ 67.9 ಲಕ್ಷ ಟನ್‌ಗಳಾದರೆ ಇಂಪೋರ್ಟ್‌ನಿಂದ ಬಂದಿರುವುದು 20 ಲಕ್ಷ ಟನ್. ಅದೇ ರೀತಿ ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರ ಅಧಿಕಾರ ವಹಿಸಿಕೊಂಡಾಗ ಹಾಕಿರುವುದು, 69 ಲಕ್ಷ ಟನ್‌ಗಳಾದರೆ, ಇಂಪೋರ್ಟ್‌ನಿಂದ ಬಂದಿರುವುದು 43 ಲಕ್ಷ ಟನ್. ಅದರ ಬೆಲೆ ಎಷ್ಟೆಂದರೆ, ಸುಮಾರು 9 ಸಾವಿರ ಕೋಟಿ ರೂಪಾಯಿಗಳಷ್ಟು ಬೆಲೆಯ ಎಣ್ಣೆ ಇವತ್ತು ನಮ್ಮ ದೇಶಕ್ಕೆ ಅಮದಾಗುತ್ತಿದೆ. ಆ ರೀತಿಯಾಗಿ ನಮ್ಮ ಎಣ್ಣೆಕಾಳು ಬೀಜ ಬೆಳೆಯುವ ಶೇಂಗಾ ಬೆಳೆಗಾರರಿರಬಹುದು, ಅವರು ಸಂಪೂರ್ಣವಾಗಿ ನಾಶವಾಗಿ ಹೋದರು. ಬೆಳೆದ ಬೆಳೆಯನ್ನು ಕೇಳುವವರೂ ಯಾರೂ ಇಲ್ಲ. ಇವರು ಹಾಕಿರುವ ಟ್ಯಾಕ್ಸ್ ಪ್ರಕಾರ ನೋಡಿದರೆ, ನಮಗೆ ಕೋರ್ಟಿಗೆ ಬಂದದ್ದು ಸುಮಾರು 21 ಅಥವಾ 22 ರೂಪಾಯಿ ಪಾಮ್ ಆಯಿಲ್ ಬರುತ್ತದೆ. ನಾವು ಬೆಳೆಯುವುದು 70-80 ಭಾಗದಷ್ಟು ಶೇಂಗಾ ಎಣ್ಣೆಯನ್ನು ಯಾರೂ ತಿನ್ನುವುದಕ್ಕೆ ತಯಾರಾಗುತ್ತಾರೆ? ಇದನ್ನೇಕೆ ಕೇಂದ್ರ ಸರ್ಕಾರ ಯೋಚಿಸಲಿಲ್ಲ ಎಂದು ಕೇಳಬೇಕಾಗುತ್ತದೆ. ಬಹಳ ಮುಖ್ಯವಾಗಿ, ಅಮದು ಮಾಡುವ ದೇಶಗಳು, ನಾವು ಡಬ್ಲ್ಯುಟಿಒ ನಿಬಂಧನೆಗಳಿಗನುಗುಣವಾಗಿ ನಡೆಯುತ್ತಿಲ್ಲ. ಕೃಷಿ ಕ್ಷೇತ್ರಕ್ಕೆ ಕೊಡುವ ಸೌಲಭ್ಯಗಳನ್ನು, ಸಬ್ಸಿಡಿಯನ್ನು ಕಡಿಮೆ ಮಾಡುವ ಚಿಂತನೆಯಾದರೂ ಕೂಡ, ಹೊರ ದೇಶಗಳು ಕೃಷಿಗೆ ಕೊಡುವ ಸಬ್ಸಿಡಿ ಕಡಿಮೆ ಮಾಡಿ, ಬೇರೆ ಬೇರೆ ರೂಪದಲ್ಲಿ ಸಬ್ಸಿಡಿ ಕೊಟ್ಟು, ಅವರು ಬೆಳೆದ ಬೆಳೆಯನ್ನು ಈ ದೇಶಕ್ಕೆ ತರುವ ಕೆಲಸ ಮಾಡಿದಾಗ, ನಾವು ಯಾವುದೋ ಪ್ರಪಾತಕ್ಕೆ ದೊಡ್ಡ ದೇಶವೆನ್ನುವ ಕಾರಣಕ್ಕಾಗಿ ಬಲಿಯಾಗಿದ್ದೇ ಆದರೆ, ರಾಷ್ಟ್ರದಲ್ಲಿ, ರಾಜ್ಯದಲ್ಲಿ ರೈತ ಅತ್ಯಂತ ಕಷ್ಟವನ್ನನುಭವಿಸಬೇಕಾಗುತ್ತದೆ. ನಾವು ಸಬ್ಸಿಡಿ ಕೊಡುವು ದಕ್ಕೆಮುಂದಾಗಿದ್ದೇವೆ. ಮೊನ್ನೆ ದಿವಸದ ಪತ್ರಿಕೆಯಲ್ಲಿ ಮಾನ್ಯ ಶ್ರೀ ಧನಂಜಯ ಕುಮಾರ್‌ರವರು, ಅಡಿಕೆ ಬೆಳೆಗಳಿಗೆ ಅಗತ್ಯಬಿದ್ದರೆ ಅಡಿಕೆ ಆಮದು ಸುಂಕ ಹೆಚ್ಚಳವೆಂದು ಹೇಳಿಕೆ ನೀಡಿದ್ದರು. ಅವರಿಗೀಗ ಜ್ಞಾನೋದಯವಾಯಿತೆಂದು ಕಾಣುತ್ತದೆ. ರೈತರಿಗೆ ಕೊಡುವ ಸಬ್ಸಿಡಿ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ, ಸಾಕಷ್ಟು ರೀತಿಯಲ್ಲಿ ರಸಗೊಬ್ಬರದ ಮೇಲೆ ಕೊಡುತ್ತೇವೆನ್ನುತ್ತಾರೆ. ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಲಿಸಿದಾಗ, ಕೃಷಿಯನ್ನೇ ನಂಬಿರುವ, 100ಕ್ಕೆ 70ರಷ್ಟು ಕೃಷಿಕರಿರುವ ದೇಶದಲ್ಲಿ ಕೊಡುವ ಸಬ್ಸಿಡಿ ಮೊತ್ತ 28 ಪರ್ಸೆಂಟ್ ಮಾತ್ರ. ಅದೇ ಜಪಾನ್ ದೇಶದಲ್ಲಿ ಅಷ್ಟು ಮುಂದುವರೆದಿರುವ ದೇಶದಲ್ಲಿ 72 ಪರ್ಸೆಂಟ್ ಸಬ್ಸಿಡಿ ಕೊಟ್ಟರೆ, ಯೂರೋಪಿಯನ್ ದೇಶಗಳಲ್ಲಿ 47 ಪರ್ಸೆಂಟ್, ಅಮೇರಿಕಾ ದೇಶದಲ್ಲಿ 30 ಪರ್ಸೆಂಟ್ ಕೊಟ್ಟು ಮತ್ತು ಪ್ರೊಡಕ್ಷನ್ ಸಬ್ಸಿಡಿ ಎಂದು ಬೇರೆ ರೂಪದಲ್ಲಿ ಕೊಡುವ ಕೆಲಸ ಮಾಡಿ, ಅವರು ಬೆಳೆದ ಬೆಳೆಯನ್ನು ನಮ್ಮ ದೇಶಕ್ಕೆ ಕಳುಹಿಸುವ ಕೆಲಸ ಮಾಡುತ್ತಿರುವ ಜಾಲಕ್ಕೆ ನಾವು ಸಿಗಬಾರದೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕಿಷ್ಟಪಡುತ್ತೇನೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಬೇಕಾಗುತ್ತದೆ. ಕೇಂದ್ರ ಸರ್ಕಾರವೂ ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಅವರ ತೀರ್ಮಾನದಿಂದಾಗಿ, ಈಗಾಗಲೇ ನಮ್ಮ ಕೃಷಿಕರಿಗೆ ಅತ್ಯಂತ ಕಷ್ಟವಾಗಿದೆ. ನಮ್ಮ ಭಾಗದಲ್ಲಿ ರೈತರು ಬೆಳೆಯುವ ಶೇಂಗಾ ಬೀಜ ಕೊಡುವ ಕೆಲಸ ಮಾಡಿ, ಎಂದು ಹೇಳಿದಾಗ, ಎಷ್ಟೋ ಸಾರಿ ಸಂಪನ್ಮೂಲದ ದೃಷ್ಟಿಯಿಟ್ಟುಕೊಂಡಾಗ, ಉತ್ತರ ಸ್ವಲ್ಪ ಕಷ್ಟವಾಗುತ್ತದೆ. ಆದರೂ, ನಾವು ರೈತರ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡರೆ, ಎಣ್ಣೆ ಕಾಳು ಬೆಳೆಯುವರಿಗೆ ಮಾರ್ಕೆಟ್ ಸಿಗುವ ವಾತಾವರಣ ಇಲ್ಲ. ಮತ್ತೊಂದು ಕಡೆ ಹವಾಮಾನದ

ವೈಪರೀತ್ಯದಿಂದಾಗಿ ಬೀಜ ಸಿಗದೇ ರೈತ ಇವತ್ತು ಕಂಗಾಲಾಗಿದ್ದಾನೆ. ಇಂಥ ರೈತನ ಸಹಾಯಕ್ಕೆ ಬರಬೇಕು ಎನ್ನುವ ತೀರ್ಮಾನ ಸರ್ಕಾರ ಮಾಡುತ್ತಿದೆ, ಅದಕ್ಕಿಂತಲೂ ಹೆಚ್ಚಾಗಿ, ನಮ್ಮ ರಾಜ್ಯದಲ್ಲಿ ವಿವಿಧ ಬೆಳೆಗಳನ್ನು ಬೆಳೆಯುತ್ತೇವೆ. ಖರ್ಚು ವೆಚ್ಚವನ್ನು ಸರಿದೂಗಿಸಿ ಎಷ್ಟು ಬಂಡವಾಳ ಹಾಕಬೇಕು ಎನ್ನುವುದರ ಬಗ್ಗೆ ಗಮನ ನೀಡ ಬೇಕಾಗಿದೆ. ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಇವತ್ತುನಾವು ಏನು ತೀರ್ಮಾನ ಮಾಡುತ್ತೇವೆಂದರೆ, ರಾಗಿಯನ್ನು ನೀರಾವರಿ ಪ್ರದೇಶಗಳಲ್ಲಿ ಬೆಳೆಯಬೇಕಾದರೆ 2,780-00 ರೂಪಾಯಿ, ಮಳೆಯಾಶ್ರಿತ ಪ್ರದೇಶದಲ್ಲಿ ಆದರೆ 1,945-00ರೂಪಾಯಿ. ಭತ್ತವನ್ನು ಕ್ರಮಾವಾಗಿ 3,720-00 ಹಾಗೂ 2,550-00ರೂಪಾಯಿಗಳೆಂದು ನಾವು ಲೆಕ್ಕ ಹಾಕುವುದಾದರೆ, ಅದರಿಂದ ರೈತನಿಗೆ ಎಷ್ಟು ದೊರೆಯುತ್ತದೆ ಎಂದರೆ, ಇದರಲ್ಲಿ ಕೂಲಿ ಮತ್ತೊಂದು ಎಲ್ಲವನ್ನೂ ಬಿಟ್ಟುಕೊಂಡು ಹೇಳುವುದಾದರೆ, ರೈತನಿಗೆ ಬಹಳ ಕಡಿಮೆ ದೊರೆಯುತ್ತದೆ. ಈ ಅಂಕಿಅಂಶಗಳನ್ನು ಸಭೆಗಳಿಗೆ ಕೊಡಬೇಕು, ಈಗ ರೈತ ಯಾವ ಪರಿಸ್ಥಿತಿಯಲ್ಲಿ ಇದ್ದಾನೆ ಎಂಬುದು ಗೊತ್ತಾಗುತ್ತದೆ, ಇದಕ್ಕಿಂತ ಸ್ಪಷ್ಟವಾದ ಅಂಕಿಅಂಶ ಮತ್ತೊಂದು ಸಿಗುವುದಿಲ್ಲ. ಸಣ್ಣ ರೈತನಿಗೆ ಖುಷ್ಕಿಯಲ್ಲಿ ಭತ್ತವನ್ನು ಬೆಳೆದಾಗ ಸುಮಾರು 296 ರೂಪಾಯಿ ನಷ್ಟವಾಗುತ್ತದೆ, ಮಧ್ಯಮ ವರ್ಗದ ರೈತನಿಗೆ 2,725 ರೂಪಾಯಿ, ಅದೇ ರೀತಿ ದೊಡ್ಡ ರೈತನಿಗೆ 1,989 ರೂಪಾಯಿ ಬರುತ್ತದೆ. ಈ ರೀತಿಯಾಗಿ ಬೇರೆ ಬೇರೆ ಬೆಳೆಗಳಿಂದ ಬರತಕ್ಕಂಥ ಆದಾಯವನ್ನು ಲೆಕ್ಕ ಹಾಕಿದಾಗ ರೈತನಿಗೆ ಸಿಗತಕ್ಕಂಥ ಲಾಭ ಏನೇನು ಇಲ್ಲ. ಆದ್ದರಿಂದ, ಈ ದಿಶೆಯಲ್ಲಿ ಸರ್ಕಾರ ಚಿಂತನೆ ಮಾಡಿ, ರೈತನಿಗೆ ಸಹಾಯ ಮಾಡಬೇಕಾಗುತ್ತದೆ. ರೈತರು ಕಷ್ಟದಲ್ಲಿದ್ದಾಗ ಸರ್ಕಾರ ಸ್ಪಂಧಿಸಬೇಕಾಗುತ್ತದೆ. ಇದಕ್ಕಾಗಿ ಹಲವಾರು ಯೋಜನೆಗಳನ್ನು ಹಾಕಿಕೊಂಡು ರೈತರಿಗೆ ಸಹಾಯ ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಹೇಳ ಬಯಸುತ್ತೇನೆ. ನಮ್ಮ ಸರ್ಕಾರ ಬಂದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ರೈತರ ಸರ್ಕಾರ ಹೇಳುವಂಥ ರೀತಿಯಲ್ಲಿ ಅನೇಕ ಸುಧಾರಣೆಗಳನ್ನು ಯೋಜನೆಗಳ ಮುಖೇನ ತಾಂತ್ರಿಕತೆಯನ್ನು ವರ್ಗಾವಣೆ ಮಾಡುವುದಕ್ಕೋಸ್ಕರ ಕೃಷಿ ಉತ್ಪಾದನೆ ಜಾಸ್ತಿ ಮಾಡುವುದಕ್ಕೋಸ್ಕರ ಹೆಚ್ಚು ಒತ್ತನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಸಾಕಷ್ಟು ಚಿಂತನೆ ನಡೆಸಿ ಈ ಒಂದು ವಲಯಕ್ಕೆ ಆದ್ಯತೆಯನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ನಾನು ನನ್ನ ರಾಜಕೀಯ ಜೀವನದಲ್ಲಿ ಅನೇಕ ಮುಖ್ಯ ಮಂತ್ರಿಗಳನ್ನು ನೋಡಿದ್ದೇನೆ, ಅದರಲ್ಲಿ ಕೆಲವರು ರೈತರಿಂದಲೇ, ರೈತರಿಗಾಗಿ ಇದ್ದೇವೆ ಎಂದು ಹೇಳಿರತಕ್ಕಂಥ ಮಂತ್ರಿಗಳು ರೈತರ ಬಗ್ಗೆ ಸುಧಾರಣೆ ತರತಕ್ಕಂಥ ಕೆಲಸ ಮಾಡಿರಲಿಲ್ಲ. ಇಂಥ ಕೆಲಸವನ್ನು ನಮ್ಮ ಸರ್ಕಾರದ ಬಂದ ಮೇಲೆ ಮಾಡಿದ್ದೇವೆ. ಈ ಮಾತನ್ನು ನಾನು ಬಹಳ ಹೆಮ್ಮೆಯಿಂದ ಹೇಳುತ್ತಾ, ನಮ್ಮ ಈ ಎಲ್ಲಾ ಯೋಜನೆಗಳು ಅನುಷ್ಠಾನಕ್ಕೆ ಬರಬೇಕಾದರೆ, ಮಾನ್ಯ ಸದಸ್ಯರೆಲ್ಲರ ಸಹಕಾರ ಬೇಕಾಗುತ್ತದೆ. ನಿಮ್ಮೆಲ್ಲರ ಸಹಕಾರದಿಂದಾಗಿ ಎಲ್ಲಾ ಯೋಜನೆಗಳು ಅನುಷ್ಠಾನಗೊಂಡು ಅದರಿಂದ ದೊರೆಯುವ ಪ್ರತಿಪಲ ಉತ್ಪಾದನೆ ಮತ್ತು ವಾಸ್ತವಿಕತೆಗೆ ಇರತಕ್ಕಂಥ ವ್ಯತ್ಯಾಸವನ್ನು ಹತ್ತಿರ ಮಾಡತಕ್ಕಂಥ ಕೆಲಸ ಆಗುತ್ತದೆ. ಈ ಕಾರ್ಯಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ, ಈ ವಲಯಕ್ಕೆ ಸುಮಾರು 45ಕೋಟಿ ರೂಪಾಯಿ ಹೆಚ್ಚಿನ ಅನುದಾನ ಕೊಡತಕ್ಕಂಥ ಕೆಲಸ ಮಾಡಿದ್ದಾರೆ. ಇದಲ್ಲದೇ ಅವರು ಅನೇಕ ಸಂದರ್ಭದಲ್ಲಿ, ಈ ವಲಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾದರೆ, ನಮ್ಮ ಬಜೆಟ್‌ನ ವ್ಯಾಪ್ತಿಯನ್ನು ಮೀರಿ ಆದರೂ ಕೂಡ ನಾವು ಇವತ್ತು ಕೃಷಿಕರಿಗೆ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ ನಾವು ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ ಇವೆಲ್ಲಾ ಮಾನ್ಯ ಸದಸ್ಯರೆಲ್ಲರೂ ಸಂಪೂರ್ಣ ಸಹಕಾರ ಕೊಟ್ಟರೆ ಸಫಲವಾಗುತ್ತದೆ. ಮತ್ತೊಂದು ಬಹಳ ಪ್ರಾಮುಖ್ಯವಾದ ವಿಷಯ ಏನೆಂದರೆ, ಇಲ್ಲಿ ಕುಳಿತರತಕ್ಕಂಥ ನಾವೆಲ್ಲರೂ ನೂರಕ್ಕೆ

ನೂರರಷ್ಟು ರೈತರ ಸಮುದಾಯದಿಂದ ಬಂದಿರತಕ್ಕಂಥವರು, ರೈತರ ಪ್ರತಿನಿಧಿಗಳಾಗಿ ಬಂದಿರತಕ್ಕಂಥವರು. ಆದರೆ, ರೈತ ಬೆಳೆಯತಕ್ಕ ಬೆಳೆಗೆ ಬರತಕ್ಕಂಥ ಲಾಭಾಂಶವನ್ನು ನೋಡಿದರೆ, ನಾವು ಅವರ ನೆರವಿಗೆ ಹೋಗಬೇಕಾಗುತ್ತದೆ, ಅವನ ಜೊತೆಗೆ ನಿಲ್ಲಬೇಕಾಗುತ್ತದೆ, ನೂರಕ್ಕೆ ಎಪ್ಪತ್ತರಷ್ಟಿರುವ ರೈತರಿಗೆ ನಾವು ಸಹಾಯ ಮಾಡದೇ ಹೋದರೆ ಅವನಿಗೆ ನಾವು ದೊಡ್ಡ ಮೋಸ ಮಾಡಿದ ಹಾಗೆ ಆಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಹಾಕಿರುವ ಕಾರ್ಯಕ್ರಮಗಳಿಗೆ ನಿಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ಮಹಾಭಾರತದಲ್ಲಿ ಭಗವಾನ್ ಶ್ರೀ ಕೃಷ್ಣ ''ಎಲ್ಲಿ ಕಷ್ಟವಿರುತ್ತದೆ, ಎಲ್ಲಿ ಶೋಷಣೆ ಇರುತ್ತದೆ, ಅಂಥ ಸಂದರ್ಭದಲ್ಲಿ ನಾನು ಅವತರಿಸುತ್ತೇನೆಂದು'' ಹೇಳಿರುವ ಮಾತನ್ನು ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತೇನೆ. ಏಕೆಂದರೆ, ಇದೇ ದಾಟಿಯಲ್ಲಿ ಇವತ್ತು ಆಡಳಿತ ಚುಕ್ಕಾಣಿ ಯನ್ನು ಹಿಡಿದಿರುವ ಮಥುರೆಯ ಕೃಷ್ಣಾ ಅಲ್ಲದೇ ಇರಬಹುದು, ಮದ್ದೂರಿನ ಕೃಷ್ಣಾ ಇವತ್ತು ಆಡಳಿತದ ಚುಕ್ಕಾ ಣಿಯನ್ನು ಹಿಡಿದು ರೈತನಿಗೆ ಸ್ಪಂದಿಸತಕ್ಕಂಥ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ಮೂಲಕ ರೈತರಿಗೆ ಹಾಗೂ ಅವರ ಕಷ್ಟ ಸಂಕೋಲೆಗಳಿಗೆ ಸ್ಪಂದಿಸತಕ್ಕಂಥ ಕೆಲಸ ಆಗುತ್ತಿದೆ. ಇದರ ಜೊತೆಗೆ ಈ ಮನೆಯ ಸದಸ್ಯರು ಪ್ರಶ್ನೆಗಳ ಮುಖೇನ ಸಭೆಯ ಹಾಗೂ ಸರ್ಕಾರದ ಗಮನವನ್ನು ಸೆಳೆ ದಿದ್ದಾರೆ, ಮಾನ್ಯ ಸದಸ್ಯರೇನು ಹೇಳಿದ್ದಾರೆ ಇದರ ಬಗ್ಗೆ ನಾವು ಗಮನಹರಿಸುತ್ತೇವೆಂದು ಹೇಳುತ್ತಾ, ನಿಮ್ಮ ಸಹಕಾರದಿಂದ ನಾವು ಸಾಧನೆ ಮಾಡಬೇಕಾಗುತ್ತದೆಂದು ಹೇಳಿ, ಮಂಡನೆಯಾಗಿರುವ ನಮ್ಮ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ. ಹೆಚ್ ಬನ್ನಿಕೋಡ್ (ಹಿರೆಕೆರೂರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೃಷಿ ಸಚಿವರು, ಕೃಷಿಯ ಬಗ್ಗೆ, ಕೃಷಿಯ ಸಮಸ್ಯೆ ಬಗ್ಗೆ, ಉತ್ಪಾದನೆ ಹೆಚ್ಚಿಸುವ ಬಗ್ಗೆ, ಬೆಳೆಗಳ ವಿಮೆಯ ಯೋಜನೆಯ ಬಗ್ಗೆ, ಬಹಳ ಸವಿಸ್ತಾರವಾಗಿ ಹೇಳಿದರು. ಕೆಲವೇ ಬೆಳೆಗಳಿಗೆ ಇದ್ದ ವಿಮಾ ಯೋಜನೆಯನ್ನು ಎಲ್ಲಾ ಬೆಳಗಳಿಗೂ ಹಾಗೂ ಸಾಲ ಮಾಡಿದ ರೈತರಿಗೆ ಮಾತ್ರ ಈ ಯೋಜನೆ ಇದ್ದು ಈಗ ಎಲ್ಲಾ ಮಟ್ಟದಲ್ಲೂ ಅಂದರೆ ಸಾಲಗಾರರಲ್ಲದೆ ಇತರೆ ರೈತರಿಗೂ ಕೂಡ ಅನುಕೂಲವಾಗುವ ದೃಷ್ಟಿಯಿಂದ ಎಲ್ಲರಿಗೂ ಈ ವಿಮಾ ಯೋಜನೆಯನ್ನು ಜಾರಿಗೆ ಕೊಟ್ಟಿದ್ದು ಸ್ವಾಗತಾರ್ಹವಾದ ವಿಚಾರ. ದೇಶ ವಿದೇಶಗಳ ತಾಂತ್ರಿಕತೆಯ ಬಗ್ಗೆ ಅವರು ಹೇಳಿದರು. ಈ ದೇಶ ಇಬ್ಭಾಗವಾದಾಗ ಇದ್ದಂಥ 38 ಕೋಟಿ ಜನಸಂಖ್ಯೆಗೆ ಆಹಾರ ಲಭ್ಯ ಇರಲಿಲ್ಲ ಆಹಾರದ ಅಭಾವ ಇತ್ತು. ಈಗಲೂ ಕೂಡ ಈ ದೇಶದ ಜನಸಂಖ್ಯೆ ನೂರು ಕೋಟಿ ಇದ್ದಾಗಲೂ ಕೂಡ ಇರತಕ್ಕಂಥ ಇತಿಮಿತಿಯ ಭೂಮಿಯಲ್ಲಿ ಉತ್ಪಾವದನೆ ಹೆಚ್ಚು ಮಾಡಲಿಕ್ಕೆ ಕೃಷಿಕರಿಗೆ, ತಾಂತ್ರಿಕತೆ, ರಾಸಾಯನಿಕ ಗೊಬ್ಬರ, ಉತ್ತಮ ತಳಿಗಳನ್ನು ಹಾಗೂ ಸಾಲಸೌಲಭ್ಯಗಳನ್ನು ಕೊಟ್ಟು ಉತ್ಪಾದನೆ ಹೆಚ್ಚಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಈ ಮಾತು ಅಕ್ಷರಶಃ ಸತ್ಯ. ಇಡೀ ದೇಶಕ್ಕೆ ಅನ್ನವನ್ನು ಕೊಡುವ ರೈತನ ಬಗ್ಗೆ ಈ ರಾಷ್ಟ್ರದಲ್ಲಿ ಏನು ಚಿಂತನೆ ಆಗಿದೆ ಎಂಬುದನ್ನು ಕೂಡ ಅವರು ಹೇಳಿದರು. ಆದರೆ, ಇದುವರೆವಿಗೂ ಆ ಬಗ್ಗೆ ಯಾವ ಚಿಂತನೆಯೂ ನಡೆದಿಲ್ಲ, ಬೆಳೆಯನ್ನು ಹಾಗೂ ಉತ್ಪಾದನೆ ಹೆಚ್ಚಿಸಲಿಕ್ಕೆ ಹಾಗೂ ಹಸಿದವರಿಗೆ ಅನ್ನವನ್ನು ಕೊಡಲಿಕ್ಕೆ ಎಲ್ಲಾ ರೀತಿಯ ಯೋಜನೆಗಳನ್ನು ಈ ರಾಷ್ಟ್ರದಲ್ಲಿ ಕಾಣುತ್ತಿದ್ದೇವೆ. ಆದರೆ, ರೈತನು ಬೆಳೆದ ಬೆಳೆಗಳ ಬಗ್ಗೆ ಇಲ್ಲಿ ಯಾವುದೇ ಯೋಜನೆ ಇಲ್ಲ. ಇವತ್ತು ಮಳೆ ಬಂದು ರೋಗದಿಂದ ಬೆಳೆಗಳು ಹಾಳಾದರೆ ಇದಕ್ಕೆ ವಿಮಾ ಯೋಜನೆ ಇರಲಿಲ್ಲ. ಇಂಥ ಯೋಜನೆಯನ್ನು, ಕೇಂದ್ರ ಸರ್ಕಾರದ ಯೋಜನೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿ ನೂರು ಕೋಟಿ ರೂಪಾಯಿ ಹಣವನ್ನು ಈ ಬಾಬಿಗೆ ಒದಗಿಸಿದೆ. ಇದರಿಂದಾಗಿ ಸ್ವಲ್ಪ ಮಟ್ಟಿಗೆ ರೈತನಿಗೆ ಸಹಾಯ ಮಾಡಿದ

ಹಾಗೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇವತ್ತು ರೈತ ವ್ಯವಸಾಯಕ್ಕೆ ಉಪಯೋಗಿಸುವ ಎತ್ತು ಎಲುಬಿನ ಹಂದರದಿಂದ ಕೂಡಿದೆ. ಇದಕ್ಕೆ ಕಾರಣ, ಮಧ್ಯವರ್ತಿಗಳ ಶೋಷಣೆ ಹಾಗೂ ಕೇಂದ್ರದ ಆಮದು ತಪ್ಪು ನೀತಿ ಹಾಗೂ ರೈತ ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಇಲ್ಲದೇ ಇರುವುದರಿಂದ, ಈ ರಾಷ್ಟ್ರದ ರೈತ ಸಂಪೂರ್ಣವಾಗಿ ಶೋಷಣೆಗೆ ಒಳಗಾಗಿದ್ದಾನೆ. ಇದರ ಬಗ್ಗೆ ನಾನು ಈಗಾಗಲೇ ರಾಜ್ಯಪಾಲರ ಭಾಷಣದ ಮೇಲೆ ತಿದ್ದುಪಡಿಯನ್ನು ತಂದಾಗ ಕೃಷಿ ಉತ್ಪಾದನೆ ಕಡೆಗೆ ಕನಿಷ್ಠ ಶೇಕಡ 25ರಷ್ಟು ಲಾಭದಾಯಕ ಬೆಲೆಯನ್ನು ಸರ್ಕಾರ ಕೊಡಬೇಕು ಎನ್ನುವ ವಿಚಾರವನ್ನು ಹೇಳಿದ್ದೆ. ಇದು ಕೇವಲ ಒಂದು ರಾಜ್ಯದಿಂದ ಸಾಧ್ಯವಿಲ್ಲ ಇದರ ಬಗ್ಗೆ ಇಡೀ ರಾಷ್ಟ್ರ ಒಂದು ಕಾರ್ಯಕ್ರಮ ಹಾಕಿಕೊಂಡರೆ ಮಾತ್ರ ಲಾಭದಾಯಕವಾದ ಬೆಲೆಯನ್ನು ಕೊಡುವುದಕ್ಕೆ ಸಾಧ್ಯ. ಇವತ್ತು ಏನಾಗಿದೆ ಎಂದರೆ ಬಹುಶಃ ಎಲ್ಲಾ ರಾಜಕೀಯ ಪಕ್ಷಗಳಿಗೆ ಇದೊಂದು ಬೃಹತ್ ಯೋಜನೆ, ಸಹಸ್ರಾರು ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಇದು ಆಗದೇ ಇರುವಂಥದ್ದು ಎಂದು ಪೂರ್ವಗ್ರಹ ಪೀಡಿತರಾಗಿದ್ದಾರೆ. The word "impossible" will be found in the dictionary of fools. ನೂರಕ್ಕೆ ಎಪ್ಪತ್ತರಷ್ಟಿರುವ ರೈತರ ಸಮಸ್ಯೆಗಳಿಗೆ ಯಾವುದೇ ರಾಜಕೀಯ ಪಕ್ಷ ಇವತ್ತು ಸ್ಪಂದಿಸದೇ ಇರತಕ್ಕಂಥದ್ದು, ಇದರಿಂದಾಗಿಯೇ ಇವತ್ತು ಈ ರಾಷ್ಟ್ರದಲ್ಲಿ ರೈತನು ಕಣ್ಣೀರಿಡುವ ಪ್ರಸಂಗ ಬಂದಿದೆ. ಇಂಥ ರೈತನ ಶಾಪ ಇಂದಲ್ಲ ನಾಳೆ ಆಡಳಿತ ನಡೆಸತಕ್ಕಂಥ ರಾಜಕಾರಣಿಗಳಿಗೆ ತಟ್ಟದೇ ಇರಲಾರದು. ಇನ್ನೂ ಕಾಲ ಮಂಚಿಲ್ಲವಾದ್ದರಿಂದ, ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ರೈತರಿಗೆ ಸಹಾಯ ಕೊಡುವುದರಲ್ಲಿ ಹಾಗೂ ಉತ್ಪಾದನೆ ಹೆಚ್ಚು ಮಾಡುವಲ್ಲಿ ಯಾವ ರೀತಿ ಮಾನ್ಯ ಸಚಿವರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಇವುಗಳನ್ನು ಕಾರ್ಯ ರೂಪಗೊಳಿಸಬೇಕಾಗುತ್ತದೆ.

1.50 ಪಿ.ಎಂ.

ತಾವು ಎಲ್ಲಾ ಸತ್ಯವನ್ನು ಅರಿತಿದ್ದರೂ ಸಹ ಸತ್ಯವಲ್ಲ ಎನ್ನತಕ್ಕಂಥ ಮಾತನ್ನು ಹೇಳುವುದು ಸರಿಯಲ್ಲ. ಇದು ಸತ್ಯ ಇದೆ. ನಾವೆಲ್ಲರೂ ಕೂಡ ರೈತ ವರ್ಗದಿಂದ ಬಂದಿದ್ದೇವೆ. ಹಾಗೆಯೇ 100ಕ್ಕೆ 70ರಷ್ಟು ರೈತರ ಮತವನ್ನು ಪಡೆದುಕೊಂಡು ನಾವು ಇಲ್ಲಿಗೆ ಬಂದಿದ್ದೇವೆ. ಆದ್ದರಿಂದ ರೈತರ ಬಗ್ಗೆ ಚಿಂತನೆ ಮಾಡಿ ಒಳ್ಳೆಯ ಯೋಜನೆಯನ್ನು ಹಾಕಿಕೊಳ್ಳುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಅನುಭವ ಇರತಕ್ಕಂಥ ಹಿರಿಯ ಸಚಿವರು ಗಮನಹರಿಸಬೇಕು. ಒಂದು ತಾಂತ್ರಿಕವಾದಂಥ ರೀತಿಯಲ್ಲಿ ಚಿಂತನೆ ಹಾಗೂ ಚರ್ಚೆ ಮಾಡಿ ರೈತನಿಗೆ ಯಾವ ರೀತಿಯಲ್ಲಿ ಲಾಭದಾಯಕವಾದ ಬೆಲೆ ಕೊಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಈ ರಾಜ್ಯದ ಜನತೆಯ ಮುಂದೆ, ಈ ರಾಷ್ಟ್ರದ ಮುಂದೆ ಇಟ್ಟು ಇದಕ್ಕೆ ಮಂಚೂಣಿಯಲ್ಲಿ ಮಾನ್ಯ ಕೃಷಿ ಸಚಿವರು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸರ್ಕಾರದಲ್ಲಿರತಕ್ಕಂಥ ಎಲ್ಲಾ ಸಚಿವರು ಹಾಗೂ ಎಲ್ಲಾ ಶಾಸಕರು ಪಕ್ಷವನ್ನು ಮತ್ತು ಜಾತಿಯನ್ನು ಮರೆತು ಕೆಲಸ ಮಾಡುವುದಕ್ಕೆ ನಾವೆಲ್ಲರೂ ನಿಲ್ಲಬೇಕು. ಇವತ್ತಿನ ದಿವಸ ಕೃಷಿ ವರ್ಗದವರಿಗೆ ಯಾವುದೇ ರೀತಿಯ ರಾಜಕೀಯ ಪಕ್ಷವಾಗಲಿ ಅಥವಾ ಬಣ್ಣವಾಗಲಿ ಇರುವುದಿಲ್ಲ. ಇವತ್ತಿನ ದಿವಸ ಲಾಭದಾಯಕವಾದ ಬೆಲೆಯನ್ನು ರೈತರಿಗೆ ಕೊಡುವುದಕ್ಕೆ ಸಾಧ್ಯವಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಲಾಭದಾಯಕವಾದ ಬೆಲೆಯನ್ನು ಯಾವ ರೀತಿಯಲ್ಲಿ ಕೊಡಬಹುದು ಎಂಬುದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಹಿಂದೆ ಹಾಲು ಉತ್ಪಾದನೆ ಮಾಡತಕ್ಕಂಥವರಿಗೆ ಒಳ್ಳೆಯ ಬೆಲೆ ಸಿಗುತ್ತಿರಲಿಲ್ಲ, ಇವರು ಒಂದು ಲೀಟರ್ ಹಾಲನ್ನು ಒಂದು ರೂಪಾಯಿಂದ ಎರಡು ರೂಪಾಯಿಗಳವರೆಗೆ ಮಾರಾಟ

ಮಾಡುತ್ತಿದ್ದರು. ಮಧ್ಯವರ್ತಿಗಳು ಎರಡು ರೂಪಾಯಿಗೆ ಹಾಲನ್ನು ತೆಗೆದುಕೊಂಡು 8 ರೂಪಾಯಿಗೆ ಮಾರಾಟ ಮಾಡುತ್ತಿದ್ದು, ಒಂದು ಲೀಟರ್ ಹಾಲಿಗೆ 6 ರಿಂದ 8 ರೂಪಾಯಿಗಳವರೆಗೆ ಲಾಭವನ್ನು ಪಡೆಯುತ್ತಿದ್ದ. ಈಗ ಯಾವ ರೀತಿ ಹಾಲು ಉತ್ಪಾದನೆಗೆ ಲಾಭ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೀರಿ, ಅದೇ ರೀತಿಯಾಗಿ ಮಾನ್ಯ ಸಚಿವರು ರೈತ ವರ್ಗದವರಿಗೆ ಲಾಭದಾಯಕವಾದ ಬೆಲೆಯನ್ನು ಕೊಡುವುದಕ್ಕೆ ಹೊಸ ನೀತಿಯನ್ನು ನಿರೂಪಣೆ ಮಾಡಿ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ತಂದು ಇದನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ತಂದಿರತಕ್ಕಂಥಆಮದು ನೀತಿಯಿಂದ ಇವತ್ತಿನ ದಿವಸ ರೈತರಿಗೆ ಬಹಳಷ್ಟು ಹಾನಿಯಾಗುತ್ತಿದೆ. ಆದ್ದರಿಂದ ಇದನ್ನು ನಿಲ್ಲಿಸಬೇಕು. ಹಾಗೆಯೇ ರೈತನು ಬೆಳದಂಥ ಬೆಳೆಗೆ ಲಾಭದಾಯಕ ಬೆಲೆ ಸಿಗುವುದಕ್ಕೋಸ್ಕರ ರಾಷ್ಟ್ರ ಮಟ್ಟದಲ್ಲಿ ಇದರ ಬಗ್ಗೆ ಚಿಂತನೆ ಅಥವಾ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳತಕ್ಕಂಥ ಕೆಲಸ ಈ ಸದನದ ಮೂಲಕವಾಗಲಿ ಅಥವಾ ಸರ್ಕಾರದ ಮೂಲಕವಾಗಲಿ ಆಗಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸದಸ್ಯರು ಕೇಳಿರತಕ್ಕಂಥ ಎಲ್ಲಾ ಪ್ರಶ್ನೆಗಳಿಗೆ ನಾನು ಮೊದಲು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಿದ್ದೇನೆ. ಆದರೆ ವ್ಯವಸಾಯ ಎನ್ನತಕ್ಕಂಥದ್ದು ಸ್ಟೇಟ್ ಸಬ್ಜೆಕ್ಟ್ ಆಗಿರುವುದರಿಂದ ನಾವು ಕೃಷಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವುದರ ಕಡೆಗೆ ಗಮನಹರಿಸಬೇಕು. ಆದರೆ ಬೆಲೆ ನಿಗದಿ ಮಾಡತಕ್ಕಂಥದ್ದು ಇವತ್ತಿನದಿವಸ ಕೇಂದ್ರ ಸರ್ಕಾರದ ಕೈಯಲ್ಲಿದೆ. ವ್ಯವಸಾಯ ಸ್ಟೇಟ್ ಸಬ್ಜೆಕ್ಟ್ ಆಗಿರುವುದರಿಂದ ಇದಕ್ಕೆ ನಮ್ಮದೇ ಆದಂಥ ಕೆಲವು ನೀತಿಗಳನ್ನು ಹಾಕಿಕೊಂಡಿರುತ್ತೇವೆ. ಆದರೆ ಕೇಂದ್ರ ಸರ್ಕಾರ ಕಳೆದ 52 ವರ್ಷಗಳಿಂದಲೂ ಕೂಡ ಸ್ಪಷ್ಟವಾದ ಒಂದು ಕೃಷಿ ನೀತಿಯನ್ನು ತರತಕ್ಕಂಥ ಕೆಲಸವನ್ನು ಮಾಡಲಿಲ್ಲ. ನೀತಿ ಯಾವುದಾದರೂ ಇರಲಿ, ಇಂಥ ಎಗ್ರಿಮ್ ಪಾಲಿಸಿ ತರುವಂಥ ಸಂದರ್ಭದಲ್ಲಿ ಕೊನೆ ಪಕ್ಷ ರಾಜ್ಯ ಸರ್ಕಾರಗಳನ್ನು ಕನ್ಸಲ್ಟ್ ಮಾಡತಕ್ಕಂಥ ಕೆಲಸವನ್ನು ಮಾಡಲಿಲ್ಲ. ಈಗಾಗಲೇ ಬಂದಿರತಕ್ಕಂಥ ಎಲ್ಲಾ ಕೇಂದ್ರ ಸರ್ಕಾರದ ಸಚಿವರೂ ಕೂಡ ನಮ್ಮ ಸರ್ಕಾರ ಹೊಸ ನೀತಿಯನ್ನು ತರುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಪದೇ ಪದೇ ಪಾರ್ಲಿಮೆಂಟ್‌ನಲ್ಲಿ ಹೇಳತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈಗ ಮಾನ್ಯ ಸದಸ್ಯರು ಸಹ ಒಂದು ಸ್ಪಷ್ಟವಾದ ಕೃಷಿ ನೀತಿಯನ್ನು ತೆಗೆದುಕೊಂಡು ಬರಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಆದರೆ, ಎಲ್ಲಿಯವರೆಗೆ ಕೇಂದ್ರ ಸರ್ಕಾರ ತನ್ನ ನೀತಿಯನ್ನು ಸ್ಪಷ್ಟಪಡಿಸುವುದಿಲ್ಲವೋ ಅಲ್ಲಿಯವರೆಗೆ ನಾವು ಯಾವುದೇ ನೀತಿಯನ್ನು ತಂದರೂ ಕೂಡ ಅದು it becomes only a letter of intention and it cannot be implemented. ಇವತ್ತಿನ ದಿವಸ ನಾವೆಲ್ಲರೂ ಕೂಡ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡೋಣ. ಇವತ್ತು ನಮ್ಮ ನೀತಿ ಏನೆಂಬುದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ ಮತ್ತು ನಾವು ಅವರ ಗಮನವನ್ನು ಸೆಳೆಯತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಸರ್ಕಾರದಿಂದ ಈ ವಿಷಯದ ಬಗ್ಗೆ ಪತ್ರ ಬರೆಯಲಾಗಿದೆ ಮತ್ತು ನಾನೂ ಸಹ ವೈಯಕ್ತಿಕವಾಗಿ ಹೋದಾಗಲೂ ಕೂಡ ಈ ಕೃಷಿ ನೀತಿಯನ್ನು ಆದಷ್ಟು ಬೇಗ ತರಬೇಕು, ಏಕೆಂದರೆ ಇದರ ಅನುಗುಣವಾಗಿ ನಾವು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನೂ ಸಹ ಹೇಳಿದ್ದೇನೆ. ಆದ್ದರಿಂದ, ಇದರ ಬಗ್ಗೆ ನಾವೆಲ್ಲರೂ ಕೂಡ ಎಲ್ಲಾ ರೀತಿಯಿಂದ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಈ ಒಂದು ಕೃಷಿ ನೀತಿಯನ್ನು ಆದಷ್ಟು ಬೇಗೆ ಜಾರಿಗೆ ತರುವಂತೆ, ಸೂಚಿಸಬೇಕು ಹಾಗೆಯೇ ನಮ್ಮ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಕೃಷಿ ಕಮೀಷನ್‌ನಿಂದ ಉತ್ತರವನ್ನು ತರಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ಅನೇಕ ಸಲಹೆಗಳ ಬಗ್ಗೆ ಸರ್ಕಾರ ಖಂಡಿತವಾಗಿ ಪರಿಶೀಲನೆ ಮಾಡುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೆಂಕಟರಮಣಪ್ಪ (ಪಾವಗಡ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಕೃಷಿ ಸಚಿವರು ರೈತರ ಮೇಲೆ ಹೆಚ್ಚಿನ ಅನುಕಂಪವನ್ನು ಇಟ್ಟುಕೊಂಡು ಬಹಳ ಸಮಯ ಮಾತನಾಡಿದರು. ಆದರೆ ಕೆಲವು ಬೆಳೆಗಳಿಗೆ ಮಾತ್ರ ಅಂದರೆ, ಅಡಿಕೆ, ತೆಂಗು ಗೋಧಿ, ರಾಗಿ, ಈ ರೀತಿಯಾದ ಬೆಳೆಗಳಿಗೆ ರೋಗ ಬಂದು ಹಾನಿಯಾದರೆ ಪರಿಹಾರವನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ನಮ್ಮ ರಾಜ್ಯದಲ್ಲಿ ಬಹಳಷ್ಟು ಪ್ರಾಂತ್ಯದಲ್ಲಿ ಕಡಲೇಕಾಯಿಯನ್ನು ಬೆಳೆಯುತ್ತಾರೆ. ಹಿಂದಿನ ವರ್ಷ ಕಡಲೇಕಾಯಿ ಬೆಳೆ ಸಂಪೂರ್ಣವಾಗಿ ಹಾಳಾಗಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ. ನಮ್ಮ ರಾಜ್ಯದಲ್ಲಿ ಕಡಲೇಕಾಯಿ ಬೀಜ ಸಿಗದೇ ಇರತಕ್ಕಂಥ ಸಂದರ್ಭದಲ್ಲಿ ನಮ್ಮ ರೈತರಿಗೆ ಸಬ್ಸಿಡಿ ರೂಪದಲ್ಲಿ ಕಡಲೇಕಾಯಿ ಬೀಜವನ್ನು ಒದಗಿಸುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಆದರೆ ಇವತ್ತು ಕಡಲೇಕಾಯಿ ಬೆಳೆಯತಕ್ಕಂಥ ರೈತರಿಗೆ ಕಡಲೇಕಾಯಿ ಬೀಜವನ್ನು ಒದಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸಚಿವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಎಲ್ಲಿಯೂ ಪ್ರಸ್ತಾಪ ಮಾಡಲಿಲ್ಲ. ನಮ್ಮ ಪಕ್ಷದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಒಂದು ಕ್ವಿಂಟಲ್ ಕಡಲೇಕಾಯಿಗೆ 1,500 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೆ ನಮ್ಮ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿದಂತೆ ಕಾಣುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ದೀರ್ಘವಾದಂಥ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ವೆಂಕಟರಮಣಪ್ಪನವರು ಕೇಳಿರತಕ್ಕಂಥ ಪ್ರಶ್ನೆಗೆ ನಾನು ಮೊದಲೇ ಉತ್ತರ ಹೇಳಿದ್ದೇನೆ. ಆದರೆ, ಇವತ್ತಿನ ವಾಸ್ತವಿಕತೆ ಬಗ್ಗೆ ತಾವು ಅರ್ಥ ಮಾಡಿಕೊಳ್ಳಬೇಕು. ರೈತನು ಬೆಳೆದಂಥ ಬೆಳೆ ಪ್ರವಾಹದಿಂದ ಅಥವಾ ರೋಗದಿಂದ ಹಾನಿಯಾದಾಗ ಅಂದರೆ ಗುಲ್ಬರ್ಗದಲ್ಲಿ ಹೋದವರ್ಷ ಬೆಳೆ ಹಾನಿಯಾದಂಥ ಸಂದರ್ಭದಲ್ಲಿ ನ್ಯಾಚುರಲ್ ಕೆಲಾಮಿಟಿ ಫಂಡ್‌ನಿಂದ ಹಣವನ್ನು ಬಿಡುಗಡೆ ಮಾಡುತ್ತೇವೆ. ಆದರೆ ಇವತ್ತಿನ ದಿವಸ ರೈತನ ವಾಸ್ತವಿಕ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ಬೀಜವನ್ನು ತಂದು ಹಾಕತಕ್ಕಂಥ ಶಕ್ತಿಯೂ ರೈತನಿಗೆ ಇಲ್ಲದಂತಾಗಿದೆ. ಇದನ್ನು ಸರ್ಕಾರ ಮನಗಂಡಿದೆ. ಇದಕೋಸ್ಕರ ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚೆ ಮಾಡಿ ನಿಮ್ಮೆಲ್ಲರ ಸಭೆಯನ್ನು ನಾಳೆ ದಿವಸ ಕರೆಯಬೇಕೆಂದು ತೀರ್ಮಾನ ಮಾಡಲಾಗಿದೆ. ಈ ಒಂದು ಸಭೆಯಲ್ಲಿ ಚರ್ಚೆ ಮಾಡಿ ಒಂದು ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನಾವು ಈಗಾಗಲೇ ಯೋಚನೆ ಮಾಡಿದ್ದೇವೆ. ನಾವು ಈಗಾಗಲೇ ರೈತರ ಸರ್ಕಾರ ಎನ್ನತಕ್ಕಂಥ ಮಾತನ್ನು ಹೇಳಿರುವುದರಿಂದ ರೈತರ ಪರವಾಗಿ ಇರತಕ್ಕಂಥ ಕಾರ್ಯಕ್ರಮಗಳನ್ನು ಖಂಡಿತ ಮಾಡುತ್ತೇವೆ.

ಶ್ರೀ ವೆಂಕಟರಮಣಪ್ಪ : ಈಗಾಗಲೇ ಕಡಲೇಕಾಯಿಗೆ ಕೆಂಪು ಹುಳು ಬಿದ್ದಿದೆ. ಆದ್ದರಿಂದ ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ರೈತರು ಬೆಳೆದಂಥ ಬೆಳೆಗೆ ಬೆಲೆ ನಿಗದಿ ಮಾಡುವ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಇವತ್ತಿನ ದಿವಸ ಕಬ್ಬು ಉತ್ಪಾದಕ ಸಣ್ಣ ಗುಂಡುಸೂಜಿಯನ್ನು ಉತ್ಪಾದನೆ ಮಾಡಿ ಬೆಲೆಯನ್ನು ನಿಗದಿ ಮಾಡತಕ್ಕಂಥ ಕಾಲದಲ್ಲಿರುವಾಗ ಇವತ್ತಿನ ದಿವಸ ರೈತ ಯಾವ ಪರಿಸ್ಥಿತಿಯಲ್ಲಿದ್ದಾನೆ ಎಂದರೆ, ಈತ ಹೂಡಿರುವ ಬಂಡವಾಳ ಮತ್ತೆ ವಾಪಸ್ಸು ಬರುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥ ಪರಿಸ್ಥಿತಿಯಲ್ಲಿ ರೈತ ಇದ್ದಾನೆ. ಇದರಿಂದ ಕೃಷಿ ಕಸುಬನ್ನು

ಬಿಟ್ಟು ಬಿಡತಕ್ಕಂಥ ಪ್ರಮೇಯಕ್ಕೆ ರೈತ ಬಂದಿದ್ದಾನೆ. ಆದ್ದರಿಂದ ನಮ್ಮ ಸರ್ಕಾರ ರೈತ ಬೆಳೆದಂಥ ಬೆಳೆಗೆ ಮಿನಿಮಮ್ ಸಪೋರ್ಟ್ ಪ್ರೈಸ್ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ತಂದಿರತಕ್ಕಂಥ ಆಮದು ನೀತಿಯಿಂದ ಉತ್ಪಾದನೆಯಾಗಿರತಕ್ಕಂಥ ಸಕ್ಕರೆ ಗೋಡಾನ್ ನಲ್ಲಿ ಇವತ್ತಿನ ದಿವಸ ಹಾಗೆಯೇ ಉಳಿದುಕೊಂಡಿದೆ. ಇದರಿಂದ ನಮ್ಮ ಕೃಷಿ ಉತ್ಪನ್ನಗಳಿಗೂ ಕೂಡ ಬಹಳಷ್ಟು ತೊಂದರೆಯಾಗಿದೆ. ಇದರಿಂದ ಬೆಲೆಗಳು ಕಡಿಮೆಯಾಗಿರುವುದರಿಂದ ಎ.ಪಿ.ಎಂ.ಸಿ.ಯಲ್ಲಿ ರೈತರು ರಸ್ತೆಗೆ ಬಂದು ಅನೇಕ ಅನಾಹುತಗಳು ಆಗಿರುವಂಥದ್ದನ್ನು ನಾವು ನೋಡಿದ್ದೇವೆ. ಆದ್ದರಿಂದ ಕನಿಷ್ಠ ಬೆಂಬಲ ಬೆಲೆಯನ್ನಾದರೂ ಸರ್ಕಾರ ಕಡ್ಡಾಯವಾಗಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಸರಿಯಾದ ಬಿತ್ತನೆ ಬೀಜ ದೊರಕದೇ ರೈತನಿಗೆ ಬಹಳ ತೊಂದರೆಯಾಗಿದೆ. ಏನೇ ಕಾನೂನು ಇದ್ದರೂ ಕೂಡ ರೈತನಿಗೆ ಕಳಪೆ ಬಿತ್ತನೆ ಬೀಜವನ್ನು ಒದಗಿಸುತ್ತಿದ್ದಾರೆ. ಇಂಥ ಬೀಜಗಳಿಂದ ಬೆಳೆ ಸರಿಯಾಗಿ ಬಾರದೆ ಇರುವುದರಿಂದ ರೈತ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪ್ರಸಂಗವನ್ನು ನಾವು ನೋಡುತ್ತಿದ್ದೇವೆ. ಇವತ್ತಿನ ದಿವಸ ಅಗ್ರಿಕಲ್ಚರ್ ಕಮೀಷನ್ ಮಾಡಿರುವುದು ಸ್ವಾಗತಾರ್ಹವಾದ ವಿಚಾರವಾಗಿದೆ. ಇವತ್ತಿನ ದಿವಸ ರೈತ ಇನ್ನು ಸಂಘನೆಯಾಗಿಲ್ಲ. ಅನೇಕ ರೈತ ಸಂಘಟನೆಗಲು ಇದ್ದರೂ ಕೂಡ ರೈತನ ಧ್ವನಿ ಇದುವರೆಗೂ ಸರ್ಕಾರಕ್ಕೆ ತಲುಪಿಲ್ಲ. ಈಗ ಇರತಕ್ಕಂಥ ರೈತ ಸಂಘಟನೆಗಳು ಛಿದ್ರ ಛಿದ್ರವಾಗಿವೆ. ಸ್ವಾಯತ್ತ ಸಂಸ್ಥೆ ಅಥವಾ ಫೋರಂಗಳ ಮೂಲಕ ರೈತ ಸರ್ಕಾರವನ್ನು ನೇರವಾಗಿ ನೋಡತಕ್ಕಂಥ ವ್ಯವಹಾರ ಜ್ಞಾನ ಸಂಜಟನಾ ಶಕ್ತಿ ಅಥವಾ ಮನೋಧರ್ಮವಾಗಲಿ ರೈತನಿಗಿಲ್ಲ. ಆದ್ದರಿಂದ ಇದಕ್ಕೆ ಖಾಯಂ ಪರಿಹಾರ ದೊರಕಿಸಿ ಕೊಡುವ ಬಗ್ಗೆ ಸರ್ಕಾರ ಗಮನಹರಿಸಬೇಕು. ಕೃಷಿಯಲ್ಲಿ ಆಗತಕ್ಕಂಥ ತೊಂದರೆಗಳು ಅಥವಾ ಅಡೆತಡೆಗಳನ್ನು ನಿವಾರಣೆ ಮಾಡುವುದಕೋಸ್ಕರ ಅನೇಕ ಉದಾರೀಕರಣ, ಜಾಗತೀಕರಣದಿಂದ ಈ ಒಂದು ಕೃಷಿ ಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆಯಾಗುತ್ತಿದೆ. ಆದರೆ, ಇದು ಯಾವ ರೈತನಿಗೂ ತಲುಪಿಲ್ಲ. ವರ್ಲ್ಡ್ ಟ್ರೇಡ್ ಆರ್ಗನೈಜೇಷನ್ ಅಥವಾ ಗ್ಯಾಟ್ ಆರ್ಗನೈಜೇಷನ್ ಬಗ್ಗೆ ಒಬ್ಬ ಶ್ರೀಸಾಮಾನ್ಯ ರೈತನಿಗೆ ಇದುವರೆಗೂ ಗೊತ್ತಿಲ್ಲ. ಮಾರ್ಕೆಟ್ ಓರಿಯೆಂಟೆಡ್ ಹಾಗೂ ಮಿಕ್ಸೆಡ್ ಫಾರ್ಮ್ ಮಾಡುವ ಬಗ್ಗೆ ಸರ್ಕಾರ ಈ ದಿಕ್ಕಿನಲ್ಲಿ ಗಮನ ಹರಿಸಬೇಕು. ಇವತ್ತಿನದಿವಸ ಸ್ವಾಯತ್ತ ಸಂಸ್ಥೆ ಅಥವಾ ಫೋರಂಗಳ ಮೂಲಕ ರೈತನ ದುಃಖದುಮ್ಮಾನಗಳನ್ನು, ಕಷ್ಟನಷ್ಟಗಳನ್ನು ಕೇಳತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ನಿರ್ಮಾಣ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ನಾನು ಈಗಾಗಲೇ ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಿದ್ದೇನೆ. ಆದರೆ ರೈತ ಸಂಘಟನೆ ಆಗಿಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ನಾವು ಕೂಡ ಒಪ್ಪಲೇ ಬೇಕಾಗುತ್ತದೆ. ನಾವೆಲ್ಲರೂ ಕೂಡ ಮುಂದಿನ ದಿವಸಗಳಲ್ಲಿ ಒಂದು ಕಾರ್ಯ ಯೋಜನೆಯನ್ನು ನಿರ್ಮಾಣ ಮಾಡಿಕೊಂಡು ರೈತನನ್ನು ಸಂಘಟನೆ ಮಾಡತಕ್ಕಂಥ ದಿಕ್ಕಿನಲ್ಲಿ ನಾವು ಹೋಗಲೇಬೇಕಾಗುತ್ತದೆ. ಬಹುಶಃ ಅಸಂಘಟಿತ ವಲಯದಲ್ಲಿ ರೈತನಿರುವುದರಿಂದ ಆತನಿಗೆ ಯಾವುದೇ ಸವಲತ್ತುಗಳನ್ನು ಕೊಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದ ಬೆಂಬಲ ಬೆಲೆ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಕೇಂದ್ರ ಸರ್ಕಾರದ ನೀತಿಯ ಬಗ್ಗೆ ಹೇಳುವುದಾದರೆ ಟ್ಯಾಕ್ಸ್ ಹಾಕುವಂತಹ ಅವಕಾಶ ಅವರಿಗಿದೆ. ಅವರು 300 ಪರ್ಸೆಂಟ್ ಟ್ಯಾಕ್ಸ್ ಹಾಕುವಂತಹ ಅವಕಾಶವಿದ್ದರೆ ಅವರು ಕೇವಲ 25 ಪರ್ಸೆಂಟ್ ಟ್ಯಾಕ್ಸ್‌ನ್ನು ಹಾಕುತ್ತಾರೆ. ಅವರು 25 ಪರ್ಸೆಂಟ್ ಟ್ಯಾಕ್ಸ್‌ಗಿಂತ ಮೇಲೆ

ಹೋಗಲಿಲ್ಲ. ನೀವು ಸಕ್ಕರೆ ನಾಡಿನಿಂದ ಬಂದು ಇವತ್ತು ನಿಮ್ಮ ಸಕ್ಕರೆ ಕೊಳೆ ಯುವಂತಹ ಪರಿಸ್ಥಿತಿಯಾಗಿದೆ. ನಿಮ್ಮ ನೀತಿಯನ್ನು ಸರಿಪಡಿಸಿ ಎಂದು ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ಕೊನೆಯ ಪಕ್ಷ ತಾವು ಏನು ಮಾಡದೆ ಇದ್ದರೂ ಪರವಾಗಿಲ್ಲ ಹೊಸ ಪಾಲಿಸಿಯನ್ನು ತರಬೇಕಾದರೆ, ಕೊನೆಯ ಪಕ್ಷ ರಾಜ್ಯವನ್ನಾದರೂ ಕೇಳಿ ಮಾಡಬೇಕು ಎಂದು ಹೇಳುತ್ತೇನೆ. ಈಗಾಗಲೇ ಮುಖ್ಯಮಂತ್ರಿಗಳು ಕೂಡ, ಇದನ್ನು ವಿಶೇಷವಾಗಿ ಮುಖ್ಯಮಂತ್ರಿಗಳ ಸಭೆಯಲ್ಲೂ ಹಾಗೂ ಎನ್‌ಡಿಎ ಸಭೆಯಲ್ಲಿ ಪ್ರಸ್ತಾಪ ಮಾಡಬೇಕೆನ್ನುವ ತೀರ್ಮಾನವನ್ನು ಮಾಡಿದ್ದೇವೆ, ನೀವು ಹೇಳಿರತಕ್ಕಂಥದ್ದು ಎಲ್ಲವೂ ಸರ್ಕಾರದ ಗಮನದಲ್ಲಿದೆ.

ಶ್ರೀ ಶ್ರೀ ರಂಗದೇವರಾಯಲು (ಗಂಗಾವತಿ) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರವು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದೆ. ಆದರೆ ರೈತರ ಕಷ್ಟದಲ್ಲಿ ನಾನಿದ್ದೇನೆ ಎನ್ನುವ ಯೋಜನೆ ನಮಗೇನೂ ಕಾಣುತ್ತಿಲ್ಲ. ಉದಾಹರಣೆಗೆ ಗಂಗಾವತಿಯ ಬಗ್ಗೆ ಅವರು ಹೇಳಿದರು, ಪೇಟೆಯಲ್ಲಿ ಸೂಪರ್‌ಕ್ವಾಲಿಟಿ ರೈಸ್‌ನ ಬೆಲೆ 150 ರೂಪಾಯಿ ಇದೆ, ಕಳೆದ ವರ್ಷ ಇದೇ ಸಂದರ್ಭದಲ್ಲಿ 75 ಕಿಲೋನ ಒಂದು ಬ್ಯಾಗ್ 700 ರೂಪಾಯಿ ಇದ್ದದ್ದು ಈಗ 550 ರೂಪಾಯಿಗಳು ಆಗಿದೆ. ಆದರೆ ಅಕ್ಕಿಯ ಧಾರಣೆ ಕಡಿಮೆಯಾಗಲಿಲ್ಲ. ಅಕ್ಕಿಯ ಬೆಲೆ ಕಡಿಮೆಯಾಗಿದ್ದರೆ ನಾವು ಒಪ್ಪಬಹುದಾಗಿತ್ತು. ಪೇಟೆಯಲ್ಲಿ ಭತ್ತದ ಬೆಲೆ ಜಾಸ್ತಿಯಾಗಿರುವುದರಿಂದ ರೈತರಿಗೆ ಕಷ್ಟವಾಗಿದೆ. ನಮಗೆ ವಿಮಾ ಯೋಜನೆಯು ಬಹಳ ಮುಖ್ಯ. ನಾವು ಈಗ ಗ್ರಾಮ ಪಂಚಾಯಿತಿ ವೈಸ್ ಒಂದು ಗುಂಪು ವಿಮೆಯನ್ನು ಮಾಡಿಸಿದ್ದೇವೆ. ಇದರಲ್ಲಿ ನಷ್ಟವಾದರೆ ನಷ್ಟವನ್ನು ತುಂಬಿ ಕೊಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಸಾಮಾನ್ಯವಾಗಿ ಬ್ಯಾಂಕಿನಲ್ಲಿ ವಿಮೆಯ ಬಗ್ಗೆ 2-3 ಪರ್ಸೆಂಟ್ ಕಟ್ ಮಾಡುತ್ತಾರೆ, ಆದರೆ ಒಂದು ಏರಿಯಾದಲ್ಲಿ ಬೆಳೆ ಲಾಸ್ ಆದರೆ ಮಾತ್ರ ನಾವು ಕ್ಲೈಮ್ ಮಾಡುವುದಕ್ಕೆ ಅವಕಾಶವಿದೆ. ಆದರೆ ನಾವುಏನು ಕೇಳುತ್ತಿದ್ದೇವೆಂದರೆ, ಗ್ರಾಮಪಂಚಾಯಿತಿ ವೈಸ್ ವಿಮೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ ತೆಂಗಿನ ಬೆಲೆ ಏನು ಇದೆ ಅದು 2 ರೂಪಾಯಿಗಳಿದೆ, ಅದರ ಬಗ್ಗೆ ತಾವು ಏನು ಮಾಡುತ್ತೀರಿ? ಆಯಿಲ್ ಸೀಡ್ಸ್ ಫೇಡರೇಷನ್‌ನರಿಗೆ ತೆಂಗು ಪರ್ಚೇಸ್ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಸ್ವಲ್ಪ ರೇಟಾದರೂ ಸಿಗುತ್ತದೆ. ಈ ಬಗ್ಗೆ ತಾವು ಗಮನವನ್ನು ಹರಿಸಬೇಕಾಗುತ್ತದೆ. ಸರ್ಕಾರವು ರೈತರ ಕಷ್ಟಗಳಲ್ಲಿ ಭಾಗಿಯಾಗಿದೆ ಎಂದು ತೋರಿಸಿಕೊಳ್ಳುವುದಾದರೆ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಕಷ್ಟಪಟ್ಟು ಬೆಳೆ ಬೆಳೆದ ರೈತನಿಗೆನಾವು ನಿಮ್ಮ ಹಿಂದೆ ಇದ್ದೇವೆ ಎಂದು ಧೈರ್ಯವಾಗಿ ಹೇಳಿದರೆ ಅವರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ : ಈಗಾಗಲೇ ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ, ಇನ್‌ಷೂರೆನ್ಸ್‌ನ್ನು ತರಬೇಕಾದಾಗ ಹೊಸ ನೀತಿಯಂತೆ ರಾಜ್ಯ ಸರ್ಕಾರವು ಈಗಾಗಲೇ, ನಾವು ತಾಲ್ಲೂಕಿನ ಯೂನಿಟ್‌ನ್ನು ಬಿಟ್ಟು ಗ್ರಾಮ ಪಂಚಾಯಿತಿಯನ್ನು ಒಂದು ಯೂನಿಟ್‌ನ್ನಾಗಿ ಮಾಡಬೇಕೆಂಬ ತೀರ್ಮಾನದಲ್ಲಿದ್ದೇವೆ. ಈಗಾಗಲೇ ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಮಧ್ಯೆ ಅದು ಇತ್ಯರ್ಥವಾಗಬೇಕಾಗಿದೆ. ಈ ವಿಷಯವು ಇನ್ನು ಅಲ್ಲಿಯೇ ಇದೆ, ತಾವು ಹೇಳತಕ್ಕಂಥದ್ದು ಸ್ಪಷ್ಟ, ಆ ಮಾತನ್ನು ನಾನು ಒಪ್ಪುತ್ತೇನೆ. ನಾವು ಕೆಳಮಟ್ಟಕ್ಕೆ ತೆಗೆದುಕೊಂಡು ಹೋದಾಗ ಒಂದು ಯೂನಿಟ್ ಎಂದು ಮಾಡಿದಾಗ ಆಗ ರೈತರಿಗೆ ಸಹಾಯವಾಗುತ್ತದೆ. ಆದರೆ ತಾಲ್ಲೂಕನ್ನು ಒಂದು ಯೂನಿಟ್‌ನ್ನಾಗಿ ಮಾಡುವುದಕ್ಕಾಗುವುದಿಲ್ಲ, ಎಂಬುದು ಸರ್ಕಾರಕ್ಕೆ ಅರಿವಿದೆ. ನಾನು ಹೋದವಾರ ಗಂಗಾವತಿಗೆ ಹೋಗಿದ್ದೆ, ನಾನು ಮಾನ್ಯ ಸದಸ್ಯರ ಜೊತೆ ಕುಳಿತುಕೊಂಡು ಇದನ್ನು ನೋಡಿದ್ದೇನೆ. ಅವರು ಒಳ್ಳೆಯ

ಭತ್ತದ ಬೆಳೆಯನ್ನು ಬೆಳೆಯುತ್ತಾರೆ, ಇದರ ಬಗ್ಗೆ ನಾನು ಅವರನ್ನ ನೋಡಿಯೇ ಹೇಳಿದ್ದೇನೆ. ಅವರು ಒಳ್ಳೆಯ ಭತ್ತ ಬೆಳೆಯುವುದರ ಜೊತೆಗೆ ಅಷ್ಟೇ ಪೆಸ್ಟಿಸೈಡ್ಸ್‌ನ್ನು ಕೂಡ ಹಾಕುತ್ತಾರೆ ಅದರ ಬಗ್ಗೆ ಟೆಕ್ನಾಲಜಿಯು ಸಾಕಷ್ಟು ಬದಲಾವಣೆಗಳಾಗಬೇಕು ಎಂಬುದರ ಬಗ್ಗೆಯೂ ಸಹ ನಾನು ಹೇಳಿದ್ದೇನೆ. ಬೆಲೆ ಕುಸಿದಿರುವ ಬಗ್ಗೆ ತಾವು ಹೇಳುತ್ತಿರುವ ಮಾತು ಸತ್ಯವಾಗಿದೆ, ಅಕ್ಕಿಯ ಬೆಲೆಯು ಕಡಿಮೆಯಾಗಿಲ್ಲ, ಆದರೆ ಭತ್ತದ ಬೆಲೆಯು ಕುಸಿದಿದೆ ಎನ್ನತಕ್ಕಂಥದ್ದು, ರಾಜ್ಯ ಸರ್ಕಾರದ 490- 500ಏನ ಬೆಂಬಲ ಬೆಲೆ ಇದೆ, ಅದಕ್ಕಿಂತ ಬೆಲೆಯು ಕಡಿಮೆಯಾದಾಗ ಅದನ್ನು ಯಥೇಚ್ಛವಾಗಿ ಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ. ಬೆಲೆಯು ವಾಸ್ತವಿಕತೆಗಿಂತ ಹೆಚ್ಚಾಗಿ 100- 150 ಕಡಿಮೆಯಾಗಿರುವಂಥದ್ದು, ಅದನ್ನು ಮಾರ್ಕೆಟ್ ಸ್ಟ್ಯಾಟಿಸ್ಟಿಕ್ಸ್‌ನ ಪ್ರಕಾರ ನಾವು ಆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ನಾವು ಈಗಾಗಲೇ ನಮ್ಮ ಅಧಿಕಾರಿಗಳನ್ನು ಕಳುಹಿಸಿ, ನಾವು ಯಾವ ರೀತಿಯಾಗಿ ಕ್ರಮವನ್ನು ಕೈಗೊಳ್ಳಬೇಕು, ದಳ್ಳಾಳಿಗಳಿಂದ ಆಗಿರುವಂತಹ ಶೋಷಣೆ, ವ್ಯಾಪಾರದಾರರಿಂದ ಶೋಷಣೆಯಾಗುವಂತದ್ದನ್ನು, ಬೆಲೆಗಳನ್ನು ಕೃತಕವಾಗಿ ಇಳಿಸುವಂತಹದ್ದನ್ನು ನಿರ್ಮಾಣ ಮಾಡುವಂತದ್ದರ ಬಗ್ಗೆ ಕೂಡ ಈಗಾಗಲೇ ಗಮನವನ್ನು ಹರಿಸಿ, ನಾವು ಈಗಾಗಲೇ ಅದರ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದೇವೆ. ಬಹುಶಃ ರೈತರಿಗೆ ಬೆಲೆಯಲ್ಲಿ ಶೋಷಣೆಯಾಗುವುದನ್ನು ನಿಲ್ಲಿಸುತ್ತೇವೆ. ಆಗ ನಮ್ಮಲ್ಲಿರುವಂತಹ ಲಿಮಿಟೆಡ್ ಸ್ಕೋಪ್ ನಮಗೆ ಬೆಂಬಲ ಬೆಲೆಯು ಕಡಿಮೆ ಬಂದಾಗ ಬರಬಹುದು. ಆದರೆ ಬೆಲೆಯು ಕಡಿಮೆಯಾದಾಗ ಸ್ವಲ್ಪ ನಾವು ಚುರುಕುಗೊಳಿಸುವಂತಹ ಕೆಲಸವನ್ನು ಮಾಡಬೇಕಾಗುತ್ತದೆ, ಅದನ್ನು ಖಂಡಿತವಾಗಿ ಮಾಡುತ್ತೇವೆ.

ಶ್ರೀಶ್ರೀರಂಗದೇವರುಯಲು : ಲೆವಿ ಪಾಲಿಸಿಯನ್ನು ಮಾಡಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ನಮ್ಮ ಗಂಗಾವತಿಯಲ್ಲಿ 30ರೀದ 40 ಪರ್ಸೆಂಟ್ ಲೆವಿಯನ್ನು ಕಟ್ಟುತ್ತೆವೆ. ಲೆವಿಪಾಲಿಸಿಯಿಂದ ನಮಗೆ ರೇಟ್ ಕುಸಿತ, ಇಲ್ಲ ವ್ಯಾಪಾರಸ್ಥರ ಮೋಸದಿಂದ ಕೂಡಿದೆ. ತಾವು ಮಧ್ಯ ಪ್ರವೇಶಿಸಿ ರೈತರ ಒಂದು ಕಷ್ಟಸುಖಗಳಲ್ಲಿ ಭಾಗಿಯಾಗಿದ್ದೇವೆಂದು ತೋರಿಸಿಕೊಟ್ಟಾಗ ಮಾತ್ರ ಒಳ್ಳೆಯದಾಗುತ್ತದೆ. ಸರ್ಕಾರ ಫಿಕ್ಸ್ ಮಾಡಿದಂತಹ ರೇಟ್ ಮಾಡಿದರೆ ಆಗುವುದಿಲ್ಲ. ರೈತರ ಕಷ್ಟದಲ್ಲಿ ಭಾಗಿಯಾದರೆ ಆಗುತ್ತದೆ. ಇದು ಯಾವ ಕಾರಣದಿಂದ ಆಗಿದೆ, ಲೆವಿ ಪಾಲಿಸಿಯನ್ನು ತಂದರೆ ನೀವು ಮಧ್ಯಬಂದು ರೈತರಿಗೆ ಅನ್ಯಾಯವಾಗದ ರೀತಿಯಲ್ಲಿ ಮಾಡಿದರೆ ಮಾತ್ರ ರೈತನಿಗೆ ಸುಗಮವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಲೆವಿಯಿಂದಲೂ ಬೆಲೆ ಕಡಿಮೆಯಾಗುವುದಕ್ಕೆ ಸಾಧ್ಯ ಮತ್ತು ವರ್ತಕರಿಂದಲೂ ಬೆಲೆ ಕಡಿಮೆಯಾಗುವುದಕ್ಕೆ ಸಾಧ್ಯವಾಗುತ್ತದೆ. ಆದರೆ ತಾವು ಒಂದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಲೆವಿ ಇರತಕ್ಕಂಥದ್ದು ರೈತರ ಬೆಳೆಗಾರರಿಗೆ ವಿನಃ ಕೈಗಾರಿಕೋದ್ಯಮಿಗಳಿಗೆ ಲೆವಿ ಇಲ್ಲ. ಇದು ನಮ್ಮ ದೇಶದ ನೀತಿಯಾಗಿದೆ. ನಾವು ಕೃಷಿಯಲ್ಲಿ ಬೆಳೆಯತಕ್ಕಂತವನಿಗೆ ಅವನಿಗೆ ಲಾಭವಿಲ್ಲದಿದ್ದರೂ ನಾವು ಅವನಿಗೆ ಲೆವಿ ನೀತಿಯನ್ನು ಮಾಡುತ್ತೇವೆ. ಅಗ್ರಿಕಲ್ಚರ್ ಫುಡ್ ಪ್ರೊಡಕ್ಷನ್‌ಗೆ ಲೆವಿ ನೀತಿ ಮಾಡುತ್ತೇವೆ, ಆದರೆ ಕೈಗಾರಿಕೆಯವರ ಮೇಲೆ ಇದು ಇಲ್ಲ. ಇವೆಲ್ಲವೂ ಕೂಡ ಸರ್ಕಾರದ ಗಮನದಲ್ಲಿದೆ, ಮತ್ತು ವರ್ತಕರಿಂದಲೂ ಕೂಡ ಇದು ಆಗುತ್ತದೆ. ಅದಕ್ಕೆ ನಾವು ಮಧ್ಯೆ ಪ್ರವೇಶವನ್ನು ಮಾಡಿ ತಮಗೆ ಸಮಜಾಯಿಷಿಯನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಬಯೋಟೆಕ್ನಾಲಜಿಯ ಬಗ್ಗೆ ಹೇಳಿದರು. ಅದು ವಾಸ್ತವಿಕವಾಗಿ ಅತ್ಯಂತ ಸತ್ಯವಾದ ಮಾತು.

ಭವಿಷ್ಯದಲ್ಲಿ ಬಯೋಟೆಕ್ನಾಲಜಿಯಿಂದ ಮಾತ್ರ ನಮ್ಮ ದೇಶದ ಆಹಾರದ ಪೂರೈಕೆಯನ್ನು, ಅಗತ್ಯವನ್ನು ಪೂರೈಸಬಹುದು. ಇದರ ಬಗ್ಗೆ ಸಾಕಷ್ಟು ಗಮನನವನ್ನು ಹರಿಸಿಲ್ಲವೆಂದು ನನ್ನ ಅಪಾದನೆಯಾಗಿದೆ. ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರ ಬರೀ ಯಾವುದೇ ಒಂದು ದೊಡ್ಡ ಕಂಪನಿ, ಇದರ ಬಗ್ಗೆ ಪ್ರಚಾರ ಮಾಡಿದರೆ ನಮ್ಮ ಬೀಜವನ್ನು ಮಾರಾಟ ಮಾಡಲಿಕ್ಕೆ ಪ್ರಯತ್ನ ಮಾಡಿದೆವು. ಆಗ ಇವರು ಕಣ್ತೆರದು ಅದರ ಬಗ್ಗೆ ವಿಚಾರವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರು ಎನ್ನುವ ಸನ್ನಿವೇಶ ಬಂತು. ಅನೇಕ ರೈತರ ಸಂಘಟನೆಗಳು ಅದನ್ನು ವಿರೋಧ ಮಾಡಿತು. ಆದರೆ ವಾಸ್ತವಿಕವಾಗಿ ಅಲ್ಲಿ ಅಡಗಿದಂತಹ ಅನೇಕ ಅಂಶಗಳಲ್ಲಿ ವಿಶೇಷವಾಗಿ ಟರ್ಮಿನೇಟೆಡ್ ಟೆಕ್ನಾಲಜಿಯ ಬಗ್ಗೆ ಬಹಳಷ್ಟು ಘಟನೆಗಳು ಆಗಿದ್ದವು. ಅದರಲ್ಲಿ ಸತ್ಯಮತ್ತು ಅಸತ್ಯಗಳು ಏನಿತ್ತು ಅದರ ಬಗ್ಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ, ರಾಷ್ಟ್ರಮಟ್ಟದಲ್ಲಿ ಐಸಿಆರ್‌ಗಳನ್ನು ಮತ್ತೊಂದನ್ನು ಮಾಡಿ ಅದನ್ನು ಅಷ್ಟಕ್ಕೆ ಬಿಟ್ಟರೆ ಬಹುತೇಕವಾಗಿ ನಾವು ಇನ್‌ಫಾರ್ಮೇಷನ್ ಟೆಕ್ನಾಲಜಿಯನ್ನು ರಾಜ್ಯದಲ್ಲಿ ಏನು ನಿರೀಕ್ಷೆಮಾಡುತ್ತೇವೆ ಅದರಿಂದ ಬಹಳಷ್ಟು ಆದಾಯಗಳು ಬರುತ್ತದೆ. ರೈತರಿಗೆ ಅದನ್ನು ಬಿಟ್ಟು ಬೇರೆ ದಾರಿಯಿರುವುದಿಲ್ಲ. ಇವತ್ತು ತಾವು ಹೇಳುತ್ತೀರಿ. ಇವತ್ತು ನಾವು ಕಾಂಪಿಟ್ ಮಾಡಬೇಕು, ಎಕ್ಸ್‌ಪೋರ್ಟ್‌ನ್ನು ಮಾಡಬೇಕು, ನೀವು ಏನು ಮಾಡಿದರೂ ಸಹ ಹೊರಗೆ ಹೋಗುವುದಕ್ಕೆ ಸಾಧ್ಯವಿಲ್ಲ, ಡಬ್ಲ್ಯೂಟಿಒ ಬಂದರೆ ಇದಕ್ಕಿಂತ ಹೆಚ್ಚು ಕೆಟ್ಟ ಪರಿಸ್ಥಿತಿಯು ಉಂಟಾಗುತ್ತದೆ. ಆಗ ಅದನ್ನು ಎದುರಿಸುವುದಕ್ಕೆ ಒಂದು ವ್ಯಾಪಕವಾದಂತಹ ಕಾರ್ಯಕ್ರಮ ಇವತ್ತೇ ಆಗಬೇಕು. ಆ ಮಟ್ಟದ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಬಯೋಟೆಕ್ನಾಲಜಿಯನ್ನು ಹೆಚ್ಚು ವ್ಯಾಪಕವಾಗಿ ಅರ್ಥವತ್ತಾಗಿ ಮಾಡಬೇಕಾಗಿತ್ತು ಈ ವಿಶ್ವವಿದ್ಯಾನಿಲಯಗಳು ಇವತ್ತು ನಿದ್ದೆ ಮಾಡುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಇನ್ನು ಹತ್ತಿಯ ಬಗ್ಗೆ ತಾವು ಹೇಳಿದ್ದೀರಿ. 16 ಲಕ್ಷ ಹೆಕ್ಟೇರ್ ಹತ್ತಿಯನ್ನು ಬೆಳೆಯುತ್ತಿದ್ದಾರೆ, ದೇಶದಲ್ಲೆಲ್ಲಾ ಅಂತರರಾಷ್ಟ್ರೀಯ ಮಟ್ಟಕ್ಕೂ ಸಹಿತ ಬಹುತೇಕವಾಗಿ ಉದ್ದ ಎಳೆ ಹತ್ತಿಯನ್ನು ಬಿಟ್ಟರೆ ನಮ್ಮ ರಾಷ್ಟ್ರದಲ್ಲಿ ಎಕ್ಸ್‌ಟ್ರಾ ಲಾಂಗ್‌ಸ್ಟೇಪ್ ಹತ್ತಿಯು ಬಹಳ ಪ್ರಸಿದ್ಧವಾಗಿತ್ತು ಅದರೆ ದುರ್‌ದೈವದಿಂದಾಗಿ ಕೈಗಾರಿಕೆಗಳು ಸಿಕ್ ಆಗಿವೆ, ಇವತ್ತು ರೈತರು ಅಲ್ಲಿ ಏನು ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ರೋಗರುಜಿನಗಳು ಬರುತ್ತಿದೆ. ಹೈಬ್ರಿಡ್, ನಾವು ಏನು ಪರಂಪರಾನುಗಾತವಾಗಿ ಬಂದು ದೇಶಿಯ ಹತ್ತಿ ಬೀಜವನ್ನು ನಾವು ಬೆಳೆದುಕೊಳ್ಳುತ್ತೇವೆ, ಇವತ್ತಿಗೂ ಜೈದರ್ ಎಂದು ಇದೆ. ಲಕ್ಷ್ಮಿ ಎಂದು ಇದೆ, ಮತ್ತೊಂದು ಇದೆ, ಸೆಲ್ಫ್ ಜನರೇಟಿಂಗ್ ಮಲ್ಟಿಪ್ಲೈ ಎನಿದೆ ಅದು ನಡೆಯುತ್ತಿದೆ. ಆದರೆ ಹೈಬ್ರಿಡೇಷನ್ ಮಾಡಿದಂತಹ ಸೀಡ್ಸ್ ಇವತ್ತು ಬಹಳ ಡೀಜನರೇಟ್ ಆಗಿದೆ. ಇವತ್ತು ರೈತರು ಆ ಭಾಗದಲ್ಲಿ ವಾಣಿಜ್ಯ ಬೆಳೆ ಇಲ್ಲದಿದ್ದರೆ ರೈತರಿಗೆ ಲಾಭವಿರುವುದಿಲ್ಲ. ಆಹಾರದ ಬೇಳೆ ಕಾಳುಗಳು, ಬೆಳೆದರೆ ಲಾಭವಿರುವುದಿಲ್ಲ. ಆ ವಾಣಿಜ್ಯ ಬೆಳೆಗಳನ್ನು ಸುಧಾರಿಸಲಿಕ್ಕೆ ಅದನ್ನು ಅಭಿವೃದ್ಧಿ ಪಡಿಸಲಿಕ್ಕೆ ತಾವು ಏನು ಕಾರ್ಯಕ್ರಮ ವನ್ನು ಹಾಕಿಕೊಂಡಿದ್ದೀರಿ? ಕೊನೆಯದಾಗಿ ಎಣ್ಣೆ ಬೀಜಗಳ ಬಗ್ಗೆ ತಾವು ಏನು ಹೇಳಿದ್ದೀರಿ, ಇದು ತಮಗೆ ಗೊತ್ತಿದೆ, ಎಣ್ಣೆ ಬೀಜ, ಸೂರ್ಯಕಾಂತಿ ಇವತ್ತು ವಿಶೇಷವಾಗಿ ದೇಶದಲ್ಲಿ ನಮ್ಮ ರಾಜ್ಯವು ಪ್ರಥಮವಾಗಿತ್ತು. ಆದರೆ ಆ ಬೆಳೆಯನ್ನು ಇವತ್ತು ನಿಲ್ಲಿಸಿಬಿಟ್ಟಿದ್ದಾರೆ. ಅದನ್ನು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಇಂಪೋರ್ಟ್ ಮಾಡುವಂತದ್ದು, ನಮ್ಮಲ್ಲಿ ಬೇಕಾದಂತಹ ಒಳ್ಳೆಯ ಬೀಜಗಳು ಸಿಗುತ್ತಿಲ್ಲ. ಹೀಗಾಗಿ ಬೆಳೆಗಾರರು ಬಿಟ್ಟು ಬಿಡುತ್ತಾರೆ, ಇದರಿಂದಾಗಿ ಬೆಳೆ ನಾಶವಾಗುತ್ತಿದೆ, ಅದರಿಂದಾಗಿ ತೊಂದರೆಯಾಗುತ್ತದೆ. ಕೈಗಾರಿಕೆಗಳು ಸಹ ಹಾಳಾಗುತ್ತಿದೆ. ಅದರ ಬಗ್ಗೆ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇವತ್ತು ರೈತರ ಬಗ್ಗೆ ತಾವು ಹೇಳಿದ್ದೀರಿ. ಇನ್‌ಷೂರೆನ್ಸ್ ಬಗ್ಗೆ ತಾವು ದೊಡ್ಡದಾದ

ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಬಗ್ಗೆ ಮಾನ್ಯ ಮುಖ್ಯಮಂತ್ರಿ ಗಳು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದು ಅತ್ಯಂತ ಸ್ವಾಗತಾರ್ಹವಾದಂತದ್ದು, ಅದರಿಂದಾಗಿ ನಮ್ಮ ರೈತರಿಗೆ ಲಾಭವಾಗುತ್ತದೆಂಬ ಆಶಯ ಇದ್ದರೂ ಕೂಡ, ಇವತ್ತು ಹಳ್ಳಿಗಳಲ್ಲಿ ಸಣ್ಣಪುಟ್ಟ ಬೆಂಕಿ ಆಕಸ್ಮಿಕಗಳಾಗುತ್ತದೆ. ಬಣವೆ ಸುಟ್ಟುಹೋಗುತ್ತದೆ, ತೆನೆಗುಡ್ಡೆಯು ಸುಟ್ಟುಹೋಗುತ್ತದೆ, ಇದು ಆದರೆ ಅವರಿಗೆ ಏನು ಮಾಡುವುದಕ್ಕೆ ಸಾಧ್ಯವಿಲ್ಲ. ತಹಶೀಲ್ದಾರ್‌ರವರು ಮತ್ತು ಎಸಿಯವರು 500-500 ರೂಪಾಯಿಗಳನ್ನು ಕೊಡುತ್ತಾರೆ. ಲಕ್ಷಾಂತರ ರೂಪಾಯಿಗಳು ಲುಕ್ಷಾನ್ ಆದಾಗ ಯಾವುದೇ ರೀತಿಯಲ್ಲಿ ಅವರಿಗೆ ಪರಿಹಾರ, ಸ್ವಲ್ಪ ಮಟ್ಟಿಗೆ ಅವರಿಗೆ ಸಹಾಯವನ್ನು ಮಾಡುವಂತಹ ಪರಿಸ್ಥಿತಿ ಇಲ್ಲ. ಇದರ ಬಗ್ಗೆಯೂ ಸಹ ಸರ್ಕಾರದವರು ಏನಾದರೂ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಇದಕ್ಕೆಲ್ಲಿ ಉತ್ತರ ಹೇಳಿದ್ದೇನೆ. ಟ್ರಾಂಜೆನಿಕ್ ಕ್ರಾಪ್, ಟ್ರಾಂಜೆನಿಕ್ ಅನ್ನತಕ್ಕದ್ದು ಪೇಟೆಂಟ್ ಆಗಿರತಕ್ಕದ್ದು, ಈ ದೇಶದಲ್ಲಿ ಕೇಂದ್ರ ಸರ್ಕಾರ ಕೂಡ ಸ್ಪಷ್ಟವಾದ ನೀತಿಯನ್ನು ಮಾಡಿ ಟರ್ಮಿನೇಟ್ ಟೆಕ್ನಾಲಜಿಯನ್ನು ಬ್ಯಾನ್ ಮಾಡಿದೆ. ಟರ್ಮಿನೇಟ್ ಟೆಕ್ನಾಲಜಿ ಈ ದೇಶದಲ್ಲಿ ಇಲ್ಲ. ಆದರೆ ಕೆಲವು ಸಂಘಟನೆಗಳು ತಪ್ಪು ಕಲ್ಪನೆ ಯಿಂದಾಗಿ ಟರ್ಮಿನೇಟ್ ಟೆಕ್ನಾಲಜಿಯನ್ನು ಎಕ್ಸ್‌ಪರಿಮೆಂಟ್ ಮಾಡಲಿಲ್ಲವೆನ್ನುವ ಕಾರಣಕ್ಕೋಸ್ಕರ ಟ್ರಾಂಜೆನಿಕ್ ಕ್ರಾಪ್ಸನ್ನು ಇವತ್ತು ಡಿಸ್ಟರ್ಬ್ ಮಾಡತಕ್ಕ ಕೆಲಸವಾಗಿದೆ. ಅದು ಈ ದೇಶದಲ್ಲಿ ಎಲ್ಲೂ ನಡೆಯುತ್ತಿಲ್ಲ. ಒಂದು ಉದಾಹರಣೆ ಕೊಡುತ್ತೇನೆ, ನಮ್ಮ ರೈತ ಸಂಘಟನೆಯಲ್ಲಿ ಶಂಕರಿಕೊಪ್ಪ ಎಂದು ಹೇಳಿ ಅವರು ಯಾವುದೇ ಒಂದು ಕಂಪನಿ ಕೊಟ್ಟಂತಹ ಹತ್ತಿ ಬೀಜವನ್ನು ಬೆಳೆದಾಗ ಅದನ್ನು ನಮ್ಮ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಕೂಡ ಹೋಗಿ ಪರೀಕ್ಷೆ ಮಾಡಿ ಅದು ಟರ್ಮಿನೇಟ್ ಟೆಕ್ನಾಲಜಿ ಅಲ್ಲ, ಟ್ರಾಂಜೆನಿಕ್ ಟೆಕ್ನಾಲಜಿ, ಬಿ.ಟಿ. ಟೆಕ್ನಾಲಜಿಯೆಂದು ಸರ್ಟಿಫೈ ಮಾಡಿ ಸರ್ಕಾರಕ್ಕೆ ವರದಿಯನ್ನು ಕೂಡ ಕೊಟ್ಟಿದ್ದಾರೆ. ತಾವು ಹೇಳತಕ್ಕದ್ದು ಸರ್ಕಾರದ ಮಟ್ಟದಲ್ಲಿ ನಾವು ಸ್ವಲ್ಪ ಅಕ್ಸೆಪ್ಟ್ ಮಾಡತಕ್ಕ ವಿಚಾರದಲ್ಲಿ ನಿಧಾನ ಮಾಡಿದ್ದೇವೆ ಅದಕ್ಕೆ ನಾನು ಸ್ಪಷ್ಟವಾಗಿ ನಮ್ಮ ಒಪೀನಿಯನ್ ಆಫ್ ಐ.ಪಿ.ಆರ್. ಹೇಳಿದ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಾವು ಯಾವ ರೀತಿಯಾಗಿ ಸಾಧನೆ ಮಾಡಿದ್ದೇವೆ ಎನ್ನುವುದನ್ನು ಕೂಡ ಹೇಳಿದೆ. ನಾವು ಈಗ ತೆರೆದ ಮನಸ್ಸಿನಲ್ಲಿ ಆ ಟೆಕ್ನಾಲಜಿಯನ್ನು ಅಕ್ಸೆಪ್ಟ್ ಮಾಡತಕ್ಕ ರೀತಿಯಲ್ಲಿ ಹೋಗಬೇಕು ಭಯಪಡುವಂತಹದ್ದು ಮತ್ತೊಂದು ಇಲ್ಲ. ಈಗಾಗಲೇ ಮುಂದುವರೆದಂತಹ ದೇಶಗಳು ಸಾಕಷ್ಟು ವರ್ಷದಲ್ಲಿ ಸಾಕಷ್ಟು ಬೆಳೆಯನ್ನು ಬೆಳೆಯುತ್ತಿರಬೇಕಾದರೆ ನಾವು ಆ ಟೆಕ್ನಾಲಜಿಯನ್ನು ಅಕ್ಸೆಪ್ಟ್ ಮಾಡುವುದರಲ್ಲಿ ಹಿಂದೆ ಬೀಳಬಾರದು. ನಮ್ಮ ಸರ್ಕಾರದ ನೀತಿ ಐ.ಟಿ. ಟೆಕ್ನಾಲಜಿ ಹೌದು, ಬಿ.ಟಿ. ಟೆಕ್ನಾಲಜಿ ಕೂಡ ಹೌದು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇವತ್ತು 16 ಲಕ್ಷ ಎಕರೆಯಲ್ಲಿ ಬೆಳೆಯುತ್ತಿದ್ದ ಹತ್ತಿ ಒಂದೂವರೆಯಿಂದ ಎರಡು ಲಕ್ಷ ಎಕರೆಗೆ ಬಂದಿದೆ. ಕಾರಣ ಏನೆಂದರೆ ನಾವು ಅಪ್ಲೈ ಮಾಡತಕ್ಕ ಕಾನ್ಸೆಂಟ್ ಇನ್‌ಸೆಕ್ಟಿಸೈಡ್ಸ್‌ನಿಂದಾಗಿ ಆರ್ಬಿಸೈಡ್ಸ್‌ನಿಂದಾಗಿ ಇವತ್ತು ಸಂಪೂರ್ಣ ಬೆಳೆ ಹಾಳಾಗಿದೆ. ಅದನ್ನು ನಾವು ಸುಧಾರಣೆ ಮಾಡಬೇಕಾದರೆ ಡಿಸೀಸ್ ರೆಸಿಸ್ಟೆಂಟ್ ವೆರೈಟಿಯನ್ನು ತರತಕ್ಕದ್ದನ್ನು ಮಾಡಬೇಕಾಗುತ್ತದೆ. ಆದಕ್ಕೆ ವಿಶ್ವವಿದ್ಯಾನಿಲಯಗಳು ಏನು ಮಾಡಿವೆ ಅಂದರೆ, ಅದಕ್ಕೆ ನಾನು ಒಂದು ಮಾತು ಹೇಳುತ್ತೇನೆ. ಯಾವುದೇ ಸಂದರ್ಭದಲ್ಲೂ ಕೂಡ ನಾವು ಯಾವುದೋ ಒಂದು ಕಂಪನಿಗೆ ಮಾರು ಹೋಗತಕ್ಕದ್ದು ಇಲ್ಲ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ನಾವು ಅದನ್ನು ಅಪ್-ಟು-ಡೇಟ್ ಮಾಡಿ ಆ ಟೆಕ್ನಾಲಜಿಯನ್ನು ನಮ್ಮ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಇವತ್ತು

ಅವರ ಲ್ಯಾಬೋರೇಟರಿಯಲ್ಲಿ ಪರೀಕ್ಷೆ ಮಾಡತಕ್ಕ ಮಟ್ಟಕ್ಕೂ ಹೋಗಿದ್ದಾರೆ. ಬೆಂಗಳೂರಿನಲ್ಲಿರತಕ್ಕ ಬಯೋಟೆಕ್ನಾಲಜಿ ಸಾಕಷ್ಟು ರೀತಿಯಲ್ಲಿ ಸಾಧನೆಯನ್ನು ಮಾಡಿದೆ. ಧಾರವಾಡದಲ್ಲಿರತಕ್ಕ ವಿಶ್ವವಿದ್ಯಾನಿಲಯ ಕೂಡ ಸಾಕಷ್ಟು ಸಾಧನೆಯನ್ನು ಮಾಡಿದೆ. ಈಗಾಗಲೇ ತಮಗೆ ಗೊತ್ತಿದೆ, ನಾವು ಗುಜರಾತಿಗೆ ಹೋದಾಗ ಕೂಡ ಬಯೋಟೆಕ್ನಾಲಜಿಗೆ ಹೆಚ್ಚು ಒತ್ತು ಕೊಡಬೇಕೆನ್ನುವ ದೃಷ್ಟಿಯಲ್ಲೂ ಕೂಡ ನಾವು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೇವೆ. ಹಣ ಬಿಡುಗಡೆಯಾಗುತ್ತದೆ, ಸಂಶೋಧನೆ ಮಾಡುತ್ತೇವೆ. ಆದರೆ ಒಂದು ಐ.ಸಿ.ಆರ್. ಮತ್ತು ಡಿ.ಬಿ.ಟಿ.ಟಿ. ಡಿಪಾರ್ಟ್‌ಮೆಂಟ್ ಮುಖೇನ ಅನೇಕ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಸುಮಾರು ನೂರಾರು ಕೋಟಿ ರೂಪಾಯಿಗಳನ್ನು ಹಾಕಿದ್ದಾರೆ. ಆದರೆ ನಮಗಿಂತ ಜಾಸ್ತಿ ಹಣವನ್ನು ಮಾನ್ಸೆಂಟಾ ಕಂಪನಿ ಇರಬಹುದು ಇನ್ನು ಬೇರೆ ಯಾವುದೇ ಕಂಪನಿಗಳವರು ಕೂಡ ಹಾಕಿದ್ದಾರೆ. ನಾವು ಆ ಪೈಪೋಟಿಯನ್ನು ರಿಸರ್ಚ್‌ಗೋಸ್ಕರ ಮಾಡಿರುವ ಬಗ್ಗೆ ಅವರು ಹಣ ಹಾಕಿರುವ ಬಗ್ಗೆ ಪೈಪೋಟಿ ಮಾಡುವುದಲ್ಲ. ಆದರೂ ಕೂಡ ನಾವು ನಾಳೆ ಇವತ್ತು ಟರ್ಮಿನೇಟ್ ಟೆಕ್ನಾಲಜಿ ಕಾನ್ಸೆಪ್ಟ್ ಆಗಿರಬಹುದು, ನಾಳೆ ರಿಯಾಲಿಟಿ ಆಗಬಾರದು ಎನ್ನುವ ಕಾರಣಕ್ಕೋಸ್ಕರ ನಾವು ವಿಶ್ವವಿದ್ಯಾನಿಲಯಗಳು ಹೇಳತಕ್ಕದ್ದನ್ನು ನಂಬತಕ್ಕದ್ದು, ವಿಶ್ವವಿದ್ಯಾನಿಲಯಗಳು ಸೈಂಟಿಸ್ಟ್ಸ್ ಹೇಳತಕ್ಕದ್ದನ್ನು ಪ್ರತ್ಯೇಕ್ಷವಾಗಿ ಪ್ರಾಮಣಿಸಿ ನೋಡಿ ಅವರು ಕೊಡತಕ್ಕ ಸಲಹೆಗಳನ್ನು ತೆಗೆದುಕೊಂಡು ಮುಂದುವರಿಯತಕ್ಕದ್ದು ಇದೆ. ಯಾವುದೇ ಕಂಪನಿಗೆ ಮಾರು ಹೋಗತಕ್ಕ ಪ್ರಶ್ನೆ ಇಲ್ಲ. ಟೆಕ್ನಾಲಜಿ ಎನ್ನತಕ್ಕದ್ದು ಯಾವುದೇ ಕಂಪನಿಗೆ ಮೀಸಲಾಗಿರತಕ್ಕದ್ದಲ್ಲ. ನಮ್ಮ ವಿಶ್ವವಿದ್ಯಾನಿಲಯಗಳಲ್ಲೂ ಕೂಡ ಶಕ್ತಿಗಳು ಇವೆ. ಆದರೆ ನಾವು ಆ ದಿಸೆಯಲ್ಲಿ ನಿಮ್ಮ ಅಭಿಪ್ರಾಯವೇನು ಎಂದು ಕೇಳತಕ್ಕ ಕೆಲಸವನ್ನು ಮಾಡದೆ ಇಲ್ಲ. ನಾವು ಆ ಕೆಲಸವನ್ನು ಮಾಡಿದ್ದೇವೆ. ನಾವು ಆ ದಿಸೆಯಲ್ಲಿ ಮುಂದುವರಿ ಯುತ್ತಿದ್ದೇವೆ. ನೀವು ಹೇಳತಕ್ಕದ್ದು ಎಲ್ಲವೂ ಕೂಡ ನಮ್ಮ ಗಮನದಲ್ಲಿದೆ. ಆದರೆ ಒಂದು ಈ ದೇಶದಲ್ಲಿ ಈ ರಾಜ್ಯದಲ್ಲಿ ಟರ್ಮಿನೇಟ್ ಟೆಕ್ನಾಲಜಿ ಬರುವುದಕ್ಕೆ ಸಾಧ್ಯವಿಲ್ಲ ಟ್ರಯಲ್ ಮಾಡುವುದಕ್ಕೆ ಬಿಡುವುದಿಲ್ಲ ಅದರ ಬಗ್ಗೆ ರೈತರು ಆತಂಕವನ್ನು ವ್ಯಕ್ತಪಡಿಸಬೇಕಾಗಿಲ್ಲ. ಬಯೋಟೆಕ್ನಾಲಜಿಯಲ್ಲಿ ನಾವು ಮುಂದೆ ಹೋಗುತ್ತೇವೆ, ರೈತರಿಗೆ ಸಹಾಯ ಮಾಡುತ್ತೇವೆ.

ಶ್ರೀ ಬಿ. ಆರ್. ಯಾವಗಲ್ : ಮಾನ್ಯ ಉಪಾಧ್ಯಕ್ಷರೆ, ಬಣವೆಗಳು ಸುಟ್ಟಾಗ ಬೆಳೆಗಳು ಸುಟ್ಟಾಗ ಪರಿಹಾರ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿಲಿಲ್ಲ. ಅದರ ಬಗ್ಗೆ ಆಶ್ವಾಸನೆ ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಭತ್ತ ಅಥವ ಹುಲ್ಲಿನ ಮೆದೆ ಬಿದ್ದುಹೋಗುವುದರ ಜೊತೆಗೆ ಸಾಕಷ್ಟು ರೀತಿಯಲ್ಲಿ ಲಾಸ್ ಆಗುತ್ತದೆ. ಕಬ್ಬಿಗೆ ಬೆಂಕಿ ಬಿದ್ದು ನಷ್ಟವಾಗಿರತಕ್ಕ ಸಂದರ್ಭವಿದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಮನಗಂಡು ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಕೂಡ ಮಾಡಿದ್ದಾರೆ. ಆ ಕ್ಯಾಬಿನೆಟ್ ಸಬ್ ಕಮಿಟಿಯ ಮುಂದೆ ಈ ವಿಷಯಗಳು ಚರ್ಚೆಗೆ ಬರುತ್ತಿದೆ. ಬಹುಶಃ ನ್ಯಾಚುರಲ್ ಕೆಲಾಮಿಟಿ ವ್ಯಾಪ್ತಿಯಲ್ಲಿ ಅದನ್ನು ತರುವುದಕ್ಕೆ ಪ್ರಯತ್ನ ನಡೆದಿದೆ. ನಮಗೆ ಹಣ ಕೊಡುವುದು ಇದ್ದರೂ ಕೂಡ ಹಣಕಾಸಿನ ಸಂಪನ್ಮೂಲದ ಕೊರತೆ ಇದ್ದಾಗ ನಾವು ಕೊಡುವುದಿಲ್ಲ. ನಾನು ಅದಕ್ಕೆ ಹೇಳಿದ್ದು, ರೈತರಲ್ಲಿ ಸಂಘಟನೆ ಆಗಬೇಕು. ಗೌರ್ನಮೆಂಟ್ ಆರ್ಡರ್ ಪ್ರಕಾರ ಎಷ್ಟಿದೆಯೋ ಅಷ್ಟನ್ನು ಕೊಡಬೇಕೆ ನ್ನುವ ಒತ್ತಾಯವನ್ನು ನಾವು ಹಾಕುತ್ತಿಲ್ಲ. ಸಂಘಟನೆಗಳು ಬೇಕು, ಆದರೆ ಕ್ಯಾಬಿನೆಟ್ ಸಬ್ ಕಮಿಟಿ ಕೂಡ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನ್ಯಾಚುರಲ್ ಕೆಲಾಮಿಟಿಯಲ್ಲಿ 11 ಸಾವಿರ ರೂಪಾಯಿ ರೈತನ ಕೃಷಿ ಉತ್ಪನ್ನ ಇದ್ದರೆ ಅವನ ಬೆಳೆ ಸುಟ್ಟರೆ ಯಾವುದೇ ರೀತಿಯ ಹಾನಿಯಾದರೆ ಕೊಡಬಾರದೆಂದು ಇದೆ. ಇಂತಹ ಉತ್ಪನ್ನದ ಕಂಡೀಷನ್ ತೆಗೆದು ಹಾಕಿ ಎಲ್ಲ ರೈತರಿಗೆ ಅನುಕೂಲ ಮಾಡಿ. ಲಕ್ಷಾಂತರ ರೈತರ ಕಾಲಿನ ಬವಣೆ ಸುಟ್ಟು, ಮೇವಿನ ಬಣವೆ ಸುಟ್ಟು ಅವರಿಗೆ ತೊಂದರೆಯಾಗುತ್ತದೆ. ತೊಂದರೆಗೆ ಒಳಗಾದ ರೈತರಿಗೆ ಅನುಕೂಲವಾಗುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೃಷಿ ಸಚಿವರ ಗಮನಕ್ಕೆ ತರುವುದೇನೆಂದರೆ, ನನ್ನ ಕ್ಷೇತ್ರದಲ್ಲಿ ಕಬ್ಬಿನ ಗದ್ದೆಗೆ ಕೆಇಬಿ ಎಲೆಕ್ಟ್ರಿಕ್ ಲೈನ್ ಬಿದ್ದು ಹೋಗಿ ಕಂಪ್ಲೀಟ್ ಕಬ್ಬು ಸುಟ್ಟುಹೋಯಿತು. ಸುಮಾರು ಐದು ಎಕರೆಯಲ್ಲಿ ಬೆಳೆದ ಕಬ್ಬು ಸುಟ್ಟುಹೋಯಿತು. ಎರಡೂವರೆ ಲಕ್ಷ ರೂಪಾಯಿ ನಷ್ಟವಾಯಿತು. ಇದು ಕೆಇಬಿಯವರ ನೆಗ್ಲಿಜೆನ್ಸಿಯಿಂದ ಆಗಿದೆ. ಇದುವರೆಗೂ ಏನೂ ಪರಿಹಾರ ಬರಲಿಲ್ಲ. ಕೆಇಬಿಯವರನ್ನು ಕೇಳಿದರೆ ಅದರ ಬಗ್ಗೆ ಗಮನವಹರಿ ಸುತ್ತಿಲ್ಲ. ಸರ್ಕಾರದ ಸ್ವಾಮ್ಯದಲ್ಲಿರತಕ್ಕ ಯಾವುದೇ ಸಂಸ್ಥೆಗಳ ಮೂಲಕ ಇಂತಹ ನೆಗ್ಲಿಜೆನ್ಸಿಯಿಂದ ರೈತರಿಗೆ ತೊಂದರೆಯಾದರೆ ಅಂತಹ ಸಂದರ್ಭದಲ್ಲೂಕೂಡ ನೀವು ಪರಿಹಾರ ಕೊಡದಿದ್ದರೆ ಏನು ಪ್ರಯೋಜನ? ಕೆಇಬಿಯವರು ಕೊಡುವುದಿಲ್ಲ, ನೀವು ನ್ಯಾಚುರಲ್ ಕೆಲಾಮಿಟಿ ಫಂಡ್ಸ್‌ನಲ್ಲೂ ಕೊಡುವುದಿಲ್ಲ. ಇದನ್ನು ತಾವು ಯಾವುದಾದರೂ ಒಂದು ವ್ಯಾಪ್ತಿಗೆ ತಂದು ರೈತನಿಗೆ ಇಂತಹ ಸಂದರ್ಭದಲ್ಲಿ ಪರಿಹಾರವನ್ನು ಕೊಡತಕ್ಕ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕು.

ಶ್ರೀ ಟಿ. ಬಿ. ಜಯಚಂದ್ರ : ಈಗಾಗಲೇ ನಾನು ಹೇಳಿದ್ದೇನೆ. ಇವೆಲ್ಲದಕ್ಕೂ ಪರಿಹಾರ ಇನ್ಸೂರೆನ್ಸ್ ಒಂದೇ. ಕೆಇಬಿಯಿಂದ ಅಘಾತವಾಗಿರಲಿ ಅನಾಹುತವಾಗಿರಲಿ ಅದಕ್ಕೆ ಪರಿಹಾರ ಕೊಡಲಿಕ್ಕೆ ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ಅವಕಾಶವಿಲ್ಲ. ಇಂಥ ಸಮಸ್ಯೆಗಳಿಗಾಗಿಯೇ ಇನ್ಸೂರೆನ್ಸ್ ವ್ಯಾಪ್ತಿಗೆ ತಂದಿರತಕ್ಕದ್ದು. ಅವರು ಮುಂದಿನ ವರ್ಷ ಇನ್ಸೂರೆನ್ಸ್ ವ್ಯಾಪ್ತಿಯಲ್ಲಿ ತರತಕ್ಕ ಕೆಲಸವನ್ನು ಅವರು ಮಾಡಿದಾಗ ಅವರಿಗೆ ಪರಿಹಾರ ಸಿಗುತ್ತದೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ರೈತರಿಗೆ ತಿಳುವಳಿಕೆ ಕೊಡತಕ್ಕದ್ದು ಅರಿವು ಮೂಡಿಸಿತಕ್ಕದ್ದು ಅಗತ್ಯ ಈ ಕಾರ್ಯಕ್ರಮವನ್ನು ನಿಮ್ಮ ಇಲಾಖೆಯವರು ಹಾಕಿಕೊಳ್ಳಬೇಕು. ಅವರು ಮಾಡುತ್ತಿಲ್ಲ, ದಯವಿಟ್ಟು ನಿಮ್ಮ ಇಲಾಖೆಯವರನ್ನು ಚುರುಕು ಮಾಡಿ. ಅವರು ರೈತರಿಗೆ ನೇರವಾಗಿ ಅರಿವು ಮೂಡಿಸತಕ್ಕದ್ದು ಅವರಿಗೆ ಜ್ಞಾನ ಉಂಟುಮಾಡತಕ್ಕದ್ದು ಆಮೇಲೆ ಸರಳೀಕರಣ ಮಾಡಬೇಕು ಇಂತಹ ವ್ಯವಸ್ಥೆ ಕೆಲಸಗಳನ್ನು ಇಲಾಖೆಯವರು ಮಾಡದೇ ಹೋದರೆ ಏನು ಗೊತ್ತಿರುತ್ತದೆ ಹಳ್ಳಿಯ ರೈತರಿಗೆ?

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಗ್ರಾಮೀಣ ಪ್ರದೇಶದಲ್ಲಿರತಕ್ಕ ರೈತರು ಶೇಕಡ 40-50ರಷ್ಟು ಅವಿದ್ಯಾವಂತರು ಮತ್ತು ಬಡವರು ಇದ್ದಾರೆ. ನಮ್ಮ ತಾಂತ್ರಿಕತೆ ಎನ್ನತಕ್ಕದ್ದು ನನ್ನ ಮಾತಿನಲ್ಲಿ ಹೇಳಿದ್ದೇನೆ ಅವರಿಗೆ ಅದು ವರ್ಗಾವಣೆಯಾಗಿಲ್ಲ. ಅದರ ಬಗ್ಗೆ ಹೆಚ್ಚು ಮಾಹಿತಿ ಅವರಿಗಿಲ್ಲ. ರೈತರನ್ನು ಹೆಚ್ಚು ಸಂಘಟಿಸಬೇಕು ಎನ್ನುವುದು ಆ ದಿಸೆಯಲ್ಲಿ ಹೇಳತಕ್ಕದ್ದು. ತಾವು ಹೇಳಿದ ಹಾಗೆ ಈ ರೀತಿಯಾಗಿ ರೈತರಿಗೆ ಶೋಷಣೆಯಾಗತಕ್ಕದ್ದು ನಿಜ. ಆದರೆ ತಾವು ನಿರ್ದಿಷ್ಟವಾಗಿ ಕೆಇಬಿಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಕೆಇಬಿ ಬಗ್ಗೆ ತಾವು ಯಾವತ್ತೂ ಕೂಡ ಕನ್ಸೂಮರ್ಸ್ ಕೋರ್ಟ್‌ಗೆ ಹೋಗಬಹುದು. ತಾವು ಜಡ್ಜ್ ಆಗಿದ್ದವರು ತಮಗೆ ಗೊತ್ತಿರುತ್ತದೆ. ಕನ್ಸೂಮರ್ಸ್ ಕೋರ್ಟ್‌ಗೆ ಹಾಕಿದರೆ ಬಹುಶಃ ಪರಿಹಾರ ಸಿಗುವ ಸಾಧ್ಯತೆ ಇದೆ.

ಶ್ರೀಎಸ್.ಸಿ. ಮುದ್ದಹನುಮೇಗೌಡ: ನ್ಯಾಯಾಲಯಕ್ಕೆ ಹೋಗಿ ರೈತ ಪರಿಹಾರ ತೆಗೆದುಕೊಳ್ಳುವುದು ಬೇರೆ. ಕೆಇಬಿಯವರ ನೆಗ್ಲಿಜೆನ್ಸ್‌ನಿಂದ ಒಬ್ಬ ರೈತನ ಕಬ್ಬಿನ ತೋಟ ಸುಟ್ಟು ಹೋಯಿತು ಅಂದರೆ ಪರಿಹಾರ ಕೊಡಲಿಕ್ಕೆ ರೈತರ ಶೋಷಣೆ ಮಾಡುವುದಕ್ಕೆ ಹೊರಟರೆ ಇದಕ್ಕೆ ಏನು ಮಾಡಬೇಕು? ನ್ಯಾಯಾಲಯದಲ್ಲಿ ಕನ್ಸೂಮರ್ಸ್ ಕೋರ್ಟ್‌ಗೆ ಹೋಗಿ ಪರಿಹಾರ ತೆಗೆದುಕೊಳ್ಳುವುದು ಬೇರೆ ವಿಷಯವಾಯಿತು. ಆದರೆ ಸರ್ಕಾರ ರೈತನ ಪ್ರೊಟೆಕ್ಷನ್‌ಗೆ ಎಲ್ಲಿ ಬಂದಹಾಗೆ ಆಯಿತು?

ಶ್ರೀಟಿ.ಬಿ. ಜಯಚಂದ್ರ : ನನಗೆ ಗೊತ್ತಿಲ್ಲದೆ ಇರತಕ್ಕ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಅದು ಕೆಇಬಿಯಿಂದ ತಪ್ಪಾಗಿದೆಯೋ ಇನ್ನೊಂದು ಆಗಿದೆಯೋ ಎನ್ನುವ ಬಗ್ಗೆ ವಿಚಾರ ಮಾಡಿ, ಅದು ಕೆಇಬಿಯಿಂದ ಆಗಿದ್ದರೆ ಪರಿಹಾರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಶಿವಣ್ಣನವರ್ ಬಸವರಾಜ ನೀಲಪ್ಪ :ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ಈಗಾಗಲೇ ಬೇಡಿಕೆಗಳ ಮೇಲೆ ಉತ್ತರ ಕೊಡುವಾಗ ರೈತರ ಸ್ಥಿತಿಗತಿಗಳನ್ನು ಅರ್ಥ ಮಾಡಿ ಕೊಂಡು ರೈತರಿಗೆ ಹಲವಾರು ಉಪಯುಕ್ತವಾದ ಯೋಜನೆಗಳನ್ನು ಈಗಾಗಲೇ ಮಾನ್ಯ ಕೃಷಿ ಸಚಿವರು ಹೇಳಿದ್ದಾರೆ. ಅವರು ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳನ್ನು ಸ್ವಾಗತಿಸುತ್ತಾ, ನಾನು ಬೇಡಿಕೆಯ ಮೇಲೆ ಚರ್ಚೆ ಮಾಡುವಾಗ ನಮ್ಮ ಹಾವೇರಿ ಜಿಲ್ಲೆಯಲ್ಲಿರತಕ್ಕ ಹಾವೇರಿಯಾಗಲಿ, ಹೀರೇಕೆರೂರಾಗಲಿ, ಕುಂದಗೋಳ, ಶಿಗ್ಗಾಂ, ಸವಣೂರು ನಮ್ಮ ಭಾಗದಲ್ಲಿ ಯಾವುದೇ ನೀರಾವರಿ ಯೋಜನೆಗಳು ಹೆಚ್ಚಾಗಿ ಇಲ್ಲ. ಮಳೆಯ ಆಶ್ರಯದಲ್ಲಿ ಮೆಣಸಿನಕಾಯಿಯನ್ನು ಹೆಚ್ಚಿನ ರೀತಿಯಲ್ಲಿ ಬೆಳೆಯುತ್ತಾರೆ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಮೆಣಸಿನಕಾಯಿಗೆ ಸಾಕಷ್ಟು ರೋಗ ಬಿದ್ದು ಸರಿಯಾದ ಉತ್ಪಾದನೆ ಬಾರದೆ ಕಷ್ಟದಲ್ಲಿ ಆಭಾಗದ ರೈತರು ಇದ್ದಾರೆ. ತಳಿಯ ಸಂಶೋಧನೆಯ ಸಲುವಾಗಿ ಈಗಾಗಲೇ ಇಲಾಖೆಯವರು 90 ಎಕರೆ ಜಮೀನನ್ನು ನಮ್ಮ ಧಾರವಾಡ ಅಗ್ರಿಕಲ್ಚರ್ ಯುನಿವರ್ಸಿಟಿಯವರಿಗೆ ಕೊಂಡು ಕೊಟ್ಟಿದ್ದಾರೆ. ಅದರ ಜೊತೆಗೆ ತಳಿಯ ಸಂಶೋಧನೆ ಮಾಡಲಿಕ್ಕೆ ಮೂರು ವರ್ಷದ ಕೆಳಗೆ ಜಮಿನು ಮಂಜೂರು ಆಗಿದೆ. ಹಾವೇರಿ ತಾಲ್ಲೂಕು ಕೃಷಿ ಪಾಠಶಾಲೆಯೊಳಗೆ 90 ಎಕರೆ ಜಮೀನು ಕೂಡ ಕೊಟ್ಟಿದ್ದಾರೆ. ಅದಕ್ಕೆ ಬೇಕಾಗಿರತಕ್ಕ ಅನುದಾನವನ್ನು ಇದುವರೆಗೆ ಬಿಡುಗಡೆ ಮಾಡಲಿಲ್ಲ. ಇನ್ನು ಕಾರ್ಯ ಪ್ರವೃತ್ತರಾಗಿಲ್ಲ. ರೈತರ ಆರ್ಥಿಕ ಹಿತದೃಷ್ಟಿಯಿಂದ ತಳಿ ಸುಧಾರಣೆ ಮಾಡಲಿಕ್ಕೆ ಮಂಜೂರಾಗಿರತಕ್ಕ ಅನುದಾನವನ್ನು ಬೇಗನೆ ಬಿಡುಗಡೆ ಮಾಡಿ ಹೊಸ ಹೊಸ ತಳಿಗಳನ್ನು ಕಂಡುಹಿಡಿದು ರೈತರ ಆರ್ಥಿಕ ಸುಧಾರಣೆ ಮಾಡಲಿಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

2.20 ಪಿ.ಎಂ.

ಮಾನ್ಯ ಅಧ್ಯಕ್ಷರೆ ಈಗಾಗಲೇ ರೈತರಿಗೆ ಕೊಡತಕ್ಕಂಥ ಪರಿಹಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಮೊನ್ನೆ ನನ್ನ ಮತಕ್ಷೇತ್ರದಲ್ಲಿ ಆಗಿರತಕ್ಕಂಥ ಒಂದು ಘಟನೆಯನ್ನು ಹೇಳುತ್ತೇನೆ. ಒಬ್ಬರಿಗೆ ಇರುವುದು ಮೂರು ಎಕರೆ ಜಮೀನು. ಇವತ್ತು ಬೆಂಕಿ ಅನಾಹುತ ಮತ್ತು ಬೇರೆ ಬೇರೆ ಕಾರಣಗಳಿಗೆ ಅವರಿಗೆ ಸಾಕಷ್ಟು ಅನಾಹುತವಾಗಿರುತ್ತದೆ. ಸಿಡಿಲಿನ ಮುಖಾಂತರ ನಾಲ್ಕೈದು ತೆಂಗಿನ ಗಿಡಗಳು ಸುಟ್ಟುಹೋಗಿವೆ. ಆತನ ಪಂಪುಸೆಟ್ಟು ಸುಟ್ಟುಹೋಗಿದೆ. ಆತ ಸಣ್ಣ ರೈತ. ಆತನಿಗೆ ಇವತ್ತು ಪರಿಹಾರ ಕೊಡಬೇಕು ಎಂದರೆ ಐನೂರು ರೂಪಾಯಿಗಿಂತ ಹೆಚ್ಚು ಕೋಡುವುದಕ್ಕೆ ಆಗುವುದಿಲ್ಲವೆಂದು ತಹಸೀಲ್ದಾರರು ಹೇಳುತ್ತಾರೆ. ಸಿಡಿಲು, ಗುಡುಗಿನಿಂದ ಇವತ್ತು ಒಬ್ಬ ಮನಷ್ಯ ತೀರಿ ಕೊಂಡರೆ ಅವನಿಗೆ ಒಂದು ಲಕ್ಷ ರೂಪಾಯಿ ಹಣ ಸರ್ಕಾರ

ಕೊಡುತ್ತದೆ. ಆದರೆ ಇವತ್ತು ಅವನ ತೆಂಗಿನ ಬೆಳೆಗೆ ಹಾನಿಯಾಗಿರತಕ್ಕಂಥಾದ್ದು ಮತ್ತು ಅವರ ಪಂಪುಸೆಟ್ಟಿಗೆ ಆಗಿರುವ ಹಾನಿಗೆ ಪರಿಹಾರ ಸಿಗಬೇಕು. ಆದ್ದರಿಂದ ಆತನಿಗೆ ಆಗಿರತಕ್ಕಂಥ ಹಾನಿಗೆ ಯೋಗ್ಯವಾದ ಪರಿಹಾರ ಕೊಡತಕ್ಕಂಥ ರೀತಿಯಲ್ಲಿ ಒಂದು ತಿದ್ದುಪಡಿ ತಂದು ಸರ್ಕಾರ ಈ ಕಡೆಗೆ ಗಮನಹರಿಸಿದರೆ ಆತ ಬದುಕುವುದಕ್ಕೆ ಸಾಧ್ಯವಾಗುತ್ತದೆ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಸದಸ್ಯರು ತಮ್ಮ ಭಾಗದಲ್ಲಿ ಯಾವುದೇ ನೀರಾವರಿ ಕಾರ್ಯಕ್ರಮ ಇಲ್ಲವೆಂದು ಹೇಳಿದರು. ಆದರೆ ನೀರಾವರಿ ಇಲ್ಲದಿದ್ದರೂ ಕರ್ನಾಟಕದ ಭೂಪಟದಲ್ಲಿ ಹಾವೇರಿ, ರಾಣಿಬೆನ್ನೂರನ್ನು ಯಾರೂ ಮರೆಯುವಂತಿಲ್ಲ. ಇಡೀ ಪ್ರಪಂಚದಲ್ಲಿ ಇರತಕ್ಕಂಥ ಎಲ್ಲ ಶೀಟ್ ಮಾನ್ಯುಫ್ಯಾಕ್ಚರಿಂಗ್ ಕಂಪನಿಗಳು ಆ ಭಾಗದಲ್ಲಿ ಇರತಕ್ಕಂಥಾದ್ದು ಇದೆ. ಸುಮಾರು 242 ಅಂತಹ ಕಂಪನಿಗಳು ಇವೆ. ಅದು ರೈತರ ಮುಖಾಂತರ ಸಹಾಯವಾಗುತ್ತದೆ. ಇದರಿಂದ ರೈತರ ಆರ್ಥಿಕ ಪರಿಸ್ಥಿತಿ ಬಹಳ ಯಥೇಚ್ಛವಾಗಿ ಮುಂದುವರಿದಿದೆ. ಆದರೆ ತಾವು ಮೆಣಸಿನಕಾಯಿ ಬಗ್ಗೆ ಹೇಳಿದ್ದೀರಿ. ಇದರ ಬಗ್ಗೆ ಈಗಾಗಲೇ ನಾವು ಒಂದು ಸಂಶೋಧನೆ ಮಾಡಬೇಕು ಎನ್ನತಕ್ಕಂಥ ತೀರ್ಮಾನವನ್ನು ಕೂಡ ಮಾಡಿದ್ದೇವೆ. ಆದರೆ ಸಂಪನ್ಮೂಲದ ಕೊರತೆ ಇದೆ. ಈಗಾಗಲೇ ನಮ್ಮ ಎನ್. ಡಿ. ಡಿ. ಬಿ. ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಕೂಡ ಬಂದಿದೆ. ಬಹುಶಃ ಇನ್ನೇನು ಬೇಗ ಹಣವನ್ನು ಬಿಡುಗಡೆ ಮಾಡತಕ್ಕಂಥ ಹಂತದಲ್ಲಿದ್ದೇವೆ. ಆ ಭಾಗದಲ್ಲಿರುವ ರೈತರ ಬಗ್ಗೆ ನಮ್ಮ ಅಲ್ಲಂ ವೀರಭದ್ರಪ್ಪನವರು ಕಾಳಜಿಯನ್ನು ವಹಿಸಿದ್ದಾರೆ. ಆದಷ್ಟು ಬೇಗ ಅದನ್ನು ಮಾಡಿಸತಕ್ಕಂಥ ಚಿಂತನೆಯನ್ನು ಸರ್ಕಾರ ಖಂಡಿತ ಮಾಡುತ್ತದೆ.

ಶ್ರೀ ಜಿ. ರಾಜುಗೌಡ : ಮಾನ್ಯ ಉಪಾಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ರೈತ ಸಮುದಾಯ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ತಳೆದಿಲ್ಲ. ಕಾರಣ ಏನೆಂದರೆ ಯಾವ ರೈತ ಸಂಕಷ್ಟಕ್ಕೆ ಒಳಪಡುತ್ತಾನೆ, ಆ ಸಮಯದಲ್ಲಿ ಸರ್ಕಾರ ಆತನ ನೆರವಿಗೆ ಧಾವಿಸಿ ಬರಬೇಕು. ಆದರೆ ಹಾಗೆ ಸರ್ಕಾರ ಬರುತ್ತಿಲ್ಲ. ತಮಗೆ ಹೇಳುವುದಾದರೆ ರಾಜ್ಯದಲ್ಲಿ ಈ ಮಾರುಕಟ್ಟೆ ದರವನ್ನು ಅನುಸರಿಸಿ ತಾವು ಬೆಲೆ ನಿಗದಿ ಮಾಡಬೇಕೆಂದು ಏನಿದೆ ಅದರಲ್ಲಿ ಬಹಳ ವ್ಯತ್ಯಾಸ ಆಗುತ್ತಿದೆ. ನಾನು ತಮಗೆ ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ತಾವು ಪ್ರಾತ್ಯಕ್ಷತೆಯ ಸರ್ಕಾರ ಇವತ್ತಿನ ಧಾರಣೆಯನ್ನು ಫಿಕ್ಸ್ ಮಾಡಬೇಕು. ಎಷ್ಟು ಖರ್ಚಾಗುತ್ತದೆ ಅದರ ಮೇಲೆ ತಾವು ಬೆಳೆಗಳ ದರವನ್ನು ಗೊತ್ತು ಮಾಡುವುದು ಸೂಕ್ತ. ಪ್ರಾತ್ಯಕ್ಷತೆಯನ್ನು ತಾವು ಮಾಡಬೇಕು. ಮತ್ತು ರೈತ ಸಮುದಾಯದಲ್ಲಿ ಅವರಿಗೆ ಹೆಚ್ಚಿನ ಬಲಪಡಿಸುವುದಕ್ಕೆ ಪ್ರೋತ್ಸಾಹವನ್ನು ತಾವು ಕೊಡಬೇಕು. ಈಗಾಗಲೇ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ತಾವು ಬಹುಮಾನವನ್ನು ಕೊಡುತ್ತಿದ್ದೀರಿ. ಅದನ್ನು ಹೆಚ್ಚು ಮಾಡಬೇಕೆಂಬ ವಿಷಯವನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ತಾವು ಯಾವಾಗಲೂ ತಮ್ಮ ಆಯವ್ಯಯದಲ್ಲಿ ಪ್ರಕೃತಿ ವಿಕೋಪದಿಂದ ಆಗತಕ್ಕಂಥ ನಷ್ಟದ ಬಗ್ಗೆ ಕೊನೆಯ ಪಕ್ಷ ನೂರು ಕೋಟಿ ರೂಪಾಯಿಗಳನ್ನು ಇಟ್ಟರೆ ಮಾತ್ರ ಅದರಿಂದ ರೈತರಿಗೆ ಉಪಯೋಗ ಆಗಲಿಕ್ಕೆ ಸಾಧ್ಯ. ಏನೋ ಹಳೆಯ ಕಾಲದಲ್ಲಿ ಒಂದು ಎಕರೆಗೆ 150 ರೂಪಾಯಿ ಕೊಡತಕ್ಕದ್ದು ಏನಿದೆ ಅದು ಏನೂ ಸಾಲದು. ರೈತರಿಗೆ ಉಪಕಾರ ಮಾಡುವ ದೃಷ್ಟಿಯಿಂದ ನೋಡಬೇಕು. ಆದ್ದರಿಂದ ಪ್ರಕೃತಿ ವಿಕೋಪ ಹಾನಿಗೆಂದು ಹೇಳಿ ಕೊನೆಯ ಪಕ್ಷ ನೂರು ಕೋಟಿ ರೂಪಾಯಿಗಳಾದರೂ ಆಯವ್ಯಯದಲ್ಲಿ ಇರಿಸಬೇಕೆಂದು ಕೇಳಿಕೊಂಡು ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಈಗಾಗಲೇ ನಾನು ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ನಮ್ಮ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ನಾವು ಬೆಳೆಯ ತಕ್ಕಂಥ ಬೆಳೆಗಳಿಗೆ ಏನು ಸಿಗುತ್ತದೆ ಎಂದಾಗ ನಾನು ''ಏನೂ ಸಿಗುವುದಿಲ್ಲ'' ಎಂದು ಉತ್ತರದಲ್ಲಿ ಹೇಳಿದ್ದೇನೆ. ಭತ್ತ ಬೆಳೆಯಲಿ, ರಾಗಿ ಬೆಳೆಯಲಿ, ಯಾವುದು ಬೆಳೆದರೂ ಕೂಡ ಸಿಗತಕ್ಕಂಥ ಬೆಲೆ ಜಾಸ್ತಿ ಇಲ್ಲ. ಕಬ್ಬು ಬೆಳೆದರೆ ನಾಲ್ಕು ಅಥವಾ ಐದು ಸಾವಿರ ಸಿಗಬಹುದೆನ್ನುವುದು ಬಿಟ್ಟರೆ ಬೇರೆ ಯಾವುದರಲ್ಲೂ ಸಿಗುವುದಿಲ್ಲ ಎನ್ನತಕ್ಕದ್ದು. ಬೆಂಬಲ ಬೆಲೆಯನ್ನು ಕೊಡುವುದಕ್ಕೆ ತೀರ್ಮಾನ ಮಾಡತಕ್ಕಂಥವರು ಕೇಂದ್ರ ಸರ್ಕಾರದವರು. ನಾವು ಶಿಫಾರಸ್ಸು ಮಾಡಿದ್ದೇವೆ. ಆದರೆ ನಾವು ಶಿಫಾರಸ್ಸು ಮಾಡಿದ ಬೆಂಬಲ ಬೆಲೆಯನ್ನು ನಿಗದಿ ಮಾಡತಕ್ಕವರು ಅವರು. ನಾವು 1,600 ರೂಪಾಯಿ ಮಾಡಿದರೆ ಅವರು 1,100 ರೂಪಾಯಿ ಮಾಡುತ್ತಾರೆ. ಈಗ ತೊಗರಿ ಬೆಳೆಗೆ ನಾವು 1,600 ರೂಪಾಯಿ ಕಳುಹಿಸಿದ್ದೇವೆ. ಅವರು 1,105 ರೂಪಾಯಿ ಮಾಡಿದ್ದಾರೆ. ನಾವು ಯಾವಾಗ ಕೊಳ್ಳಬಹುದು? 1,100 ರೂಪಾಯಿಗಿಂತ ಕಡಿಮೆ ಹೋದ ಸಂದರ್ಭದಲ್ಲಿ ನಾವು ಕೊಳ್ಳುವುದಕ್ಕೆ ಬರುತ್ತದೆ. ಆದರೂ ಕೂಡ ನಾವು ಸರ್ಕಾರ ಸ್ಪಂದಿಸಿಲ್ಲ ಎಂಬ ಮಾತನ್ನು ಹೇಳಿದಾಗ ನಾವು ಈ ರೀತಿಯಾಗಿ ಬೆಂಬಲ ಬೆಲೆಯ ಕೆಳಗೆ ಅದು ಹೋದಾಗ ಕೊಳ್ಳುವುದಿಲ್ಲ ಎಂದು ಹೇಳಿ ಕಮರ್ಶಿಯಲ್ ಪರ್ಚೇಸ್‌ಗೆ ಕೂಡ ಗುಲ್ಬರ್ಗಾದಲ್ಲಿ ನಾವು ಎಂಟರ್ ಆಗಿದ್ದೇವೆ. ನಾವು ಸುಮಾರು ಎರಡು-ಮೂರು ಕೋಟಿ ರೂಪಾಯಿ ಅಲ್ಲಿ ಹಾಕಿ ಕಮರ್ಶಿಯಲ್ ಪರ್ಚೇಸ್‌ಗೆ 1,500 ರೂಪಾಯಿ ಇದ್ದರೆ 1,500 ರೂಪಾಯಿಗೇ ಕೊಳ್ಳತಕ್ಕಂಥ ವ್ಯವಸ್ಥೆಯನ್ನು ಕೂಡ ಮಾಡಿ ರೈತರಿಗೆ ಸ್ಪಂದಿಸತ್ಕಕಂಥ ಕೆಲಸವನ್ನು ಮಾಡಿದ್ದೇವೆ. ತಾವು ಹೇಳತಕ್ಕಂಥಾದ್ದು ನೂರು ಕೋಟಿ ರೂಪಾಯಿ ಬಗ್ಗೆ, ನಾವು ಇನ್‌ಶ್ಯೂರೆನ್ಸ್ ಮುಖಾಂತರ ಆ ಕೆಲಸವನ್ನು ಮಾಡಿದ್ದೇವೆ, ನಿಜ. ಆದರೆ ಕೃಷಿ ಕ್ಷೇತ್ರದಲ್ಲಿ ಕೃಷಿಗೆ ಸಹಾಯ ಆಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾವು ಚಿಂತನೆ ಮಾಡಬೇಕಾದಾಗ ಅದು ಮಾಡತಕ್ಕದ್ದು ಕಷ್ಟ ಇದೆ. ನಮ್ಮ ಸರ್ಕಾರದ ಇತಿಮಿತಿಯನ್ನು ಕೂಡ ನೋಡಬೇಕಾಗುತ್ತದೆ. ಸರ್ಕಾರದ ನೀತಿಗಳು ಕೂಡ ಬದಲಾವಣೆಯಾಗುತ್ತದೆ. ಮುಖ್ಯವಾಗಿ ಕೇಂದ್ರ ಸರ್ಕಾರದ ನೀತಿ ಬದಲಾವಣೆಯಾಗಬೇಕಾಗುತ್ತದೆ. ರೈತರಿಗೆ ಬಹುಶಃ ಇನ್‌ಶ್ಯೂರೆನ್ಸ್ ಸ್ಕೀಮ್‌ನಿಂದ ಬಹುಶಃ ಈ ವರ್ಷ ಬಿಟ್ಟರೆ ಮುಂದಿನಸಾರಿ ಈ ರೀತಿಯಾದಂಥ ಪ್ರಶ್ನೆಗಳು ಉದ್ಭವಿಸುವುದಕ್ಕೆ ಸಾಧ್ಯವಾಗಲಾರದು ಎನ್ನತಕ್ಕಂಥ ಒಂದು ನಂಬಿಕೆ ಇದೆ.

ಶ್ರೀ ಜಿ. ರಾಜುಗೌಡ : ಎ.ಪಿ.ಎಂ.ಸಿ. ಯಲ್ಲಿ ದೊಡ್ಡ ಶೈತ್ಯಾಗಾರವನ್ನು ನಿರ್ಮಾಣ ಮಾಡಿ. ಅಲ್ಲಿ ಬೆಲೆ ಕುಸಿದಾಗ ಅದನ್ನು ಇಟ್ಟುಕೊಳ್ಳಬೇಕು. ಹಣ್ಣು, ಹೂವು ಮತ್ತು ಆಲೂಗೆಡ್ಡೆ, ಇಂಥಾದ್ದು ಕೆಡಬಾರದು. ಅದಕ್ಕೆ ಒಂದು ವ್ಯವಸ್ಥೆ ಮಾಡಿದಾಗ ಪರೋಕ್ಷವಾಗಿ ಒಂದು ಉಪಕಾರ ಮಾಡಿದ ಹಾಗೆ ಆಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ : ಪ್ರಪ್ರಥಮವಾಗಿ ನಮ್ಮ ಕೋಲ್ಡ್‌ಚೈನ್‌ನ್ನು, ಕೋಲ್ಡ್‌ಸ್ಟೋರೇಜ್‌ನ್ನು ಜಾಸ್ತಿ ಮಾಡಬೇಕು ಎನ್ನತಕ್ಕದ್ದು ಕೂಡ ಹೇಳಿದ್ದೇವೆ. ಕೋಲ್ಡ್ ಸ್ಟೋರೇಜ್ ಮಾಡಬೇಕೆಂದು ಹೇಳಿದಾಗ ಬಹುಶಃ ನಿಮ್ಮ ಭಾಗದಲ್ಲಿ ಕೂಡ ಸರ್ಕಾರ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ರೈತರೇ ಎ.ಪಿ.ಎಂ.ಸಿ. ವ್ಯಾಪ್ತಿಯಲ್ಲಿ ಸಹಕಾರ ಕ್ಷೇತ್ರದಿಂದ ಮಾಡಬೇಕಾಗುತ್ತದೆ. ದಯಮಾಡಿ ಮಾನ್ಯ ರಾಜುಗೌಡರು ಅಂತಹ ಪ್ರಯತ್ನ ಮಾಡುವುದಾದರೆ ವಿಶೇಷವಾದ ಸವಲತ್ತನ್ನು ಕೊಡತಕ್ಕಂಥ ಕೆಲಸ ಮಾಡುತ್ತೇವೆ. ಈಗಾಗಲೇ ನೂರು ಕೋಲ್ಡ್ ಸ್ಟೋರೇಜ್‌ಗಳನ್ನು ಮಾಡಬೇಕೆಂದು ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ರಾಜ್ಯದಲ್ಲಿರತಕ್ಕಂಥಾದ್ದು ಕೇವಲ 24 ಮಾತ್ರ. ಒಂದು ವ್ಯತ್ಯಾಸ ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಬೆಳೆಯತಕ್ಕಂಥ ಆಲೂಗಡ್ಡೆ ಸುಮಾರು 40 ಲಕ್ಷ ಟನ್‌ನಷ್ಟು. ಹರಿಯಾಣದಂಥ ಒಂದು

ರಾಜ್ಯದಲ್ಲಿ ಅಲ್ಲಿ 254 ಕೋಲ್ಡ್ ಸ್ಟೋರೇಜ್‌ಗಳು ಇವೆ. ನಮ್ಮಲ್ಲಿರತಕ್ಕದ್ದು ಕೇವಲ 24. ನೀವು ಹೇಳಿದ ಹಾಗೆ ಕೋಲ್ಡ್ ಚೈನ್. ಕೋಲ್ಡ್ ಸ್ಟೋರೇಜ್‌ಗಳನ್ನು ಜಾಸ್ತಿ ಮಾಡಬೇಕಾಗುತ್ತದೆ. ಸರ್ಕಾರ ವಿಶೇಷವಾಗಿ ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡ್‌ನಿಂದ ಕೊಡತಕ್ಕಂಥಾದ್ದರ ಜೊತೆಗೆ ಪವರ್ ಕೂಡ ಕಡಿಮೆ ಮಾಡಬೇಕೆಂದು ಕೂಡ ಇವತ್ತು ಯೋಜನೆ ಮಾಡಿರಬೇಕಾದರೆ ದಯಮಾಡಿ ಈ ಪ್ರಯತ್ನ ನಿಮ್ಮಿಂದಲೇ ಪ್ರಾರಂಭವಾದರೆ ಒಳ್ಳೆಯದಾಗುತ್ತದೆ. ಕೋಲ್ಡ್‌ಚೈನ್‌ನ್ನು ಎಸ್ಟಾಬ್ಲಿಶ್ ಮಾಡಿದಾಗ ರೈತರಿಗೆ ಸಹಾಯವಾಗುತ್ತದೆ ಎಂಬ ಮಾತನ್ನ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇಂತಹ ಒಂದು ಕೆಲಸವನ್ನು ತಾವು ಮಾಡಿದರೆ ಸರ್ಕಾರ ಖಂಡಿತವಾಗಿ ಸಹಾಯ ಮಾಡುವುದಕ್ಕೆ ಸಿದ್ಧವಾಗಿದೆ. ಮತ್ತು ನಮ್ಮ ನೀತಿಯಲ್ಲಿ ಕೂಡ ಬದಲಾವಣೆಯಾಗಬೇಕು. ಹಿಂದಿನ ಸರ್ಕಾರ ಕೂಡ ಕೆಲವು ಸವಲತ್ತುಗಳನ್ನು ಕೊಡತಕ್ಕಂಥಾದ್ದು ಮಾಡಿ ಮಧ್ಯದಲ್ಲಿ ನಿಲ್ಲಿಸತಕ್ಕಂಥ ಕೆಲಸ ಮಾಡಿತು. ಕೋಲ್ಡ್ ಸ್ಟೋರೇಜ್ ಎಸ್ಟಾಬ್ಲಿಶ್ ಮಾಡುವುದಕ್ಕೆ ಇವೆಲ್ಲವನ್ನೂ ಕೂಡ ರಿವ್ಯೂ ಮಾಡಿ ಸಮಗ್ರವಾದ ಒಂದು ನೀತಿಯನ್ನು ತರುತ್ತೇವೆ. ಆಮೇಲೆ ತಮ್ಮ ಎಲ್ಲ ಸಲಹೆಗಳನ್ನು ಖಂಡಿತವಾಗಿಯೂ ಗಮನದಲ್ಲಿಟ್ಟುಕೊಳ್ಳುತ್ತೇವೆ. ಆದರೆ ಇದು ಆಗಬೇಕಾಗಿರತಕ್ಕದ್ದು ರೈತರಿಂದ ಮಾತ್ರ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಒಣಬೇಸಾಯ ಇದ್ದು ತೊಗರಿಬೆಳೆ ನಮ್ಮ ಭಾಗದ ಮುಖ್ಯ ವಾಣಿಜ್ಯ ಬೆಳೆಯಾಗಿದೆ. ಇದನ್ನು ಬೆಳೆಯಲು ನಾವು ರೈತರು ರಸಗೊಬ್ಬರ, ಕ್ರಿಮಿನಾಶಕ ಔಷಧಿಗಳನ್ನು ಉಪಯೋಗಿಸಿ ಪ್ರತಿವರ್ಷ ಅನಾವೃಷ್ಟಿಯಿಂದಲೂ, ಅತಿವೃಷ್ಟಿಯಿಂದಲೂ ರೈತರು ನಷ್ಟವನ್ನು ಹೊಂದುತ್ತೇವೆ. ಯಾವಾಗಲೂ ಒಂದು ಕಾರ್ಖಾನೆಯ ಮಾಲೀಕರು ತಮ್ಮ ಮಾಲನ್ನು ತಯಾರು ಮಾಡಿ ಅದಕ್ಕೆ ತಗುಲಿದ ವೆಚ್ಚವನ್ನು ಅದರಲ್ಲಿ ಸೇರಿಸಿ ಮತ್ತು ಅವರ ಲಾಭವನ್ನು ಸಹ ಅದರಲ್ಲಿ ಸೇರಿಸಿ ಒಂದು ಬೆಲೆಯನ್ನು ನಿಗದಿಪಡಿಸುತ್ತಾರೆ. ಆದರೆ ನಮ್ಮ ಈ ಮಾಲನ್ನು ಬಜಾರಿಗೆ ಮಾರಾಟಕ್ಕೆ ತೆಗೆದುಕೊಂಡು ಹೋದರೆ ಹಳೇ ಮಾಲನ್ನು ಹರಾಜಿಗೆ ಇಡುವಂತೆ ಇಟ್ಟು ಅದಕ್ಕೆ ನೂರು ರೂಪಾಯಿ ವೆಚ್ಚವಾಗಿದ್ದರೂ ಸಹ 75 ರೂಪಾಯಿ ಆ ಹರಾಜಿನಲ್ಲಿ ಬಂದರೆ ನಾವು ರೈತರು ಹಣ ಪಡೆಯುವಾಗಲೂ ಸಹ ಬಜಾರಿನಲ್ಲಿ ಅಲೆದಾಡಿ, ತಿರುಗಾಡಿ ಹಣವನ್ನು, ಆ ಪಟ್ಟಿಯನ್ನು ತರಬೇಕಾಗುತ್ತದೆ. ಅದಕ್ಕಾಗಿ ನಮ್ಮ ತೊಗರಿ ಬೆಳೆಯತಕ್ಕಂಥ ಭಾಗದಲ್ಲಿ ತೊಗರಿ ಬೋರ್ಡ್‌ನ್ನು ಮಾಡಿ ಅದಕ್ಕೆ ಸರಿಯಾದ ಬೆಲ ಬರುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಈಗ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಕ್ರಿಮಿನಾಶಕಗಳನ್ನು ಬಳಸುವ ಪ್ರಮಾಣ ಬಹಳ ಜಾಸ್ತಿಯಾಗುತ್ತಿದೆ. ನಾನು ಗುಲ್ಬರ್ಗಾಕ್ಕೆ ಹೋದಾಗ ನೋಡಿದ್ದೆ. ನಮ್ಮ ಇಲಾಖೆಯವರು ಸಲಹೆ ಮಾಡತಕ್ಕದ್ದು ಎರಡು ಸಾರಿ - ಮೂರು ಸಾರಿ ಸ್ಪ್ರೇ ಮಾಡಿ ಎಂದರೆ ಎಂಟು ಸಾರಿ, ಹತ್ತು ಸಾರಿ ಮಾಡುತ್ತಾರೆ. ಅದು ದುಬಾರಿಯಾಗುತ್ತದೆ. ಹಾಗೆಯೇ ಬೆಳೆಯ ಇಳಿಕೆಯಾಗುತ್ತದೆ. ಅದಕ್ಕೆ ನಾವು ಇಲಾಖೆಯವರು ಕೊಡುವ ರೀತಿಯಲ್ಲಿ ಕ್ರಿಮಿನಾಶಕಗಳನ್ನು ಸ್ಪ್ರೇ ಮಾಡಿದರೆ ಯಾವ ಸಮಸ್ಯೆ ಬರುವುದಿಲ್ಲ. ಆದರೆ ಅನೇಕ ಸಾರಿ ರೈತರು ವಿಶೇಷವಾದ ಎಚ್ಚರಿಕೆ ಎಂದು ಹೇಳಿ ಕ್ರಿಮಿನಾಶಕಗಳನ್ನು ಹೊಡೆಯುವುದಕ್ಕೆ ಶುರು ಮಾಡಿ ಬಿಟ್ಟು ಬೆಳೆ ಹಾಳಾಗುತ್ತದೆ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಈಗಾಗಲೇ ನಮ್ಮಲ್ಲೇ ನೂರಕ್ಕೆ 22 ರಷ್ಟು ಪೆಸ್ಟಿಸೈಡ್ಸ್ ಈ ರಾಜ್ಯದಲ್ಲಿ ಖರ್ಚಾಗತಕ್ಕಂಥಾದ್ದು ತೊಗರಿ ಒಂದರಲ್ಲೇ. ಗುಲ್ಬರ್ಗಾ ಮತ್ತು ಬೀದರ್ ಭಾಗದಲ್ಲಿ ತೊಗರಿ ಬೆಳೆಗ ಅಪ್ಲಿಕೇಶನ್ ಆಗತಕ್ಕಂಥಾದ್ದು

ಸುಮಾರು 60-70 ಕೋಟಿಗೂ ಹೆಚ್ಚು. ಅಷ್ಟು ಪೆಸ್ಟಸೈಡ್ಸ್ ಅಲ್ಲಿ ಉಪಯೋಗಿಸ ತಕ್ಕಂಥ ಕೆಲಸ ಆಗುತ್ತಿದೆ. ಅದಕ್ಕೆ ಕಡಿಮಾಣವನ್ನು ಹಾಕಬೇಕಾದರೆ ಒಂದು ಹೊಸ ತಾಂತ್ರಿಕತೆಯನ್ನು ತರಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತದೆ. ಆದರೆ ತೊಗರೆ ಬೋರ್ಡ್ ಮಾಡ ಬೇಕು ಎನ್ನತಕ್ಕದ್ದು ಏನಿದೆ, ಇದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ತೊಗರಿಬೋರ್ಡ್ ಮಾಡುವುದರಿಂದಲೇ ಒಳ್ಳೆಯ ಬೆಳೆ ಬರುತ್ತದೆ ಎನ್ನತಕ್ಕದ್ದು ಇಲ್ಲ. ಉತ್ಪನ್ನದ ಬಗ್ಗೆ ಸ್ವಲ್ಪ ಮಟ್ಟಿಗೆ ಪ್ರೋತ್ಸಾಹ ಮಾಡುವುದನ್ನು ಬಿಟ್ಟರೆ, ಒಳ್ಳೆಯ ಬೆಲೆ ಬರುತ್ತದೆ ಎಂಬುದಿಲ್ಲ. ಆದರೂ ಕೂಡ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದಲ್ಲಿ ಆಯಿಲ್ ಟೆಕ್ನಾಲಜಿ ಮಿಷನ್ ಇರುವ ರೀತಿಯಲ್ಲಿ ಪಲ್ಸಸ್‌ಗೋಸ್ಕರ ಒಂದು ಟೆಕ್ನಾಲಜಿ ಮಿಷನ್ ಇದೆ. ಅದರ ವ್ಯಾಪ್ತಿಯಲ್ಲಿ ನೀವು ತೊಗರಿ ಮಂಡಳಿಯನ್ನು ಮಾಡಬೇಕೆಂಬ ಒತ್ತಾಯವನ್ನು ಕೂಡ ಈಗಾಗಲೇ ಮಾಡಿದ್ದೇವೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಸನ್ಮಾನ್ಯ ಉಪಾಧ್ಯಕ್ಷರೆ, ರೈತರ ಬಗ್ಗೆ ನಾವೆಲ್ಲರೂ ಚರ್ಚೆ ಮಾಡುತ್ತೇವೆ. ಮೊದಲು ರಾಜಕಾರಣಿಗಳು ಭಾಷಣ ಶುರು ಮಾಡಬೇಕಾದರ, ರೈತನೇ ಈ ದೇಶದ ಬೆನ್ನೆಲುಬು ಎಂದು ಹೇಳುತ್ತಾರೆ. ಆದರೆ, ರೈತನಿಗೆ ಬೆನ್ನೆಲುಬು ಇದೆಯೋ ಇಲ್ಲವೋ ಯಾರೂ ನೋಡಲೇ ಇಲ್ಲ. ಭತ್ತಕ್ಕೆ ಬೆಲೆ ಇಲ್ಲ. ಆದರೆ ಅಕ್ಕಿಗೆ ಬೆಲೆ ಇದೆ. ಕಾಫಿಗೆ ಬೆಲೆ ಇಲ್ಲ, ಕಾಫಿ ಕುಡಿಯು ವುದಕ್ಕೆ ಬೆಲೆ ಇದೆ. ಮೆಣಸಿನಕಾಯಿಗೆ ಬೆಲೆ ಇಲ್ಲ. ಮೆಣಸಿನಕಾಯಿ ಕೊಳ್ಳುವವನಿಗೆ ಗೊತ್ತು. ಅದರ ಖಾರ ಎಷ್ಟಿದೆ ಎಂಬುದು. ತೊಗರಿಗೆ ಬೆಲೆ ಇಲ್ಲ, ತೊಗರಿ ಬೇಳೆಗೆ ಬೆಲೆ ಇದೆ. ಹಾಗಾದರೆ, ಇದು ಎಲ್ಲಿ ಹೋಗುತ್ತಾ ಇದೆ. ರೈತ ಬೆಳೆದಂಥ ವಸ್ತುವಿಗೆ ಬೆಲೆ ಸಿಗಲಿಲ್ಲ. ಆದರೆ, ರೈತ ಕೊಳ್ಳತಕ್ಕ ವಸ್ತುಗಳಿಗೆ ಎಲ್ಲಾ ಕಡೆ ಬೆಲೆ ಇದೆ. ಹಾಗಾದರೆ, ಇದು ಎಲ್ಲಿಯೋ ಒಂದು ಕಡೆಗೆ ಹೋಗುತ್ತಾ ಇದೆ. ಮಧ್ಯವರ್ತಿಗಳು ಏನಿದ್ದಾರೆ, ಇವರ ಬಗ್ಗೆ ಸರ್ಕಾರ ಹೆಚ್ಚಿನ ಗಮನವಿಡಬೇಕು. ಎರಡನೆಯದು, ರೈತನಿಗೆ ಎಷ್ಟು ಜನ ಶತೃಗಳು? ಹವಾಮಾನ, ಕಳಪೆ ಬೀಜ, ಕಳಪೆ ಔಷಧಿ ಇವೆಲ್ಲದರ ಜೊತೆಗೆ ವ್ಯವಸಾಯದ ಮಾಹಿತಿ ಇಲ್ಲ. ಯಾವುದೋ ಒಂದು ಕಾಲದಲ್ಲಿ ಏನೋ ಒಂದು ಬೆಳೆದ ಎಂದು, ಇವತ್ತೂ ಅದನ್ನೇ ಬೆಳೆಯುವುದು. ಒಂದು ಎಕರೆಗೆ ಒಂದು ಕ್ವಿಂಟಾಲ್ ಬಂದರೂ ಅದೇ, 5 ಕ್ವಿಂಟಾಲ್ ಬಂದರೂ ಅದೇ. ನಾವು ಭತ್ತ ಬೆಳೆಯಬೇಕೆಂದರೆ ಭತ್ತವನ್ನೇ ಬೆಳೆಯಬೇಕು. ಯಾವ ಟೈಮಿನಲ್ಲಿ ಭತ್ತ ಬೆಳೆಯಬೇಕು, ಯಾವ ಜಾಗದಲ್ಲಿ, ಯಾವ ಏರಿಯಾದಲ್ಲಿ ಏನು ಬೆಳೆ ಬೆಳೆಯಬೇಕೆಂಬ ಸರಿಯಾದ ಮಾಹಿತಿ ರೈತರಿಗೆ ಎಲ್ಲೂ ಬರಲಿಲ್ಲ. ರೈತನಿಗೆ ಈ ಮಾಹಿತಿ ಬಂದರೆ, ಅವನು ಆಯಾ ಕಾಲದಲ್ಲಿ ತಕ್ಕಂಥ ಬೆಳೆಯನ್ನು ಬೆಳೆಯಲು ಶುರು ಮಾಡುತ್ತಾನೆ. ಇವತ್ತು ಹಾಸನ ಜಿಲ್ಲೆಯ ಭಾಗದಲ್ಲಿ, ಆಲೂಗಡ್ಡೆ ಎಂದರೆ ಬರೀ ಆಲೂಗೆಡ್ಡೆಯನ್ನೇ ಬೆಳೆಯುತ್ತಾರೆ. ಆದರೆ, ಈ ಆಲೂಗಡ್ಡೆಗೆ ರೇಟ್ ಇಲ್ಲ. ಸರ್ಕಾರ ಈ ಆಲೂಗಡ್ಡೆಗೆ ರೇಟ್ ಕೊಡಬೇಕಾದರೆ ಪರದಾಡಬೇಕಾಗುತ್ತದೆ. ಇದರ ಬಗ್ಗೆ ಹವಾಗುಣಕ್ಕೆ ತಕ್ಕಂಥ, ಸರಿಯಾದ ಬೆಳೆ ಬೆಳೆಯತಕ್ಕ ವ್ಯವಸ್ಥೆಯನ್ನು ಸರ್ಕಾ ಮಾಡಿಕೊಡಬೇಕಾಗುತ್ತದೆ. ಜೊತೆಗೆ ಈಗತಾನೇ ಪ್ರಸ್ತಾಪ ಮಾಡಿದರು. ಅವನು ಎಲ್ಲವನ್ನೂ, ಯಾರಿಗೋಸ್ಕರ ಮಾಡುತ್ತಾನೆ. ತನ್ನ ಹೊಟ್ಟೆಗೋಸ್ಕರ ಮತ್ತು ಇತರರ ಹೊಟ್ಟೆಗೋಸ್ಕರ ಮಾಡುತ್ತಾನೆ. ಬೆಳಿಗ್ಗೆ ಎದ್ದು ಒಬ್ಬ ರೈತ ನೇಗಿಲನ್ನು ಹೆಗಲಿಗೆ ಹಾಕಿಕೊಂಡು ಹೊಲಕ್ಕೆ ಹೋದರೆ, ಹೊಲದ ಆ ಬದಿಯಿಂದ ಈ ಬದಿ, ಈ ಬದಿಯಿಂದ ಆ ಬದಿಗೆ ಅದೆಷ್ಟು ಮೀಟರ್ ನಡೆಯುತ್ತಾನೆಂದು ಕಾಲಿಗೆ ಮೀಟರ್ ಹಾಕಿದರೆ ಗೊತ್ತಾಗುತ್ತದೆ. ಇಷ್ಟೆಲ್ಲಾ ಶ್ರಮಪಟ್ಟು ಬೆಳೆದಂಥ ರೈತನ ಬೆಳೆಗೆ ಏನಾದರೊಂದು ಕಾರಣ, ಅದು ಅತಿವೃಷ್ಟಿ ಇರಬಹುದು, ಅನಾವೃಷ್ಟಿ ಇರಬಹುದು, ಬೆಂಕಿ ಇರಬಹುದು ಅಥವಾ ಆನೆ ತುಳಿತಕ್ಕೆ ಒಳಗಾಗಿ ಬಂದಾಗ, ಸರ್ಕಾರ ಐದುನೂರು ರೂಪಾಯಿ ಕೊಡುತ್ತೇವೆಂದು ಹೇಳಿದರೆ, ಏತಕ್ಕೋಸ್ಕರ ಈ ಐನೂರು ರೂಪಾಯಿ

ಕೊಡಬೇಕು? ಬೆಳೆ ಬೆಳೆದು ಪೂರ್ತಿ ಎಲ್ಲಾ ಹಾಳಾಗಿವೆ, ಈ ದುಡ್ಡು ತೆಗೆದುಕೊಂಡು ಇದರಲ್ಲಿ ಏನಾದರೂ ವಿಷಗಿಷ ಸಿಕ್ಕಿದರೆ ತೆಗೆದುಕೊಂಡು ನೀನೂ ಹೋಗು ಎನ್ನುವ ಕಾರಣಕ್ಕೆ ಐನೂರು ರೂಪಾಯಿ ಕೊಡುತ್ತದೆಯೇ? ಆ ತಹಶೀಲ್ದಾರ ಐನೂರು ರೂಪಾಯಿ ಕೊಟ್ಟವಂತೆ. ರೈತನಿಗೆ ನಷ್ಟವಾಗಿರುವುದರಲ್ಲಿ ಸರಿಯಾಗಿ ಅರ್ಧ ಭಾಗವನ್ನಾದರೂ ಕೊಟ್ಟು, ಅವನು ಮುಂದೆ ಬದುಕತಕ್ಕ ವ್ಯವಸ್ಥೆಯನ್ನಾದರೂ ಮಾಡಬೇಕು. ಅವನು ತನಗೋಸ್ಕರ ಬೆಳೆಯುವುದಿಲ್ಲ, ಇತರರಿಗೋಸ್ಕರ ಬೆಳೆಯುತ್ತಾನೆ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು, ಅದರ ಬಗ್ಗೆ ಸ್ವಲ್ಪ ಹೆಚ್ಚು ಗಮನಹರಿಸಿ ಅವನಿಗೆ ಮಾಹಿತಿ ಮತ್ತು ಪರಿಹಾರ ಸಿಗುವ ಕಾರ್ಯ ಮಾಡಬೇಕು. ರೈತನಿಗೆ ಬರೀ ಭಾಷಣ ಸಾಲುವುದಿಲ್ಲ. ತಾವು, ರೈತ ಸಂಘಟನೆಯಾಗ ಲಿಲ್ಲವೆಂದು ಹೇಳಿದಿರಿ. ರೈತ ಸಂಘಟನೆಯಾಗಿ ತನ್ನ ಹೊಟ್ಟೆಗಾಗಿ ಮಾತ್ರ ಈ ವರ್ಷ ಬೆಳೆದುಕೊಳ್ಳು ತ್ತೇನೆ. ಬಾಕಿಯವರಿಗೆ ಬೆಳೆಯುವುದಿಲ್ಲವೆಂದು ಏನಾದರೂ ತೀರ್ಮಾನ ಮಾಡಿ ಬಿಟ್ಟರೆ ಇಡೀ ದೇಶ ಅಲ್ಲೋಲಕಲ್ಲೋಲವಾಗುತ್ತದೆ. ಇವತ್ತು ಇಡೀ ದೇಶ ಬದುಕಿರುವುದೇ ರೈತನಿಂದ. ಆದರೆ, ಈ ರೈತನ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಬೇಕು. ತಾವೂ ಕೂಡ ರೈತರಿದ್ದೀರಿ. ಪತ್ರಿಕೆಗಳಲ್ಲಿ ಮತ್ತು ತಮ್ಮ ಮಾತುಗಳಲ್ಲಿ ನೋಡಿದಾಗ ನನಗೆ ಅನಿಸುತ್ತದೆ. ಏನೋ ಒಂದು ಹೆಜ್ಜೆ, ಎಲ್ಲಿಯೋ ಹೋಗುತ್ತಾ ಇದೆ ಪರವಾಗಿಲ್ಲ ಎಂಬಂತಿದೆ. ಅದಕ್ಕೆ ಇನ್ನೂ ಸ್ವಲ್ಪ ವೇಗ ಕೊಟ್ಟು ರೈತನ ಸಮಸ್ಯೆಗಳನ್ನು ಪರಿಹರಿಸತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ರೈತ ದೇಶಕ್ಕೆ ಅಲ್ಲದಿದ್ದರೂ ಕೂಡ, ಅವನು ಬದುಕುವುದಕ್ಕೋಸ್ಕರ ಅವನು ಸಂಘಟನೆಯಾಗಲೇಬೇಕು. ಆ ಸಂಘಟನೆ, ಆಶಕ್ತಿ ಬಂದಾಗ ದೇಶಕ್ಕೆ ಏನು ಅನಾಹುತವಾ ಗುತ್ತದೆ ಎಂಬುದನ್ನು ನೋಡೋಣ. ಒಂದು, ಮಧ್ಯವರ್ತಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ವ್ಯವಸ್ಥೆಯಲ್ಲಿ ಏನಾಗಿದೆ, ಎ.ಪಿ.ಎಂ.ಸಿ.ಗಳು ಇವೆ, ಅಲ್ಲಿ ಮಧ್ಯವರ್ತಿಗಳ ಪಾತ್ರ ಜಾಸ್ತಿ ಇರುತ್ತದೆ. ಆ ಮಧ್ಯವರ್ತಿಗಳಿಂದಲೇ ನಮ್ಮ ರೈತರಿಗೆ ಒಳ್ಳೆಯ ಬೆಲೆ ಸಿಗುವುದಕ್ಕೆ ಸಾಧ್ಯವಿಲ್ಲ. ನಿಜವಾಗಿಯೂ ಬೆಳೆ ದಂಥ ಬೆಲೆ ಸಿಗುವುದಕ್ಕೆ ಸಾಧ್ಯವಿಲ್ಲ ಬೆಳೆದಂಥ ರೈತರಿಗೆ ಮತ್ತು ಕನ್‌ಸ್ಯೂಮರ್‌ಗೂ ಸೇರಬೇಕಾದರೆ ಐದು ಹಂತದಲ್ಲಿ ಅದು ವ್ಯತ್ಯಾಸವಾಗುತ್ತದೆ. ಲಾಭಾಂಶ ಅಲ್ಲಿಗೆಲ್ಲಾ ಷೇರ್ ಆಗುತ್ತದೆ. ರೈತರಿಗೆ ಸಿಗುವುದಿಲ್ಲ. ಅದಕ್ಕೆ ನಮ್ಮ ಕೋ-ಆಪರೇಟಿವ್ ಸಿಸ್ಟಂ ಎಲ್ಲಿಯವರೆಗೆ ಭದ್ರತೆ ಆಗುವುದಿಲ್ಲ, ನಮ್ಮ ಕ್ರೆಡಿಟ್ ಸಿಸ್ಟಂ ಇಂಪ್ರೂವ್ ಆಗುವುದಿಲ್ಲ. ಅಲ್ಲಿಯವರೆಗೆ ರೈತರಿಗೆ ನಿರಂತರವಾಗಿ ಶೋಷಣೆಯಾವುದು ತಪ್ಪುವುದಿಲ್ಲ. ಆ ಕಾರಣಕ್ಕೆ ನಾವು ಹೊಸ ಹೊಸ ಯೋಜನೆಗಳನ್ನು ಹಾಕತಕ್ಕ ಕೆಲಸವನ್ನು ಕೂಡ ಮಾಡುತ್ತಿದ್ದೇವೆ. ರೈತರಿಗೆ ಬೆಳೆ ಹಾಳಾದಾಗ ಆಗತಕ್ಕ ತೊಂದರೆಗಳ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಸಚಿವ ಸಂಪುಟದ ಮುಂದೆ ಇದೆ, ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಡಿ.ಸಿ. ತಮ್ಮಣ್ಣ : ಸನ್ಮಾನ್ಯ ಮುಖ್ಯ ಮಂತ್ರಿಗಳು ವ್ಯವಸಾಯ ರಂಗದಲ್ಲಿ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ, 3 ಸಾವಿರ ಟನ್ ಉತ್ಪಾದನೆ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಇದು ನಿಜವಾಗಿಯೂ ಸ್ವಾಗತ ಮಾಡತಕ್ಕ ವಿಚಾರ. ಆದರೆ, ನಾವು ಬೇರೆ ರಾಷ್ಟ್ರಗಳಿಗೆ ಹೋಲಿಸಿಕೊಂಡಾರೆ, 50 ವರ್ಷಗಳ ಹಿಂದೆ ಚೈನಾ ಮತ್ತೆ ಭಾರತಕ್ಕಿದ್ದಂಥ ವ್ಯತ್ಯಾಸ ಆಗ, ಭಾರತ ಮತ್ತು ಚೈನಾ 50 ದಶಲಕ್ಷ ಟನ್ ಆಹಾರ ಉತ್ಪಾದನೆ ಮಾಡುತ್ತಿದ್ದರು. ಇವತ್ತಿವನದಿವಸ ನಾವು ಹೋಲಿಕೆ ಮಾಡಿದರೆ ಚೈನಾ 500 ದಶಲಕ್ಷ ಟನ್ನಿಗೆ ಹೋಗಿದೆ, ಭಾರತ ಇನ್ನೂ 196 ದಶಲಕ್ಷ ಟನ್‌ಗಳಲ್ಲಿಯೇ ಇದೆ. ನಮ್ಮ ಬೆನ್ನನ್ನು ನಾವೇ

ಚಪ್ಪರಿಸಿಕೊಂಡು, ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದ್ದೇವೆಂದು ಹೇಳಿಕೊಂಡರೆ ಸಾಲುವುದಿಲ್ಲ. ಆಹಾರ ಉತ್ಪಾದನೆಯಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಆಗಬೇಕಾಗಿದೆ. ಏಕೆಂದರೆ, ಭಾರತ ಕೃಷಿ ಪ್ರಧಾನವಾದಂಥ ದೇಶ. ಅದರಲ್ಲೂ ಕರ್ನಾಟಕ ಕೃಷಿ ಪ್ರಧಾನವಾದಂಥ ರಾಜ್ಯ. ಈ ರಾಜ್ಯದಲ್ಲಿ ಇನ್ನೂ ಹೆಚ್ಚಿಗೆ ಆಹಾರ ಉತ್ಪಾದನೆ ಆಗಬೇಕು. ಇದು ಹೆಚ್ಚಾಗಬೇಕಾದರೆ, ನಾವು ಒಳ್ಳೆಯ ತಳಿಯ ಬೀಜಗಳನ್ನು ರೈತರಿಗೆ ಒದಗಿಸುವುದರಲ್ಲಿ ನೆರವಾಗಬೇಕು. ನಾನು ಮಂಡ್ಯ ಜಿಲ್ಲೆಯಿಂದ ಬಂದವನಾಗಿದ್ದೇನೆ. ಭತ್ತಮತ್ತು ಕಬ್ಬು ನಮ್ಮ ಮುಖ್ಯ ಬೆಳೆ. ಮಂಡ್ಯ ಜಿಲ್ಲೆಯಲ್ಲಿ ನಾವು ಎಲ್ಲಿ ಹೋದರೂ ಕೂಡ 25-30ಪರ್ಸೆಂಟ್ ಆ ಭತ್ತದ ಗದ್ದೆಯ ಮೇಲೆ ಗಂಡು ಭತ್ತವನ್ನು ನೋಡುತ್ತೇವೆ. ಇದರಿಂದ ರೈತನಿಗಷ್ಟೇ ಅಲ್ಲ ನಷ್ಟ, ರಾಜ್ಯಕ್ಕೂ ನಷ್ಟ, ರಾಷ್ಟ್ರಕ್ಕೂ ನಷ್ಟ. ಈ ದಿಸೆಯಲ್ಲಿ ನಮ್ಮ ವ್ಯವಸಾಯ ಇಲಾಖೆ ಏನಿದೆ, ಒಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ರೈತರಿಗೆ ಒಳ್ಳೆಯ ಕ್ವಾಲಿಟಿ ಸೀಡ್ಸ್ ಸಿಗುವಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಮತ್ತೆ ಷುಗರ್-ಕೇನ್ ವಿಚಾರದಲ್ಲಿ ಮತ್ತೊಂದು ಹೇಳುವುದಾದರೆ, ಮಂಡ್ಯ ಜಿಲ್ಲೆಯ ನನ್ನ ಕ್ಷೇತ್ರದಲ್ಲಿರುವ ಒಂದು ಸಕ್ಕರೆ ಕಂಪನಿಯಲ್ಲಿ 7 ಲಕ್ಷ ಬ್ಯಾಗ್ ಷುಗರ್ ಕಂಪನಿ ಆವರಣದಲ್ಲಿದೆ. 75 ರಿಂದ 80 ಕೋಟಿ ರೂಪಾಯಿ ಸಕ್ಕರೆ ಮಾರಾಟವಾಗದೇ ಉಳಿದಿದೆ. ಸ್ವದೇಶ ಘೋಷಣೆಯಿಂದ ಅಧಿಕಾರಕ್ಕೆ ಬಂದ ಕೇಂದ್ರ ಸರ್ಕಾರ ವಿದೇಶದಿಂದ ಸಕ್ಕರೆಯನ್ನು ಆಮದು ಮಾಡಿಕೊಂಡು, ಸ್ವದೇಶದಲ್ಲೇ ಸಾಕಷ್ಟು ಸಕ್ಕರೆ ಇದ್ದರೂ ಕೂಡ ರೈತರ ಬೆನ್ನೆಲುಬನ್ನು ಈಗಾಗಲೇ ಮುರಿದಿದ್ದಾರೆ. ಅದರಿಂದ ನಾನು ಸರ್ಕಾರವನ್ನು ಕೇಳುವುದಿಷ್ಟೆ. ರೈತರಿಗೆ ಅನುಕೂಲವಾಗಬೇಕಾದರೆ, ಸಕ್ಕರೆ ಕಂಪನಿಗಳ ಬೆಂಬಲಕ್ಕೂ ನಿಂತು ಸಕ್ಕರೆ ಮಾರಾಟವಾಗುವವರೆಗೆ, ಬಡ್ಡಿರಹಿತ ಸಾಲವನ್ನು ಕೊಡಬೇಕು... ಮತ್ತು ಅವರಿಗೆ ಈ ಮೂಲಕ ನೆರವಾಗಬೇಕು.

ಉಪಾಧ್ಯಕ್ಷರು : ಷುಗರ್ ವಿಚಾರವಾಗಿ ಮುಂದೆ ಕ್ಲಾರಿಫಿಕೇಷನ್ ಕೇಳುವಿರಂತೆ. ಈಗ ಅದರ ಅವಶ್ಯಕತೆ ಇಲ್ಲ. ಈಗ ವ್ಯವಸಾಯಕ್ಕೆ ಸಂಬಂಧಪಟ್ಟಿದ್ದು ಮಾತ್ರ ಕೇಳಿ.

ಶ್ರೀ ಟಿ. ಬಿ. ಜಯಚಂದ್ರ : ಮಂಡ್ಯದಿಂದ ಬಂದಿರತಕ್ಕ ಮಾನ್ಯ ತಮ್ಮಣ್ಣನವರ ಪ್ರಶ್ನೆ ನನಗೆ ಚೆನ್ನಾಗಿ ಅರ್ಥವಾಗಿದೆ. ನಿಮ್ಮ ಮಂಡ್ಯದಲ್ಲಿ ಸಾಯಿಲ್ ಡಿಗ್ರೇಡ್ ಆಗಿದೆ, ಕ್ರಾಪಿಂಗ್ ಪ್ಯಾಟ್ರನ್ ಚೇಂಜ್ ಆಗಬೇಕು. ಇಳುವರಿ ಸಾಕಷ್ಟು ರೀತಿಯಲ್ಲಿ ಕಡಿಮೆಯಾಗಿದೆ. ಮಂಡ್ಯ ಭಾಗದಲ್ಲಿರತಕ್ಕ ಸುಮಾರು ಎರಡೂವರೆ ಲಕ್ಷ ಎಕರೆ ಅಚ್ಚುಕಟ್ಟಿನಲ್ಲೂ ಸಹಿತ ರೈತರಿಗೆ ಏನೂ ಗಿಟ್ಟತಕ್ಕ ಪರಿಸ್ಥಿತಿ ಇಲ್ಲ. ಕ್ರಾಪಿಂಗ್ ಪ್ಯಾಟ್ರನ್ ಚೇಂಜ್ ಮಾಡಬೇಕಾದರೆ, ಅದು ಸ್ವಲ್ಪ ಕಷ್ಟವಾಗುತ್ತದೆ. ಇಲಾಖೆಯವರು ಸಲಹೆ ಕೊಡುತ್ತಾರೆ, ಅದನ್ನು ರೈತರು ಅನುಸರಿಸುವುದಿಲ್ಲ. ಇವೆಲ್ಲಾ ಪರಿಸ್ಥಿತಿಗಳು ಇವೆ. ಬಹುಶಃ ಕ್ರಾಂತಿಕಾರವಾದ ಬದಲಾವಣೆ ಮಂಡ್ಯದವರೇ ಮುಖ್ಯಮಂತ್ರಿಗಳಾದಾಗ ಆಗತಕ್ಕಂಥ ಸಂದರ್ಭಗಳು ಇವೆ. ಅದಕ್ಕೆ ಅನೇಕ ತರವಾದ ಯೋಜನೆಗಳು ಇವೆ. ನಮಗೆ ಕಾಲ ಇಲ್ಲ ಇಲ್ಲದೇ ಹೋಗಿದ್ದರೆ ನಾನು ಎಲ್ಲವನ್ನೂ ಹೇಳುತ್ತಾ ಇದೆ. ಅಂತಹ ಕೆಲಸವನ್ನು ಖಂಡಿತವಾಗಿಯೂ ಮಾಡೋಣ. ಆದರೆ, ಕಬ್ಬಿನ ಬಗ್ಗೆ ತಾವು ಪ್ರಸ್ತಾಪ ಮಾಡಿದಿರಿ. ಮಾನ್ಯ ಸಕ್ಕರೆ ಸಚಿವರು ಮಾತನಾಡುವಂಥ ಸಂದರ್ಭದಲ್ಲಿ ಉತ್ತರವನ್ನು ಕೊಡುತ್ತಾರೆ.

ಉಪಾಧ್ಯಕ್ಷರು : ನಾನು ಈಗ ಈ ಕೃಷಿ ಇಲಾಖೆಯ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕು ತ್ತೇನೆ. ಪ್ರಸ್ತಾವ ಏನೆಂದರೆ,

31-3-2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ :01 (ಕೃಷಿ)ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ :01 ಕೃಷಿ (ಬಯಲು ಸೀಮೆ ಅಭಿವೃದ್ಧಿ ಮಂಡಳಿ ಹೊರತುಪಡಿಸಿ)

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಕೃಷಿ (ಬಯಲು ಸೀಮೆ ಅಭಿವೃದ್ಧಿ ಮಂಡಳಿ ಹೊರತುಪಡಿಸಿ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 335,81,29,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 12,04,35,000 ರೂಪಾಯಿಗಳಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಬೇಡಿಕೆ ಸಂಖ್ಯೆ -2

ತೋಟಗಾರಿಕೆ ಇಲಾಖೆ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ.

+ಶ್ರೀ ಆಲ್ಲಂ ವೀರಭದ್ರಪ್ಪ (ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ವಿಚಾರದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಪ್ರತಿ ಜಿಲ್ಲೆಗಳಿಗೆ, ತಾಲ್ಲೂಕು ಗಳಿಗೆ ಹೋಗಿ ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಮಾಡಬೇಕೆಂದು ಶ್ರಮಿಸಿರುವವರಲ್ಲಿ ಡಾ: ಮರೀಗೌಡರ ಕೊಡುಗೆ ಬಹಳ ಇದೆ. ಭಾರತ ದೇಶದಲ್ಲಿ ಬಹಳಷ್ಟು ರಾಜ್ಯದಲ್ಲಿ ತೋಟಗಾರಿಕೆಯ ಬೆಳವಣಿಗೆಯನ್ನು ನೋಡಿದರೆ ನಮ್ಮ ರಾಜ್ಯ ಎರಡನೇ ಸ್ಥಾನದಲ್ಲಿದೆ. ನಮ್ಮ ರಾಜ್ಯದಲ್ಲಿ ತೋಟಗಾರಿಕೆಯ ವಿಸ್ತೀರ್ಣ 17ಲಕ್ಷ ಹೆಕ್ಟೇರ್ ಇದೆ. ತೋಟಗಾರಿಕೆ ಬೆಳೆಯ ಉತ್ಪಾದನೆ ಸುಮಾರು 5,319 ಕೋಟಿ ರೂಪಾಯಿಗಳು ನಮ್ಮ ರಾಜ್ಯದ ಬೊಕ್ಕಸಕ್ಕೆ ಸಿಗುತ್ತದೆ. ಕಳೆದ ಐದು ವರ್ಷಗಳಲ್ಲಿ ಇಪ್ಪತ್ತು ಪರ್‌ಸೆಂಟ್ ತೋಟಗಾರಿಕೆಯ ಅಭಿವೃದ್ಧಿಯಾಗಿದೆ. ಜೊತೆಗೆ ಉತ್ಪಾದನೆಯು ಸಹ ಜಾಸ್ತಿಯಾಗಿದೆ. ನಮ್ಮ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಸುಮಾರು 14-15 ಪರಸೆಂಟ್ ಇದೆ. ನಾವು ಕೃಷಿ ಇಲಾಖೆ ಮತ್ತು ತೋಟಗಾರಿಕೆ ಬಗ್ಗೆ ಆಲೋಚನೆ ಮಾಡಿ ನೋಡಿದಾಗ ಬೆಳೆ ಏನು ಬರುತ್ತದೆ ಅದರಲ್ಲಿ ನಲವತ್ತು ಪರ್‌ಸೆಂಟ್